ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಶೋಧನಾ ನಿಬಂಧ

"ಜಿ.ಎಸ್. ಶಿವರುದ್ರಪ್ಪ ಅವರ ಕವಿತೆಗಳಲ್ಲಿ ವೈಚಾರಿಕ ನಿಲುವುಗಳು"

(ಆಯ್ದ ಕವಿತೆಗಳಲ್ಲಿ)

ಸಂಶೋಧನಾ ವಿದ್ಯಾರ್ಥಿ

ನೋಂದಣಿ ಸಂಖ್ಯೆ: KVMBKS-0068[illegible]4

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಶೋಧನಾ ನಿಬಂಧ

"ಜಿ.ಎಸ್. ಶಿವರುದ್ರಪ್ಪ ಅವರ ಕವಿತೆಗಳಲ್ಲಿ ವೈಚಾರಿಕ ನಿಲುವುಗಳು"

(ಆಯ್ದ ಕವಿತೆಗಳಲ್ಲಿ)

ಸಂಶೋಧನಾ ವಿದ್ಯಾರ್ಥಿ

ನೋಂದಣಿ ಸಂಖ್ಯೆ: KVMBKS-0068 4

[KVMBKS-00684)

ಸಂಶೋಧನಾ ವಿದ್ಯಾರ್ಥಿ - ನಾಗೇಶ ಬಿ
ಮಾರ್ಗದರ್ಶಕರು — ಡಾ.ಸುರೇಶ ಪಾಟೀಲ ಬಿ.

ಕಾವ್ಯಮಂಡಲ, ಬೆಂಗಳೂರು.

ದೃಢೀಕರಣ ಪತ್ರ

KVMBKS-00683 ರವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ "ಜಿ.ಎಸ್.ಶಿವರುದ್ರಪ್ಪ ಅವರ ಕವಿತೆಗಳಲ್ಲಿ ವೈಚಾರಿಕ ನಿಲುವುಗಳು" (ಆಯ್ದ ಕವಿತೆಗಳಲ್ಲಿ) ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ

ಸ್ಥಳ: ಬೆಂಗಳೂರು

ಪ್ರಮಾಣ ಪತ್ರ

"ಜಿ.ಎಸ್. ಶಿವರುದ್ರಪ್ಪ ಅವರ ಕವಿತೆಗಳಲ್ಲಿ ವೈಚಾರಿಕ ನಿಲುವುಗಳು" (ಆಯ್ದ ಕವಿತೆಗಳಲ್ಲಿ) ಎಂಬ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ವಿಷಯವಾಗಿ ಇದುವರೆಗೂ ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

Nagesha. T.


KVMBKS-006823

ಸಂಶೋಧನಾ ವಿದ್ಯಾರ್ಥಿ

ದಿನಾಂಕ:

ಸ್ಥಳ: ಬೆಂಗಳೂರು.

ಪರಿವಿಡಿ



ಜಿ.ಎಸ್. ಶಿವರುದ್ರಪ್ಪರವರ 'ಕಿರುಪರಿಚಯ'

ಜನನ ಫೆಬ್ರವರಿ 07, 1926 ಶಿವಮೊಗ್ಗ ಜಿಲ್ಲೆಯ ಈಸೂರಿನಲ್ಲಿ. ಕನ್ನಡ ಅಧ್ಯಾಪಕರಾಗಿ ಜೀವನ ಪಥವನ್ನಾರಂಭಿಸಿದ ಶ್ರೀಯುತರು ಕನ್ನಡ ಸಾಹಿತ್ಯ ಕ್ಷೇತ್ರದ ವಿವಿಧ ಪ್ರಕಾರಗಳಲ್ಲಿ ತಮ್ಮ ಬರವಣಿಗೆಯನ್ನು ಮಾಡಿದ್ದಾರೆ. ಕವಿಯಾಗಿ ಇವರು ಸುಮಾರು 11 ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಸಾಮಗಾನ', 'ಚೆಲುವು ಒಲವು', 'ಅನಾವರಣ', 'ದೇವಶಿಲ್ಪ', 'ದೀಪದ ಹೆಜ್ಜೆ', 'ತೆರದದಾರಿ', 'ಕಾರ್ತಿಕ್', 'ಪ್ರೀತಿ ಇಲ್ಲದ ಮೇಲೆ', 'ಗೋಡೆ' ಇವು ಇವರ ಕವನ ಸಂಕಲನಗಳು. 'ಕರ್ಮಯೋಗಿ' ಎಂಬ ಕೃತಿ ಸಿದ್ಧರಾಮನನ್ನು ಕುರಿತ ಕಾದಂಬರಿ.

ಮಾಸ್ಕೊದಲ್ಲಿ 22 ದಿನ, ಗಂಗೆಯ ಶಿಖರಗಳಲ್ಲಿ, ಅಮೆರಿಕಾದಲ್ಲಿ ಕನ್ನಡಿಗ ಇವು ಇವರ ಉತ್ತಮ ಪ್ರವಾಸ ಕಥನಗಳು. ವಿಮರ್ಶಾ ಕ್ಷೇತ್ರದಲ್ಲಿ ಜಿ.ಎಸ್.ಎಸ್.ರವರು 'ಪರಿಶೀಲನ'ದಿಂದ ಮೊದಲಾಗಿ 'ಗತಿಬಿಂಬ', 'ನವೋದಯ', 'ಅನುಕರಣ', 'ಪ್ರತಿಕ್ರಿಯೆ' ಮತ್ತು 'ಬೆಡಗು'ವರೆಗಿನ ಕೃತಿಗಳಲ್ಲಿ ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಸಾಹಿತ್ಯ ಕೃತಿಗಳ ಬಗ್ಗೆ ಒಂದು ಸಮರ್ಥವಾದ ಒಳನೋಟವನ್ನು ತೆರೆಯುತ್ತವೆ. ಇವರ ಮೀಮಾಂಸಾ ಕೃತಿಗಳಾದ 'ಕಾವ್ಯಾರ್ಥ ಚಿಂತನ', 'ಮಹಾಕಾವ್ಯ ಸ್ವರೂಪ', 'ಸೌಂದರ್ಯ ಸಮೀಕ್ಷೆ' (ಪಿಹೆಚ್.ಡಿ. ಪ್ರಬಂಧ) ಕನ್ನಡ ಕವಿಗಳ ಕಾವ್ಯ ಕಲ್ಪನೆ. ಇವು ಮುಖ್ಯವು. ಚತುರಂಗ, ಪಕೀರ ಮೋಹನ ಸೇನಾಪತಿ ಇವರ ಅನುವಾದಗಳು.

ಹೀಗೆ ಕನ್ನಡ ಸಂಸ್ಕೃತಿಯ ಚಲನಶೀಲತೆಗೆ ತಮ್ಮ ಕೊಡುಗೆ ನೀಡುತ್ತ ಬಂದಿರುವ ಇವರು, ವಿವಿಧ ಗೌರವ, ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಅವರ ಮಾಸ್ಕೊದಲ್ಲಿ 22 ದಿನ ಕೃತಿಗೆ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ ದೊರೆಯಿತು. 1982ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ, 1984ರಲ್ಲಿ 'ಕಾವ್ಯಾರ್ಥ ಚಿಂತನ'ದ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಇವುಗಳಲ್ಲದೆ 1992ರಲ್ಲಿ ದಾವಣಗೆರೆಯಲ್ಲಿ ನಡೆದ 61ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, 1987ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿಯೂ ಸಾಹಿತ್ಯ ವಿಚಾರ ಸಂಕಿರಣ, ಪುಸ್ತಕ ಪ್ರಕಟಣೆಗಳಿಗೆ ಚಾಲನೆ ಕೊಟ್ಟವರಾಗಿದ್ದಾರೆ. ಕರ್ನಾಟಕ ಸರ್ಕಾರ ರಾಷ್ಟ್ರಕವಿ ಪ್ರಶಸ್ತಿ ಕೊಟ್ಟು ಗೌರವಿಸಿದ ಇವರು ಇಂದು ನಮ್ಮನ್ನಗಲಿ ಅಮರರಾಗಿದ್ದಾರೆ.

ಅಧ್ಯಾಯ – 1

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಅದರ ಸ್ವರೂಪ

ಪೀಠಿಕೆ :

ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ ಆರಂಭದಿಂದ ಇಲ್ಲಿಯವರೆಗೂ ಧರ್ಮದ ದಟ್ಟ ಪ್ರಭಾವ ಹೊರ ಹೊಮ್ಮಿರುವುದು ಕಾಣುತ್ತದೆ. ಆದಿಕವಿ ಎನಿಸಿದ ಪಂಪ ಎರಡು ರೀತಿಯಿಂದ ಕಾವ್ಯ ರಚಿಸಿದ್ದಾರೆ. ಒಂದನೆಯದು 'ಆದಿಪುರಾಣ'ವೆಂಬ ಆಗಮಿಕ ಕಾವ್ಯ ಅಂತೆಯೇ 'ವಿಕ್ರಮಾರ್ಜುನ ವಿಜಯ'ವೆಂಬ ಲೌಕಿಕ ಕಾವ್ಯ, ಪಂಪನ ವಾಕ್ಯವಾದ 'ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ' ಎನ್ನುವಲ್ಲಿ ಆತನ ಆಧ್ಯತೆ ಪ್ರಮುಖವಾಗಿ ಲೌಕಿಕಕ್ಕಿಂತ ಆದ್ಯಾತ್ಮಿಕತೆಗೆ ಹೆಚ್ಚು ಒಲಿದಿರುವುದನ್ನು ಗಮನಿಸಿದರೆ ಮುಂದಿನ ಕವಿಗಳೂ ಸಹ ಪೊನ್ನನಾಗಲೀ, ರನ್ನನಾಗಲೀ ಇದೇ ಮಾರ್ಗವನ್ನು ಅನುಸರಿಸಿರುವುದು ಕಂಡು ಬರುತ್ತದೆ. ಅಂತೆಯೇ ಕವಿಗಳ ಮನಸ್ಸಿನ ಆಧ್ಯಾತ್ಮಿಕತೆಯ ತುಡಿತ ಮಿಡಿತಗಳು ಹೊರ ಹೊಮ್ಮಿರುವುದು ದ್ಯೋತಕವಾಗಿದೆ.

ಶ್ರೀ ತರಳಬಾಳು ಜಗದ್ಗುರು ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಅಭಿವ್ಯಕ್ತಿಸಿರುವಂತೆ "ಲೌಕಿಕ ಕಾವ್ಯಗಳೂ ಸಹ ಒಂದರ್ಥದಲ್ಲಿ ಪಾರಲೌಕಿಕ ಮೌಲ್ಯಗಳಿಂದಲೇ ಕೂಡಿವೆ. ಅಂತೆಯೇ ಲೌಕಿಕ ಕಾವ್ಯಗಳ ವಿಶೇಷತೆಯನ್ನು ಕಟ್ಟಿಕೊಡುತ್ತದೆ.

ಅಧ್ಯಯನದ ಮಹತ್ವ :

ಸಹಜವಾಗಿ ಕವಿತೆಗಳಲ್ಲಿ ನಾವು ಕಾಣುವುದು ಲೌಕಿಕ ಅನುಭವದ ವಿಶೇಷತೆಯನ್ನು ಅಂತೆಯೇ ಅನುಭಾವದ ವಿಶೇಷ ದರ್ಶನ ಬಲು ಅಪರೂಪವಾಗಿಯೇ ಕಾಣುವುದು ಬಹಳ ಅಪರೂಪವೇ ಸರಿ, ಹಾಗೆಯೇ ಲೌಕಿಕತೆಯ ಅನುಭವಗಳನ್ನು ವಾಸ್ತವತೆಯ ಎಲ್ಲ ಅಂಶಗಳನ್ನು ಒಳಗೊಂಡಿರುವುದನ್ನು ತಿಳಿಯಲು ಕವಿತೆಗಳಲ್ಲಿ ಆಸಕ್ತವಾಗಿರಿವುದು ವಿಶೇಷವೇ ಸರಿಯೆನಿಸುತ್ತದೆ.

ಜಿ.ಎಸ್. ಶಿವರುದ್ರಪ್ಪರವರೇ ತಮ್ಮ "ಕಾವ್ಯಾರ್ಥ ಚಿಂತನ"ದಲ್ಲಿ ಹೇಳಿರುವಂತೆ 'ಬುದ್ಧಿಯ ಮೂಲಕ ಲೋಕವಿಷಯಗಳನ್ನು ಗ್ರಹಿಸಿ, ವಿಶ್ಲೇಷಿಸಿ, ತರ್ಕಬದ್ಧವಾಗಿ ನಿರೂಪಿಸುವ ಕ್ರಮ ಶಾಸ್ತ್ರವೆನಿಸಿದರೆ ಭಾವದ ಮೂಲಕ ಗ್ರಹಿಸಿ ಅಭಿವ್ಯಕ್ತಿಸುವ ವಿಶೇಷ ಕ್ರಮ ಕಾವ್ಯವೆನಿಸುತ್ತದೆ.' ಇನ್ನೂ ವಿಶೇಷವೆಂದರೆ ಅವರ ಯಾವ ಪದ್ಯವನ್ನು ತೆಗೆದುಕೊಂಡರೂ ಅದರಲ್ಲಿ 'ಭಾವದ ಜೊತೆಗೆ ಅನುಭಾವದ ಶೃತಿ ಅಂತರ್‌ಗಾಮಿಯಾಗಿ ಮಿಡಿಯುವುದನ್ನು ಮನಗಾಣಬಹುದು ಸಂಗೀತ ಕಛೇರಿಗಳಲ್ಲಿ ಮನೋಹಕವಾದ ಗಾಯನದ ಒಂದೆ ಕೇಳಿಯೂ ಕೇಳದಂತೆ ಅನುರಣಿಸುವ ತಂಬೂರಿಯ ತಂತಿಗಳಂತೆ'.

ಅಂತೆಯೇ ಜಿ.ಎಸ್. ಶಿವರುದ್ರಪ್ಪ ರವರ 'ಸಾಮಗಾನ'(1951) ಕವಿತಾ ಸಂಕಲನದಲ್ಲಿ 'ನಾನು-ನೀನು' ಎಂಬ ಅವರ ಪದ್ಯಭಾಗವನ್ನು ಗಮನಿಸಿದರೆ

'ನೀಲಾಕಾಶದ ತಾರೆಗೆ ನೀನು
ನಿನ್ನನು ನೋಡುತ ಚಪ್ಪಳೆಯಿಕ್ಕುವ
ಮರ್ತ್ಯದ ಮಣ್ಣಿನ ಶಿಶು ನಾನು-

ಬಂದುರ ಮಂದಾನಿಲ ನೀನು
ನಿನ್ನಯ ಸ್ಪರ್ಶಕೆ ಪೊಂಪುಳಿ ವೋಗುತ
ಲಾಸ್ಯವ ನಾಡುವ ಲತೆ ನಾನು-

ಭುವನಾಕರ್ಷಣ ಶಕ್ತಿಯು ನೀನು
ನಿನ್ನಯ ಸುತ್ತಲೂ ದಿನದಿನ ಸುತ್ತುವ
ಅಗಣಿತ ಹಣತೆ ಯೊಳೆನಿಂದಾನು'[1]

ಹೀಗೆ ಮನುಷ್ಯನ ಇಂದ್ರಿಯಗಳಿಗೆ ಅಗೋಚರವಾದ ಪರಾತ್ಪರ ವಸ್ತುವಿನ ಆಕರ್ಷಣೆಗೆ ಕವಿ ಹೃದಯ ಒಳಗಾಗುವುದನ್ನು ಕುರಿತು ಅನುಭಾವಿಕ ನೆಲೆಯಲ್ಲಿ ಪುಳಕಿತಗೊಂಡು ವಿಶ್ವಚೈತನ್ಯದ ವಿಶಾಲತೆ ಮತ್ತು ಗಹನತೆಯ ಆಕರ್ಷಣೆ ಅದನ್ನು ಪಡೆಯಬೇಕೆಂಬ ಹಂಬಲತೆಯಾಗಿ ಪರಿಣಮಿಸಿ ಕಾಣದ ಕಡಲಿಗೆ ಹಂಬಲವಾಗಿಸಿದ ಮನಕೆ ಕಾಣಬಲ್ಲನೇ ಒಂದು ದಿನ? ಎಂಬಂತೆ ಎಂಬ ಉತ್ಕಟತೆಯ ಅಭಿವ್ಯಕ್ತಿಯ ಗ್ರಹಿಕೆ ಅನುಭಾವಿಕ ನೆಲೆಯಲ್ಲಿರಲು ಕವಿತೆಯು ಮಹತ್ವ ಮಹತ್ವಪೂರ್ಣವೆನಿಸಿದೆ.

1. 'ಸಾಮಗಾನ'(1951), ಜಿ.ಎಸ್. ಶಿವರುದ್ರಪ್ಪ / ನಾನು-ನೀನು'-ಕವಿತಾ ಸಂಕಲನ.

ಅಧ್ಯಯನದ ಉದ್ದೇಶ

ಅನುಭಾವಿಕ ನೆಲೆಯನ್ನು ಅನುಭವದ ನೆಲೆಯಲ್ಲಿಯೇ ಕಾಣುವುದು ಕೂಡ, ಭಾವನೆಯ ಅಭಿವ್ಯಕ್ತಿಯ ಉತ್ಕಟತೆಯ ಬಿಂಬವನ್ನು ಸಮಾಜದಲ್ಲಿನ ವಾಸ್ತವತೆಯ ನೆಲೆಗಳನ್ನು ಕವಿತೆ ಉತ್ಕಟವಾದ ಭಾವಾಭಿವ್ಯಕ್ತಿಯಲ್ಲೇ ಅನಾವರಣಗೊಳಿಸುತ್ತದೆ. ಅಸಮಾನತೆಯ ಪ್ರವೃತ್ತಿಗಳನ್ನು, ನಿಸರ್ಗದ ರಮಣೀಯತೆಯೊಂದಿಗೆ ಸ್ತ್ರೀ ಸಮಾಜದ ನೆಲೆಯನ್ನು ನಿಸರ್ಗದೊಂದಿಗೆ ಸಮೀಕರಿಸುವುದನ್ನು ಧಾರ್ಮಿಕತೆಯ ತಿಳಿವಿನ ಜೊತೆಗೆ ಬಡತನದ ನೀರವ ಮೌನದ ಪರಂಪರೆಯನ್ನು ಪರಕೀಯತೆಯ ಅನಾಥ ಪ್ರಜ್ಞೆಯ ಅಳಲನ್ನು, ಕೊನೆಗೆ ಆದರ್ಶಮಯ ಬದುಕನ್ನು ಕಟ್ಟಿಕೊಳ್ಳಲು ಭಾವನಾತ್ಮಕವಾಗಿ ಪ್ರತಿಸ್ಪಂದಿಸುತ್ತ, ಸ್ಫೂರ್ತಿ ನೀಡುವುದೇ ಕವಿತೆಯ ಉದ್ದೇಶ.

ಸ್ವರೂಪ :

ಪ್ರಾಚೀನ ಪರಂಪರೆಯಿಂದ ಉದ್ಭವಿಸಿದ ಕಾವ್ಯಪರಂಪರೆ ಲೌಕಿಕ ಆಗಮಿಕವಾಗಿ ಇಬ್ಭಾಗವಾದರೂ ಕೂಡ ಶಿವಾಚಾರ್ಯರ "ಮಾತಿನಂತೆಯೇ ಲೌಕಿಕ ಕಾವ್ಯಗಳೂ ಸಹ ಒಂದರ್ಥದಲ್ಲಿ ಪಾರಲೌಕಿಕ ಮೌಲ್ಯಗಳಿಂದಲೇ ಕೂಡಿವೆ" ಎಂಬುದನ್ನು ಅರಿಯುತ್ತಾ ಆಧುನಿಕ ಕವಿತೆಗಳಲ್ಲಿ ಲೌಕಿಕ ಅನುಭವ ವಿಶೇಷ ಅನುಭಾವ ವಿಶೇಷ ದರ್ಶನ ಬಲು ಅಪರೂಪವೆಂದೇ ಪರಿಗಣಿಸಿ ವಿಶ್ಲೇಷಣೆಗೆ ಒಳಪಡಿಸುವುದೇ ಆಗಿದೆ.

ವ್ಯಾಪ್ತಿ :

ಜಿ.ಎಸ್. ಶಿವರುದ್ರಪ್ಪರವರ ಕವಿತೆಗಳ ಸಂಕಲನದಲ್ಲಿ ಒಳಗೊಂಡ ಕವಿತೆಗಳ ಅಂತರಾಳದಲ್ಲಿನ ಅಂಶಗಳನ್ನು ಗಮನಿಸಿದರೆ ಲೌಕಿಕ ಕಾಲಘಟ್ಟದಲ್ಲಿನ ಅಂಶಗಳ ಮೇಲೆ ಬೆಳಕುಚೆಲ್ಲದ ಕವಿತೆಗಳೂ ಅಪರೂಪವೆಂದೇ ಪರಿಗಣಿಸುತ್ತಾ, ಆಯ್ದ ಕವಿತೆಗಳ ಕೆಲವು ಅಂಶಗಳ ಮೇಲೆ ನನ್ನ ಆಸಕ್ತಿಯನ್ನು ಕೇಂದ್ರೀಕರಿಸಿ ಅಧ್ಯಯನದ ವ್ಯಾಪ್ತಿ ಮಿತಿಯೂ ಆಗಿ ಬಳಸಿಕೊಂಡಿದ್ದೇನೆ.

1. ಜಿ.ಎಸ್. ಶಿವರುದ್ರಪ್ಪ ಅವರ ಕವಿತೆಗಳಲ್ಲಿ ಸಾಮಾಜಿಕ ಪ್ರಜ್ಞೆ;
2. ಪ್ರೇಮ ಮತ್ತು ಪ್ರಕೃತಿ ದರ್ಶನ,
3. ಸೃಜನಶೀಲತೆಯ ಹುಡುಕಾಟ ;
4. ಜಿ.ಎಸ್. ಶಿವರುದ್ರಪ್ಪ ಅವರ ಕವಿತೆಗಳಲ್ಲಿ 'ಸ್ತ್ರೀ ಪರಿಕಲ್ಪನೆ'

ಈ ಮೇಲಿನ ವಿಚಾರಗಳ ಹಿನ್ನೆಲೆಯಲ್ಲಿ ಮೇಲೆ ಪ್ರಸ್ತಾಪಿಸಿರುವ ಅಂಶಗಳನ್ನು ಈ ಅಧ್ಯಾಯಗಳ ಚೌಕಟ್ಟಿನಲ್ಲಿ ಅಧ್ಯಯನಕ್ಕೆ ತೊಡಗಬಹುದಾಗಿದೆ. ಪ್ರಸ್ತುತ ಅಧ್ಯಯನದ ಪ್ರಗತಿಯಲ್ಲಿ ಕಂಡುಕೊಳ್ಳುವ ಸಂಶೋಧನೆಗಳ ಹೊಸ ವಿಚಾರಗಳನ್ನು ವಿಶ್ಲೇಷಣೆಗೊಳಪಡಿಸಲಾಗುವುದು.

ಅಧ್ಯಾಯ – 2

ಜಿ.ಎಸ್. ಶಿವರುದ್ರಪ್ಪ ಅವರ ಕವಿತೆಗಳಲ್ಲಿ ಸಾಮಾಜಿಕ ಪ್ರಜ್ಞೆ

ಮನುಷ್ಯತ್ವವನ್ನು, ಕಾವ್ಯದ ಚಲನಶೀಲತೆಯ ಆಶಯವನ್ನಾಗಿಟ್ಟುಕೊಂಡ ಪರಂಪರೆಯೊಂದಿಗೆ ಸಮನ್ವಯತೆಯನ್ನು ಸಾಧಿಸಿಕೊಂಡ ಪ್ರಮುಖ ಕವಿಗಳಲ್ಲಿ ಡಾ॥ ಜಿ.ಎಸ್.ಶಿವರುದ್ರಪ್ಪ ಪ್ರಮುಖರು. ಜಿ.ಎಸ್.ಶಿವರುದ್ರಪ್ಪರವರ ಕಾವ್ಯಪ್ರೀತಿ, ಮಾನವೀಯ ಗುಣದ ನೆಲೆಗಳು ಎಲ್ಲಾ ಕಾಲದಲ್ಲೂ ಸಮನ್ವಯ ಗುಣಗಳನ್ನು ಹೊಂದಿದೆ. ಬಹುಮುಖ ಪ್ರತಿಭೆಯುಳ್ಳ ಕವಿಯಾದ ಜಿ.ಎಸ್.ಶಿವರುದ್ರಪ್ಪರವರು ಬದುಕಿನ ನಾನಾ ಬಗೆಯ ಮಜಲುಗಳನ್ನು ಅಭಿವ್ಯಕ್ತಿಸಿದ್ದಾರೆ. ಜಿ.ಎಸ್.ಶಿವರುದ್ರಪ್ಪರವರ ಸಾಹಿತ್ಯ ಅಧ್ಯಯನ ಕೇವಲ ಕನ್ನಡಕ್ಕೆ ಸೀಮಿತವಾಗದೆ ಎಲ್ಲ ದೇಶ-ಭಾಷೆಗಳ ಸಾಹಿತ್ಯಾಭ್ಯಾಸವನ್ನು ಸೇರಿಕೊಂಡು ಶ್ರೀಮಂತವಾಗಿದೆ. ಜಿ.ಎಸ್.ಶಿವರುದ್ರಪ್ಪರವರು ನವ್ಯತೆಯ ಬಗ್ಗೆ ಆಶ್ಚರ್ಯ ಪಡುವುದಿಲ್ಲ. ಅದರಲ್ಲಿ ವಿಕಾಸವನ್ನು ಪಡೆಯಲು ಹಾತೊರೆಯುತ್ತಾರೆ. ಎಂತಹ ಸಂದರ್ಭದಲ್ಲೂ ನಾನೊಬ್ಬ ಭಾರತೀಯ ಎಂಬುದನ್ನು ಅವರು ಮರೆಯುವುದಿಲ್ಲ. ಎಲ್ಲದಕ್ಕೂ ಮೀರಿದ ಆನಂದದ ಆದರ್ಶವನ್ನು ಅವರು ಕಾಣುತ್ತಾರೆ. ಯಾವುದೇ ಒಂದು ಪಂಥ-ಪ್ರವೃತ್ತಿಗಳಿಗೆ ಅಂಟಿಕೊಳ್ಳದೇ ಅದರಿಂದ ಪಾರಾಗಿದ್ದಾರೆ. ಜಿ.ಎಸ್.ಶಿವರುದ್ರಪ್ಪನವರು ತಮ್ಮ ಕಾವ್ಯ ಶ್ರದ್ಧೆಯಲ್ಲಿ ಭಾವುಕತೆ ಮತ್ತು ವೈಚಾರಿಕತೆಯ ಅಂಶಗಳಲ್ಲಿ ವಾಸ್ತವ ಪ್ರಜ್ಞೆಗಳಲ್ಲಿ ವಿವೇಕಶಾಲಿಗಳಾಗಿದ್ದಾರೆ.

'ಮಗು ಅಳುತಾ ಇದೆ ಎಲ್ಲೊ
ಒಂದೆ ಸಮನೆ
ಗುಡಿ-ಮಠ-ಚರ್ಚಿನ ಗಣಗಣ ಗಂಟೆಯ
ಧೂಪ ಧೀಪಗಳ ಉದ್ದಕ್ಕೂ

ದೇಶೋದ್ಧಾರದ ರಾಜಕಾರಣದ
ಬೇಡನ ಬಲೆಗಳ ಅಗಲಕ್ಕೂ
ನಗರಾರಣ್ಯದ ಗಗನ ಚುಂಬಿಗಳ
ಹುತ್ತದ ನೆಲೆಗಳೆತ್ತರಕ್ಕೂ
ಎಲ್ಲೋ ಮಗು ಅಳುತಾ ಇದೆ
ಒಂದೇ ಸಮನೆ...'[1]

'ಮಗು' ಅಳುತಾ ಇರುವ ಸಂದರ್ಭದ ನೆಲೆಗಳನ್ನು ಕವಿ ಇಲ್ಲಿ ವಾಸ್ತವ ಪ್ರಜ್ಞೆಯ ಧಾರ್ಮಿಕ ಮತ್ತು ಸಾಮಾಜಿಕ ರಾಜಕಾರಣದ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಇದು ಯುಗ ಯುಗಗಳ ಯಾತನೆಯ ಸಂದರ್ಭದಂತಿದೆ. ಈ ಬದುಕಿನಲ್ಲಿ ಮೂಡಿರುವ ಸಾಮಾಜಿಕ ಕಳಕಳಿ ಇಲ್ಲಿ ಬಿಂಬಿತವಾಗಿದೆ. ಗುಡಿ, ಮಠ, ಚರ್ಚಿನ ಗಣಗಣ ಗಂಟೆ ಎನ್ನುವಾಗ ಇಲ್ಲಿ ಮಸೀದಿಯನ್ನು ಬಿಟ್ಟಿದ್ದಾರೆ. ಆದರೆ ಕುವೆಂಪು ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ ಎಂದು ಕರೆ ನೀಡುತ್ತಾರೆ. ಧರ್ಮಾಂಧಕಾರದಲ್ಲಿ ಮುಳುಗಿರುವ ಸಮಾಜಕ್ಕೆ "ಮಗು ಅಳುವ ಕೂಗು" ಕೇಳುತ್ತಿಲ್ಲ. ಇದು ವಾಸ್ತವ ಪ್ರಜ್ಞೆ ಮತ್ತು ಕವಿಯಲ್ಲಿರುವ ಸಾಮಾಜಿಕ ಪ್ರಜ್ಞೆಯ ಕಳಕಳಿಯಾಗಿದೆ. ಸಾಮಾಜಿಕ ಸೂಕ್ಷ್ಮತೆಯನ್ನು ಹೊಂದಿರುವ ಕವಿ ತಾನಿರುವ ಸಮಾಜದ ಆಗು-ಹೋಗುಗಳ ಮತ್ತು ಒಳ-ಹೊರಗಿನ ಸಾಮಾಜಿಕ ಅಂಶಗಳನ್ನು ತನ್ನ ಕವಿತೆಗಳಲ್ಲಿ ದಾಖಲಿಸುತ್ತಾ, ಅದಕ್ಕೊಂದು ಆಶಯವನ್ನು ಪ್ರಕಟಿಸುತ್ತಾ ಸಾಗುತ್ತಾನೆ ಅದು ಆ ಕವಿಯ ಕಾವ್ಯಕ್ರಾಂತಿ ಅಥವಾ ಪರಿವರ್ತನೆ ಎನ್ನಬಹುದು.

ಕಾವ್ಯದ ಮೂಲಕ ತನ್ನ ಆಲೋಚನಾ ಕ್ರಮವನ್ನು ಅಕ್ಷರಗಳ ಮುಖಾಂತರ ದಾಖಲಿಸುವ ಕವಿಯ ಕಾವ್ಯ, ಕಾವ್ಯಕ್ರಾಂತಿಯೇ ಆಗಿರುತ್ತದೆ.

'ದೇಶಾದ್ಯಂತ ಅಣೆಕಟ್ಟುಗಳ ಕಟ್ಟಿ ನಾವು
ಬೆಳೆದದ್ದೇನು ಬರೀ ಹಸಿವೆ?
ಹೊಲಗದ್ದೆಗಳ ತುಂಬ ತೆನೆಯೆತ್ತಿ ತೂಗುವುದೇನು?
ಹಸಿರೆ ಅಥವಾ ನಿಟ್ಟುಸಿರೇ?'[2]

ಆಳುವ ವರ್ಗ ದೇಶದ ಸುಧಾರಣೆಗೆ ಮತ್ತು ಸಾಮಾಜಿಕ ವ್ಯವಸ್ಥೆಯ ಸುಧಾರಣೆಗಾಗಿ ದೇಶದುದ್ಧಾರದ ಮಂತ್ರವನ್ನು ಜಪಿಸುತ್ತಾ, ಸಮಾಜಕ್ಕೆ ಭರವಸೆಯ ಭಾಷಣವನ್ನು ಮಾಡುತ್ತಾ, ದೇಶದ ಹಲವೆಡೆ ಅಣೆಕಟ್ಟೆ ನಿರ್ಮಾಣದ ಯೋಜನೆಗಳನ್ನು ರೂಪಿಸುತ್ತಾರೆ. ಆ ಮೂಲಕ ಜನತೆಯಲ್ಲಿ ಹಸಿ ಆಶಾಭಾವನೆಯನ್ನು ಬಿತ್ತುತ್ತಾರೆ. ಆದರೆ ಅದರಿಂದಾಗುವ ಲಾಭ ಅಥವಾ ಪ್ರಯೋಜನವಾದರು ಏನು? ಎಂಬ ವಿಮರ್ಶಾತ್ಮಕವಾದ ನೆಲೆಯನ್ನು ಗುರುತಿಸಿ ಮಾತಾಡುವ

ಕವಿಯ ಕಾವ್ಯ 'ಬೆಳೆದದ್ದೇನು ಬರಿ ಹಸಿವೇ?' ಎಂದು ಪ್ರಶ್ನಿಸುತ್ತದೆ. ಹಾಗೂ "ಹೊಲಗದ್ದೆಗಳ ತುಂಬ ತೆನೆಯೆತ್ತಿ ತೂಗುವುದೇನು? ಹಸಿರೆ ಅಥವಾ ನಿಟ್ಟುಸಿರೆ?" ಎಂಬುದು ಕವಿವಾಣಿ ಪ್ರಶ್ನಾರ್ಥಕವಾದುದಾದರೂ, ಈ ಕವಿವಾಣಿ ಕೇವಲ ಪ್ರಶ್ನೆಯಾಗಿ ಉಳಿಯದೆ ಅದರಾಚೆಗಿರುವ ಸಾಧನೆ ಮತ್ತು ನೆಪ ಬೋಧನೆಯ ತಾತ್ವಿಕರಣದ ಸಾಮಾಜಿಕ ವಿಡಂಬನೆಯಾಗಿದೆ ಮತ್ತು ದೇಶೋದ್ಧಾರದ ವ್ಯಂಗ್ಯವಾಗಿದೆ. ಇಂತಹ ವ್ಯಂಗ್ಯ ಕಾಲಕಾಲಕ್ಕೆ ನಡೆದ ವಿದ್ಯಮಾನಗಳಿಗೆ ಓಡಿದ ಕನ್ನಡಿಯಂತಿದೆ. ಸಾಮಾಜಿಕ ವಾಸ್ತವತೆಗೆ, ಸಾಂಸ್ಕೃತಿಕ ಪಲ್ಲಟಗಳಿಗೆ ವೈಚಾರಿಕ ಪ್ರಜ್ಞೆಯ ಮೂಲಕ ಅಭಿವ್ಯಕ್ತಿ ನೀಡುತ್ತಾ ತನ್ನ ಕಾವ್ಯದ ಬಗೆಗೆ ಮತ್ತು ಅದರ ಹೊರಹೊಮ್ಮುವಿಕೆಯ ಬಗ್ಗೆ ಕವಿಯು ಖಚಿತವಾದ ನಿಲುವನ್ನು ಹೊಂದಿದ್ದಾರೆ. ಏಕೆಂದರೆ ಲೋಕವನ್ನು ಬಿಟ್ಟು ಕಾವ್ಯ ಬರಲಾರದು. ಆದ್ದರಿಂದ ಲೋಕದೊಂದಿಗೆ ಬೆಳೆದ ಕವಿಯ ಅನುಭವ ಕವಿತೆಯ ಒಳಗೆ ದಾಖಲಾಗುತ್ತದೆ.

'ನಮ್ಮವರು ನಮಗಿಲ್ಲ
ನಮಗೆ ನಾವೇ ಎಲ್ಲ
　　　ಕಟ್ಟ ಕಡೆಗೆ
ನಂಬಿದವರೇ ನಮಗೆ
ಕಾರುವರು ವಿಷದ ಹೊಗೆ
　　　ಅಂತರ್ಯದೊಳಗೆ'[3]

ಲೋಕದೊಳಗೆ ನಮ್ಮವರಿದ್ದರೂ ನಮ್ಮವರು ನಮಗೆ ಎಂದಿಗೂ ಆಗುವುದಿಲ್ಲ. ನಮ್ಮ ಬದುಕಿಗೆ ನಾವೇ ಗುರುವಾಗಬೇಕು. ನಂಬಿಕೆ ಎನ್ನುವುದು ಹಸಿ ಸುಳ್ಳಾಗಿದೆ. ಸುಳ್ಳಷ್ಟೇ ಅಲ್ಲ ವಿಷದ ಹೊಗೆಯಾಗಿದೆ ಅದು ಯಾವಾಗಲೂ ಕಾಣುವುದಿಲ್ಲ ಬದಲಾಗಿ ಅಂತರ್ಯದೊಳಗಿದ್ದು, ವಿಷ ಕಾರುತ್ತದೆ. ಇದು ಮಾನವರೆಲ್ಲರಲ್ಲೂ ಹುದುಗಿರುವ ಅಸೂಯೆಯ ಭಾವ ಎನ್ನುವುದನ್ನು ಜಿ.ಎಸ್.ಶಿವರುದ್ರಪ್ಪರವರ ಕಾವ್ಯದ ಅನಾವರಣವಾಗಿದೆ.

'ಹೊಳೆಯಲ್ಲಿ ಮಲಳು ಮುಳುಗಿ
ಸಾಯುತಿರೆ ದಡದಲ್ಲಿ
　　　ನಿಂತು ನಕ್ಕವರು
ಈಜಿ ದಡಕ್ಕೆ ತರಲು
ನಮ್ಮವನು ನೀನೆಂದು
　　　ಬೆನ್ನು ತಟ್ಟುವರು'[4]

'ಜಿ.ಎಸ್.ಶಿವರುದ್ರಪ್ಪ ಕವಿಯ ಈ ಕಾವ್ಯದ ಸಾಲುಗಳನ್ನು ಗಮನಿಸಿದರೆ ನನಗೆ ಜಾನಪದ ಗಾದೆಯೊಂದು ನೆನಪಿಗೆ ಬರುತ್ತದೆ. "ನಮ್ ರಾಗಿ ಕಲ್ಲಾಡದ್ರೆ ರಾಜ್ಯವೆಲ್ಲಾ ನೆಂಟರು" ಎಂಬ ಮಾತು ಸಾರ್ವಕಾಲಿಕ ಸತ್ಯ ಎನಿಸುತ್ತದೆ. ಸಮಾಜದ ಒಬ್ಬ ವ್ಯಕ್ತಿ ತನ್ನ ಬದುಕಿನಲ್ಲಿ ನಾಶವಾದಾಗ ಆತನಿಗೆ ಸಹಾಯ ಹಸ್ತ ನೀಡುವವರು ಯಾರು ಇಲ್ಲವಾಗುತ್ತಾರೆ. ಬದಲಿಗೆ ಎಲ್ಲರೂ ಆತನನ್ನು ಹೀಗಳೆದು ಅವಮಾನಿಸುತ್ತಾರೆ. ಆಕಸ್ಮಿಕವಾಗಿ ಆತ ಸ್ವಶಕ್ತಿಯಿಂದ ತನ್ನ ಬದುಕನ್ನು ಹಸನು ಮಾಡಿಕೊಂಡು ಸಮಾಜದಲ್ಲಿ ಪ್ರತಿಷ್ಠಿತನಾದರೆ ಎಲ್ಲರೂ ಆತ ನಮ್ಮವನೆಂದು ಅವರ ಪ್ರತಿಷ್ಠೆ ಹೆಚ್ಚಿಸಿಕೊಳ್ಳುತ್ತಾರೆ. ಇದು ಈ ಸಮಾಜದ ಪ್ರಮುಖ ಮುಖವಾಗಿದೆ. ಹೀಗೆ ಸಾಮಾನ್ಯನೊಬ್ಬನ ವೈಯಕ್ತಿಕ ಸಮಸ್ಯೆಯ ಸಂಗತಿಯಾದರೆ ಕವಿಯೊಬ್ಬನಿಗೆ ಸಾಮಾಜಿಕ ಸಮಸ್ಯೆಯೇ ಎಲ್ಲವೂ ಆಗಿ ಆವರಿಸಿಕೊಳ್ಳುತ್ತದೆ. ಸಾಮಾಜಿಕ ಸಮಸ್ಯೆಗೆ ಕಾವ್ಯದ ಮೂಲಕ ಸ್ಪಂದಿಸುವ ಕವಿಯು ಆಕ್ರೋಶವನ್ನು ವ್ಯಕ್ತಪಡಿಸುವುದಿಲ್ಲ. ಆಕ್ರೋಶ ಜಿ.ಎಸ್.ಶಿವರುದ್ರಪ್ಪರವರ ಕಾವ್ಯದ ಗುಣವಲ್ಲ. ಭಾರತೀಯ ಸಂದರ್ಭದ ಸಾಮಾಜಿಕ ದುಸ್ಥಿತಿಯನ್ನು ಕಂಡು ಅವರ ಮನಸ್ಸು ತಲ್ಲಣಿಸುತ್ತದೆ. ಮೌಲ್ಯ ಪಲ್ಲಟದ ಸಂಧಿಕಾಲದಲ್ಲಿ ಬದುಕುವ ಯಾವುದೇ ಸಂವೇದನಾಶೀಲ ಮನಸ್ಸು ಯೋಚಿಸುವಂತೆ, ಚಿಂತಿಸುವಂತೆಯೇ ಕವಿ ಜಿ.ಎಸ್.ಶಿವರುದ್ರಪ್ಪ ಕೂಡಾ ಯೋಚಿಸುತ್ತಾರೆ'.[5]

ಹೀಗೆ ಯೋಚಿಸುವ ಕವಿ ಸಾಮಾಜಿಕ ತಲ್ಲಣಗಳ ಆಲೋಚನೆಯೊಂದಿಗೆ ಪ್ರಾಕೃತಿಕ ತಲ್ಲಣವನ್ನು ಯೋಚಿಸುತ್ತಾರೆ.

> **'ಆಕಾಶಕ್ಕೆ ಏನಿದೆ ಚಿಂತೆ?**
> **ಇರುಳಲ್ಲಿ ಥಳ ಥಳ ಹೊಳೆವ ನಕ್ಷತ್ರಗಳಿವೆ**
> **ಹಗಲು ಝಗ ಝಗಿಸುವ ಸೂರ್ಯನಿದ್ದಾನೆ**
> **ಆಗಾಗ ಬೆಳದಿಂಗಳಿನ ತಂಪಿದೆ**
> **ಮೋಡಗಳ ಮಾಟವಿದೆ**
> **ಮಿಂಚಿದೆ ಗುಡುಗಿದೆ'.**[6]

ಎಂಬ ಸಾಲುಗಳನ್ನು ಗಮನಿಸಿದಾಗ ಈ ಸಾಲುಗಳು ಕೇವಲ ಪ್ರಾಕೃತಿಕವಾಗಿ ಆಕಾಶ–ನೆಲಗಳಿಗೆ ಸಂಬಂಧಿಸಿದ ಸಾಲುಗಳಾಗಿದರೇ ಮೇಲು–ಕೀಳಿನ ಸಾಮಾಜಿಕ ಸ್ತರದ ತಾರತಮ್ಯೀಕರಣದ ಚಿಂತನೆಗೆ ಒಳಪಡಿಸುತ್ತದೆ 'ಆಕಾಶ'ವೆಂದುಬು ಮೇಲುಸ್ತರವಾದರೆ, 'ನೆಲ'ವೆಂಬುದು ಕೆಳಸ್ತರದ ಪ್ರತೀಕವಾಗಿ ಭಾಸವಾಗುತ್ತದೆ. ಹೀಗೆ ಆಕಾಶಕ್ಕೆ ಏನು ಚಿಂತೆಯಿಲ್ಲ, ಆದರೆ ನೆಲಕ್ಕೆ ಸದಾ ಚಿಂತೆಯಿದೆ ಎಂದು ಕವಿ ಸಾಮಾಜಿಕ ದುಸ್ಥಿತಿಯ ವ್ಯಾಖ್ಯಾನವನ್ನು ಮಾಡುತ್ತಾರೆ. ಶತಶತಮಾನಗಳಿಂದಲೂ ಈ ತರದ ದುಸ್ಥಿತಿ ಲೋಕವನ್ನೇ ಆವರಿಸಿಕೊಂಡಿದೆ. ಈ ರೀತಿಯ

ಅವ್ಯವಸ್ಥೆಯಿಂದ ಲೋಕದ ಜಡತೆಯನ್ನು ಪರಿಹರಿಸಲು ಅನೇಕ ಮಹಾತ್ಮರು ಶ್ರಮಿಸಿದ್ದಾರೆ ಆದರೂ ಕತ್ತಲೆ ಹೋಗಲಾಡಿಸಲು ಯಾರಿಂದಲೂ ಕಷ್ಟ ಸಾಧ್ಯವಾಗಿದೆ.

'ಯುಗಯುಗಾಂತರದಿಂದ ಬೆಳಕಿನ ಮೇಲೆ
ಬೆಳಕನ್ನು ತೊಡಿಸಿದರೂ
ಕಡೆಗೆ ಬರೀ ಕತ್ತಲೆ
....
ಈ ಕತ್ತಲೆಯ ಬೆತ್ತಲೆಗೆ ಯಾರು ತಾನೇ
ಬೆಳಕಿನ ಬಟ್ಟೆ ತೊಡಿಸಿ ಮುಗಿಸುತ್ತಾರೆ!'[7]

ಯುಗಯುಗಗಳಿಂದ ಬೆತ್ತಲೆಯ ಕತ್ತಲೆಗೆ ಬೆಳಕಿನ ಮೇಲೆ ಬೆಳಕಿನ ಬಟ್ಟೆ ತೊಡಿಸಿದರೂ ಕತ್ತಲೆಗೆ ಬೆಳಕಿನ ಬಟ್ಟೆ ಸಾಕಾಗಲಾರದು. ಅಜ್ಞಾನ, ಅಂಧಕಾರ ತುಂಬಿರುವ ಜನಗಳಿಗೆ ಜ್ಞಾನದ, ತಿಳುವಳಿಕೆಯ ಭೆಳಕಿನ ಬಟ್ಟೆ ತೊಡಿಸಿದರೂ, ಅದು ಅಪ್ರಯೋಜಕವಾದುದು. ಸಾಮಾಜಿಕ ಬದುಕಿನಲ್ಲಿ ಸಾಮಾನ್ಯ ಜನ ಅಪ್ರಜ್ಞಾವಂತರಾಗಿಯೇ ಮುಂದುವರೆದಿದ್ದಾರೆ. ಅಂತಹ ಜನತೆಯನ್ನು ಪ್ರಜ್ಞಾವಂತರನ್ನಾಗಿ ಮಾಡುವುದು ಅತ್ಯಂತ ಕಷ್ಟ ಎಂಬುದು ಜಿ.ಎಸ್.ಶಿವರುದ್ರಪ್ಪರ ಕವಿತೆಯ ತಾತ್ವಿಕ ಚಿಂತನೆಯಾಗಿದೆ. ಈ ಪದ್ಯವು ಸಮಾಜದ ಇಬ್ಬಗೆಯ ನೀತಿಯನ್ನು ಹೊಂದಿದ್ದು, ಸಾಮಾಜಿಕ ಪಥ್ಯಗಳ ಬಗ್ಗೆ ಸಾಮಾಜಿಕ ಶೀಲದ ಬಗ್ಗೆ ಹಾಗೂ ಸಾಮಾಜಿಕ ಸ್ವಾಸ್ಥ್ಯದ ಬಗೆಗೆ ಚಿಂತಿಸುತ್ತದೆ. ಹೀಗೆ ಚಿಂತಿಸುವ ಕವಿ ತನ್ನ ಕವಿತೆಯನ್ನು ಕುರಿತು ಹೀಗೆ ಹೇಳುತ್ತಾರೆ.

'ಮತ್ತೆ ಎತ್ತಿ ನಿಲ್ಲಿಸಲಾರೆ
  ಮುರಿದು ಬಿದ್ದ ಗುಡಿಗಳ
ಸುತ್ತ ಬಿದ್ದ ಬೂದಿಯೊಳಗೆ
  ಹುಡುಕಲಾರೆ ಕಿಡಿಗಳ'[8]

ಮುರಿದು ಬಿದ್ದ ಗುಡಿಗಳನ್ನು ಮತ್ತೆ ಎತ್ತಿ ನಿಲ್ಲಿಸುವುದಾಗಲೀ ಆ ಗುಡಿಯ ಸುತ್ತ ಬೂದಿಯೊಳಗೆ ಬಿದ್ದಿರುವ ಕಿಡಿಗಳನ್ನಾಗಲೀ ಹುಡುಕುವ ಪ್ರಯತ್ನವನ್ನು ಕವಿ ಮಾಡುವುದಿಲ್ಲ. ಏಕೆಂದರೆ ಅದರಲ್ಲಿ ಮತಾಂಧತೆಯ ವಿಷದ ಕಿಡಿಗಳಿರಬಹುದು. ಅದರಿಂದ ಮತ್ತಷ್ಟು ಸಾಮಾಜಿಕ ಸ್ವಾಸ್ಥ್ಯ ಹದಗೆಡಬಹುದು ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಮನುಷ್ಯತ್ವದ ನಡುವೆ ಬಿರುಕು ಹೆಚ್ಚಾಗುವ ಸಂಭವವಿರಬಹುದು. ಈ ಎಲ್ಲಾ ನೆಲೆಗಳಿಂದ ದೂರವಿರುವ ಪ್ರಯತ್ನ ಮಾಡುತ್ತಾರೆ ಕವಿ ಇಂತಹ ಅವ್ಯವಸ್ಥೆಯಿಂದ ದೂರವಿರಲು ಎಷ್ಟೇ ಪ್ರಯತ್ನಿಸಿದರೂ ಕವಿಯ ಸುತ್ತ ಬರೀ

ಮುಖವಾಡಗಳನ್ನು ತೊಟ್ಟು ನಟಿಸುವ ಪರಿವಾರವಿದೆ. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದೇ ಇದರಿಂದ ಹೇಗೆ ಪಾರಾಗುವುದೆಂದು ಆಲೋಚಿಸುತ್ತೇನೆ.

'ಸಿಕ್ಕಿಕೊಂಡಿದ್ದೇನೆ ನಾನು
ಕೊಳಕು ಮಂಡಲದ ನಡುವೆ
ಕೊಂಕು ನಗೆ, ನರಿಮಾತು, ಕಪಿ ಮುಷ್ಟಿ
ವೃಕೋದರಗಳ ಮಧ್ಯೆ
ಬರೀ ಮುಖವಾಡಗಳ ತೊಟ್ಟು ನಟಿಸುವೀ
ಪರಿವಾರದಿಂದ, ಹೊರಬಿದ್ದು ಹೋಗುವ ಕಾಲ
ಎಂದು ಹೇಗೆ ಬಂದೀತೆಂದು ಕಾಯುತ್ತಾ
ಬಿದ್ದಿದ್ದೇನೆ'."

ಎಂದು ತನ್ನ ಅಸಹಾಯಕತೆಯನ್ನು ತೋರಿಸುವ ಕವಿಗೆ ಇದು ಕೇವಲ ಕವಿಯೊಬ್ಬನ ಅಸಹಾಯಕತೆ ಅಲ್ಲ. ಈ ಲೋಕದ ಮುಖವಾಡಗಳ ನಡುವೆ ದಿಕ್ಕು ತೋಚದೆ ಅದರಿಂದ ಪಾರಾಗಲು ಕಾಯುತ್ತಿರುವ ಅಸಂಖ್ಯಾತ ಅಸಹಾಯಕರ ಪಾಡಾಗಿದೆ. ಇದು ನಿಜ ಸಾಮಾಜಿಕ ಅಸಮಾನತೆಯ ಹಾಗೂ ಮೋಸ, ವಂಚನೆ, ವ್ಯಭಿಚಾರಗಳ ದುರ್ನಡತೆಯ ಒಂದು ಮಾದರಿಯ ವಿಶ್ಲೇಷಣೆಯಾಗಿದೆ. ಇಲ್ಲಿ ಕವಿಯ ಸಾಮಾಜಿಕ ಕಳಕಳಿ ಅತ್ಯಂತ ಮಹತ್ವಪೂರ್ಣವಾದುದಾಗಿದೆ. ಇಡೀ ಸಾಮಾಜಿಕ ಸ್ಥಿತಿಯೇ ಒಂದು ರೀತಿ ಕೊಳಕುಮಂಡಲದಂತಿದೆ. ಇಂತಹ ಸಾಮಾಜಿಕ ಸನ್ನಿವೇಶದ ದುಸ್ಥಿತಿಯಲ್ಲಿ ಸಿಕ್ಕಿಕೊಂಡಿರುವ ಕವಿ ಕೊಂಕು ನಗೆ, ನರಿಯ ಮಾತು, ಕಪಿ ಮುಷ್ಟಿ ಅಷ್ಟೇ ಅಲ್ಲದೆ ಕವಿಯ ಸುತ್ತ ಬರೀ ಮುಖವಾಡಗಳನ್ನು ತೊಟ್ಟು ನಟಿಸುವ ಈ ಪರಿವಾರದಿಂದ, ಹೊರಬರಲು ಹಾತೊರೆಯುತ್ತಿದ್ದಾರೆ. ಇಂತಹ ಸಾಮಾಜಿಕ ದಮನೀಯ ಸ್ಥಿತಿಯ ಅನುಭವದಿಂದ ಹೊರಬಂದ ಕವಿ. ಸಾಮಾಜಿಕ ಮುಖವಾಡಗಳ ನಡುವೆ ತನ್ನಂತೆ ಸಿಕ್ಕಿಕೊಂಡು ವಿಲಪಿಲನೆ ಒದ್ದಾಡುತ್ತಿರುವ ಅನೇಕ ಸಾಮಾನ್ಯ ನುಡಿಗಳಿಗೆ, 'ಬನ್ನಿ ನನ್ನ ಹೃದಯಕೆ' ಎಂದು ಜಿ.ಎಸ್.ಶಿವರುದ್ರಪ್ಪ ಕರೆ ನೀಡುತ್ತಾರೆ.

'ದೀಪವಿರದ ದಾರಿಯಲ್ಲಿ
ತಡವರಿಸುವ ನುಡಿಗಳೇ
ಕಂಬನಿಗಳ ತಲಾತಲದಿ
ನಂದುತಿರುವ ಕಿಡಿಗಳೇ
ಉಸಿರನಿಡುವೆ

ಹೆಸರ ಕೊಡುವೆ

ಬನ್ನಿ ನನ್ನ ಹೃದಯಕೆ"[10]

ದುಷ್ಟ ಸಮಾಜದ ವಾತಾವರಣದಲ್ಲಿ ನಂದುತ್ತಿರುವ ಕಿಡಿಗಳನ್ನು, ಬೆಳಕೇ ಇಲ್ಲದ ದಾರಿಯಲ್ಲಿ ಅಂದರೆ ಅಂಧಕಾರದ ಕತ್ತಲೆಯಲ್ಲಿ ತಡವರಿಸುತ್ತಾ ನಲುಗುತ್ತಿರುವ ನುಡಿಗಳನ್ನು ಕವಿ ಸಮಾಧಾನ ಮಾಡುತ್ತಾ, ನಿಮಗೊಂದು ಉಸಿರ ನೀಡಿ, ಹೆಸರನ್ನು ಕೊಡುವೆನೆಂದು ಭರವಸೆ ನೀಡುತ್ತಾರೆ. ಆ ಮೂಲಕ ಸಾಮಾಜಿಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಒಂದು ಸಣ್ಣ ಪ್ರಯತ್ನವನ್ನು ಜಿ.ಎಸ್.ಶಿವರುದ್ರಪ್ಪ ಮಾಡುತ್ತಾರೆ. ಇದು ಕವಿಗಿರುವ ಸಾಮಾಜಿಕ ಜವಾಬ್ದಾರಿ ಮತ್ತು ಸಾಮಾಜಿಕ ಕಳಕಳಿ ಅಲ್ಲವೇ?

ಜಿ.ಎಸ್.ಶಿವರುದ್ರಪ್ಪರವರ ಇಂತಹ ಸಾಮಾಜಿಕ ಕಳಕಳಿಯು ಅಷ್ಟಕ್ಕೇ ನಿಲ್ಲದೆ ಸಾಮಾಜಿಕ ಬದ್ಧತೆಯನ್ನು ಕಾಪಾಡಿಕೊಂಡು, ವೈಚಾರಿಕತೆಯನ್ನು ಮೇಳವಿಸಿಕೊಂಡು ವ್ಯವಸ್ಥೆಯ ಸಾಮಾಜಿಕ ಅಪಮೌಲ್ಯೀಕರಣವನ್ನು ಪ್ರಶ್ನೆ ಮಾಡುತ್ತವೆ ಮತ್ತು ದೇವರು-ಧರ್ಮದ ಹೆಸರಿನಲ್ಲಿ ಸಮಾಜವನ್ನು ಅಂಧಕಾರದತ್ತ ಕೊಂಡೊಯ್ಯುವಂತಹ ಕೆಟ್ಟ ಸಂಪ್ರದಾಯಗಳ ವಿರುದ್ಧ ನಯವಾಗಿಯೇ ವ್ಯಂಗ್ಯವಾಡುತ್ತಾರೆ. ಇಂತಹ ಸಾಮಾಜಿಕ ವ್ಯಂಗ್ಯತೆಯೊಂದಿಗೆ ಜನಪರ ದನಿಯಾಗಿ ಜಿ.ಎಸ್.ಶಿವರುದ್ರಪ್ಪರವರ ಕವಿತೆಗಳು ಮಾತಾಡುತ್ತವೆ.

'ಕೇಳಿದಿರಾ
ಮಹಾ ಜನರೇ
ಕೇಳಿದಿರಾ?
ದೇವಸ್ಥಾನಗಳನ್ನು ಕಟ್ಟಿಸುತ್ತಾರಂತೆ,
ಇವರು
ಇನ್ನು, ದೇವರುಗಳಿಗೆ ಭಯವಿಲ್ಲ
ಹಾಲಿನ ಮಳೆ ಸುರಿಯುತ್ತದೆ
ಜೇನಿನ ಹೊಳೆ ಹರಿಯುತ್ತದೆ.
ರಾಮರಾಜ್ಯವಾಗುತ್ತದೆ ಇಡೀ ದೇಶ
ಇನ್ನು ತಡವಿಲ್ಲ.

ಆದರೆ ಮಹಾಜನರೇ ಹೇಳಿ,
ಈಗಾಗಲೇ ಹೊಟ್ಟೆಗಿಲ್ಲದೆ ತತ್ತರಿಸುವ

ದೇವಸ್ಥಾನಗಳನ್ನೇನು ಮಾಡೋಣ?
ಬಾಯಿಲ್ಲದೇ ಬತ್ತಲಾಗಿ ಬಿದ್ದ
ದೇಸ್ಥಾನಗಳನ್ನೇನು ಮಾಡೋಣ?
ನೀವೇ ಹೇಳಿ"[11]

ಪರಂಪರೆಯೊಂದನ್ನು ಸಂಪೂರ್ಣವಾಗಿ ಬಲ್ಲ ಕವಿಯೊಬ್ಬ ತನ್ನ ಕಾವ್ಯದ ಮೂಲಕ ವೈಚಾರಿಕ ಚೌಕಟ್ಟುಗಳನ್ನು ಮೀರಿ ಅದನ್ನು ಮುರಿಯಲು ಸಾಧ್ಯ. ಯಾಕೆಂದರೆ ಸಮಾಜದಲ್ಲಿ ಆಳವಾಗಿ ಬೇರೂರಿರುವ ಸಾಂಸ್ಕೃತಿಕ ಪರಂಪರೆ ಇದಕ್ಕೆ ಕಾರಣ. ಭಾರತೀಯ ಸಮಾಜದ ಬದುಕಿನ ಈ ಎಲ್ಲಾ ಸೂಕ್ಷ್ಮತೆಯನ್ನು ಅರಿತಿರುವ ಕವಿಗೆ ಸಾಮಾಜಿಕ ಸಿದ್ಧಾಂತದ ತಾತ್ವಿಕತೆ ಅರ್ಥವಾಗುತ್ತದೆ. ಈ ಎಲ್ಲಾ ತಾತ್ವೀಕರಣದ ವೃಷ್ಟಿಪ್ರಜ್ಞೆ, ಸಮಷ್ಟಿ ಪ್ರಜ್ಞೆಯೆಡೆಗೆ ಈ ವಿಚಾರ ಸಾಗುತ್ತದೆ. ಈ ಬಗೆಯ ಕವಿತೆಗಳು ಎಲ್ಲವನ್ನೂ ಒಳಗೊಂಡು ಬದುಕನ್ನು ಗ್ರಹಿಸುತ್ತದೆ. "ಏನೇ ಇರಲಿ ಜಿ.ಎಸ್.ಶಿವರುದ್ರಪ್ಪ ಎಲ್ಲವನ್ನೂ ಒಳಗೊಂಡಂತೆ ಬದುಕನ್ನು ಗ್ರಹಿಸಿದವರು ಸಮತೋಲನವನ್ನು ಕಾಯ್ದುಕೊಂಡವರು. ಆದರೂ ಅವರ ಒಲವು ಅನಾವರಣದ್ದೇ. ವಿವೇಕಾನಂದ ಮಾರ್ಗ ಪ್ರಿಯವಾದದ್ದೇ, ಅದಕ್ಕೆ ಅವರು ಹಮ್ಮಿನಿಂದ ಕಾವ್ಯವನ್ನಾಗಲೀ, ಜೀವನವನ್ನಾಗಲೀ ಕಟ್ಟುವುದೇ ಇಲ್ಲ. ಬೆಳಕಿಗಾಗಿ ಹಂಬಲಿಸುವ ಉದ್ವೇಗಕ್ಕೆ ಒಳಗಾಗದೆ, ನ್ಯಾಯವನ್ನು ಬಿಟ್ಟುಕೊಡದೆ ಸಮಾಜಮುಖಿಯಾಗಿ ಸ್ಪಂದಿಸುವ ಮನಸ್ಸು. ಅವರ 'ಹಣತೆ' ಕವಿತೆ ಇದಕ್ಕೆ ಪುರಾವೆಯನ್ನೊದಗಿಸಬಲ್ಲದು'.[12]

'ಹಣತೆ ಹಚ್ಚುತ್ತೇನೆ ನಾನು,
ಈ ಕತ್ತಲನ್ನು ಗೆದ್ದು ನಿಲ್ಲುತ್ತೇನೆಂಬ ಜಿದ್ದಿನಿಂದಲ್ಲ
ಲೆಕ್ಕವೇ ಇರದ ದೀಪಾವಳಿಯ ಹಡಗುಗಳೆ
ಇದರಲ್ಲಿ ಮುಳುಗಿ ಕರಗಿರುವಾಗ
ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ'.

ಈ ಲೋಕದೊಳಗೆ ತುಂಬಿರುವ ಕತ್ತಲೆಯನ್ನು ಓಡಿಸುವ ಅಲ್ಲಿ ಬೆಳಕನ್ನು ಪ್ರತಿಷ್ಠಾಪಿಸುವ ಆಸೆ ಕವಿಗಿದ್ದರೂ, ಈಗಾಗಲೇ ಲೆಕ್ಕವಿರದ ದೀಪಾವಳಿಯ ಹಡಗುಗಳು ಇದರಲ್ಲಿ ಮುಳುಗಿ ಕರಗಿದೆ. ಕತ್ತಲೆಯನ್ನು ಜಯಿಸುವ ಮಾರ್ಗವನ್ನು ಯಾರೂ ಕಂಡುಕೊಂಡಿಲ್ಲ. ಹಾಗಾಗಿ ಸಮಾಜದಲ್ಲಿ ತುಂಬಿ ತುಳುಕುತ್ತಿರುವ ಕತ್ತಲೆಯನ್ನು ಗೆದ್ದು ನಿಲ್ಲುವ ಜಿದ್ದು ಕವಿಗಿಲ್ಲ. ಆದರೂ ಹಣತೆ ಹಚ್ಚುತ್ತೇನೆ ನಾನೂ ಎನ್ನುವ ಕವಿ ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ಕವಿಗಿಲ್ಲ. "ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು ನೋಡಬಹುದೆಂಬ ಒಂದೆ ಒಂದು

ಆಸೆಯಿಂದ ಹಣತೆ ಆರಿದ ಮೇಲೆ ನೀನು ಯಾರೋ ಮತ್ತೆ ನಾನು ಯಾರೋ" ಎಂಬ ಜಿ.ಎಸ್.ಶಿವರುದ್ರಪ್ಪರವರ ನಿಲುವ ಅತ್ಯಂತ ಪಾರದರ್ಶಕವಾದುದು. ತಿಳಿಯಾದ ಮಾನಸಿಕ ಸ್ಥಿತಿಯ ನಿರ್ಮಾಣದಿಂದಾಗಿ ಸಾಮಾಜಿಕ ಮೌಲ್ಯಗಳನ್ನು ಉನ್ನತೀಕರಿಸುವ ತಾತ್ವಿಕ ಚಿಂತನೆಯಾಗಿದೆ ಆಸರೆ ಇಂತಹ ಮೌಲ್ಯಗಳ ತಾತ್ವಿಕತೆಗೆ ಸಾಮಾಜಿಕ ಹೊಡೆತ ಬಿದ್ದು ಅದರಿಂದ ಪಾರಾಗುವುದು ಹೇಗೆ ಎಂಬ ಚಿಂತೆ ಕವಿಗೆ ಆವರಿಸಿದೆ ಆದ್ದರಿಂದ ಅವರು 'ಬೆಳಗಾಗದಿರಲಿ' ಎಂಬ ಪದ್ಯದಲ್ಲಿ ಹೀಗೆ ಹೇಳುತ್ತಾರೆ.

'ನಡೆದೂ ನಡೆದೂ ಸೋತು ಸುಣ್ಣವಾಗಿದೇನೆ
ದಾರಿಯ ತುಂಬ ಉರಿವ ಮನೆ, ಮುರಿದ ಸೇತುವೆ
ಬುಸುಗುಡುವ ಹಳ್ಳಕೊಳ್ಳ, ಎಷ್ಟೊಂದು ದಾಟಲೋ ನಾನು?
ಕರುಣೆಯಿಲವೆ ನಿನಗೆ ಬೆಳಗಾಗದಿರಲಿ'[13]

ಸಾಮಾಜಿಕ ತಲ್ಲಣ ಉಂಟು ಮಾಡಿದ ವಸ್ತುಸ್ಥಿತಿಯಿಂದಾಗಿ ಕವಿ ಮನಸ್ಸು ತಲ್ಲಣಕ್ಕೆ ಒಳಗಾಗುತ್ತದೆ. ಕವಿ ನಡೆದು ಬರುವ ದಾರಿಯಲ್ಲಿ ಉರಿವ ಮನೆಗಳಿವೆ, ಮುರಿದು ಬಿದ್ದ ಸೇತುವೆಗಳಿಗೆ, ಬುಸುಗುಡುವ ಹಳ್ಳ-ಕೊಳ್ಳಗಳಿವೆ, ಇವುಗಳನ್ನೆಲ್ಲಾ ದಾಟಿ ಬರಲು ಅಸಾಧ್ಯವಾಗಿ ಕವಿಗೆ 'ಎಷ್ಟೊಂದು ದಾಟಲೋ' ಎಂದು ಸಾಮಾಜಿಕ ವ್ಯಂಗ್ಯವಾಡುತ್ತಾ, ತಾನು ಸೋತಿರುವುದನ್ನು ಸಹ ವ್ಯಕ್ತಪಡಿಸುತ್ತಾರೆ. ಆದರೂ ತಾನು ಸೋತಿರುವ ಬಗೆಗೆ ಅಸಹ್ಯ ಪಡದೇ ತನ್ನ ಸೋಲು ಇಡೀ ದೇಶದ ಸೋಲು ಎಂಬುದನ್ನು 'ಒಡೆದ ಕನ್ನಡಿ' ಎಂಬ ಕವಿತೆಯಲ್ಲಿ ಭಾರತದ ಸ್ಥಿತಿಪ್ರಜ್ಞೆಯನ್ನು ಅನಾವರಣಗೊಳಿಸುತ್ತಾರೆ. ತನ್ನ ಬದುಕು ಬೇರೆಯಲ್ಲ, ಭಾರತದ ಬದುಕು ಬೇರೆಯಲ್ಲ ಎನ್ನುವ ವಾಸ್ತವ ಪ್ರಜ್ಞೆಯ ನೆಲೆಗಳು ಇಲ್ಲಿ ಗೋಚರಿಸುತ್ತವೆ.

'ಒಂದು ರೀತಿಯಲ್ಲಿ ಈ ಬದುಕೆಲ್ಲವೂ
ಗಡಿನಾಡಿನ ಯುದ್ಧ
ಜಾತಿಯ ಗಡಿ, ನೀತಿಯ ಗಡಿ
ದೇಶದ ಗಡಿ, ಭಾಷೆಯ ಗಡಿ
ವರ್ಣದ ಗಡಿ, ಪಂಥದ ಗಡಿ
ಹೆಜ್ಜೆ ಹೆಜ್ಜೆಗೂ ಒಳಗೂ ಹೊರಗೂ
ಗಡಿ ಗುರುತಿನ ಗೆರೆ ಗೋಡೆ
ಕಾವಲು ನಿಂತಿರುವರು ಪಂಡಿತರೂ ಶಾಸ್ತ್ರಿಗಳೂ
ಸೈನಿಕರೂ ಎಲ್ಲ ಕಡೆ'[14]

'ಜಾತಿ' – 'ನೀತಿ' – 'ದೇಶ' – 'ಭಾಷೆ' – 'ವರ್ಣ' – 'ಪಂಥ'ದ ರಾಗದ್ವೇಷಗಳು ದೇಸದೆಲ್ಲೆಡೆ ತಾಂಡವವಾಡುತ್ತಿದೆ. ಆದ್ದರಿಂದ ಮನಸ್ಸುಗಳು ಛಿದ್ರಗೊಂಡಿವೆ. ಇಲ್ಲಿ ಮಾನವೀಯ ಮೌಲ್ಯಗಳು ಅಧಃಪತನಗೊಂಡು ಒಡೆದ ಕನ್ನಡಿಯಂತೆ ಎಲ್ಲೆಲ್ಲೂ ವಿಕೃತಿಯೇ ಕಾಣುತ್ತಿದೆ ಎಂಬ ವಿಷಾದದ ಧ್ವನಿ ಇಲ್ಲಿ ವ್ಯಕ್ತವಾಗುತ್ತದೆ.

'ಒಡೆದಿರುವೀ ಕನ್ನಡಿ ಬಿರುಕಿನ ಗೆರೆಗೆರೆಯೇ
ಗಡಿರೇಖೆಯ ಗುರುತು
ಕಾಣುವುದೆಂತೀ ಸಮಗ್ರ ಮಾನವ್ಯದ ಮುಖವಿದರೊಳು
ಬರಿ ವಿಕೃತಿಯ ಹೊರತು?'[15]

ಈ ಸಮಾಜದಲ್ಲಿ ಸಮಗ್ರವಾದ ಮಾನವ್ಯದ ಮುಖವನ್ನು ಕಾಣಲು ಅಸಾಧ್ಯವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕವಿಗೆ ಕಾಡುವ ಅಸಮತೋಲನ ಸಮಾಜದ ವಾತಾವರಣವು ಕವಿ ಇರುವ ಸಮಾಜದ ಭಾಗವೇ ಆಗಿದೆ. ವಾಸ್ತವದಲ್ಲಿ ಮೌಲ್ಯಗಳನ್ನು ಕುರಿತು ಮಾತಾಡುವವುದೇ ಬೇಡವೆಂದು ಇಡೀ ಸಮಾಜ ಭ್ರಷ್ಟತೆಯಲ್ಲಿ ನಲುಗಿರುವುದನ್ನು ವಿವೇಚಿಸುತ್ತಾರೆ.

'ಖಳನಾಯಕರು ಸೋಲುವುದು
ಕಾವ್ಯ ಅಥವಾ ನಾಟಕಗಳಲ್ಲಿ ಮಾತ್ರ
ವಾಸ್ತವದಲ್ಲಿ ಅವರದೇ ವಿಜೃಂಭಣೆ
ಮತ್ತೆ ಪ್ರಧಾನ ಪಾತ್ರ
ಮಾತಾಡುವುದು ವ್ಯರ್ಥ
ಮೌಲ್ಯಗಳನ್ನು ಕುರಿತು
ತತ್ವಗಳನ್ನು ಕುರಿತು
ಅವರೇ ಹಿಡಿದಿರುವಾಗ ಸಮಸ್ತ ಸೂತ್ರ
ಎಲ್ಲಿ, ಪರಿಸರವೆಲ್ಲ ಭ್ರಷ್ಟವೋ ಅಲ್ಲಿ
ಮುಗ್ಧತೆಗೆ, ನೈಜತೆಗೆ, ಸಾಚಾತನಕ್ಕೆ ಬೆಲೆ ಎಲ್ಲಿ?'[16]

ಈ ಸಮಾಜದಲ್ಲಿ ಭ್ರಷ್ಟತೆಗೆ ಮಾನ್ಯತೆದೆ ಹೊರತು, ನೈಜತೆಗೆ, ಸಾಚಾತನಕ್ಕೆ ಬೆಲೆಯೇ ಇಲ್ಲವಾಗಿದೆ. ಸಮಸ್ತ ಸೂತ್ರವೆಲ್ಲಾ ಭ್ರಷ್ಟರ ಕೈಯಲ್ಲಿ ಸಿಲುಕಿ ನಲುಗಿರುವಾಗ ಮೌಲ್ಯಗಳ ಕುರಿತು ಯಾರಿಗೆ ಹೇಳುವುದು? ಎಂದು ಕವಿ ಪ್ರಶ್ನಿಸುತ್ತಾರೆ, ಇಂತಹ ನಿಲುವು ಸಾಮಾಜಿಕ ಘಟನೆಯ ದಾಖಲೆಯಂತೆ ಪ್ರತಿನಿಧಿಸುತ್ತವೆ.

'ಗುಡಿ–ಗೋಪುರ ಉರುಳುತಿವೆ
ಹಳೆಯ ಪ್ರತಿಮೆ ತೇಲುತಿವೆ

ಎನ್ನುವ ಕವಿ,

ಎದೆ ಎದೆಗಳ ನಡುವೆ ಇದ್ದ
ಸೇತುವೆಗಳು ಮುರಿದಿವೆ
ಭಯ–ಸಂಶಯ–ತಲ್ಲಣಗಳ
ಕಂದಕಗಳು ತೆರೆದಿವೆ'[17] (ಸಮಗ್ರ ಕಾವ್ಯ, ಪುಟ–420)

ಇಂತಹ ಸಾಮಾಜಿಕ ಪ್ರಜ್ಞೆ ಕವಿಗೆ ಗೋಚರಿಸಿದೆ. ಎಲ್ಲೆಲ್ಲೂ ಭಯ, ಆತಂಕ, ಅನುಮಾನ ಇತ್ಯಾದಿ ತಲ್ಲಣಗಳು ಸ್ಥಿತಿನಿರ್ಮಿತವಾಗಿ ಮನುಷ್ಯ–ಮನುಷ್ಯರ ನಡುವೆ ಪ್ರೀತಿ–ಸ್ನೇಹಗಳ ಸೇತುವೆಗಳು ಮುರಿದು ಕಂದಕಗಳು ತೆರೆದುಕೊಂಡಿರುವುದನ್ನು ಕವಿ ಸೌಮ್ಯವಾಗಿಯೇ ಪ್ರತಿರೋಧಿಸುತ್ತಾರೆ.

'ಎಲ್ಲೋ ಹುಡಿಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ–ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ
ಎಲ್ಲಿದೆ ನಂದನ ಎಲ್ಲಿದೆ ಬಂಧನ
....
ಎಷ್ಟು ಕ್ಷಷ್ಟವೋ ಹೊಂದಿಕೆ ಎಂಬುದು
ನಾಲ್ಕು ದಿನದ ಈ ಬದುಕಿನಲಿ!'[18]

ಇಲ್ಲಿ ಹುಡುಕಾಡವೊಂದರ ನೆಲೆ ಮಾತ್ರ ಆಗಿರದೆ ಹೊಂದಾಣಿಕೆಯ ಪ್ರಶ್ನೆಯು ಬಹಳ ಮುಖ್ಯವಾಗಿ ಕಾಣಿಸುತ್ತದೆ. ದೇವಚರ ಅಸ್ತಿತ್ವವನ್ನು ಉಳಿಸಿಕೊಂಡೇ, ದೇವರನ್ನು ಮಂದಿರಗಳಲ್ಲಿ ಹುಡುಕಾಡುವ ಬದಲು ನಮ್ಮ ಅಂತರಂಗದಲ್ಲೇ ಹುಡುಕಬೇಕು ಎಂದು ಸಮಾಜಕ್ಕೆ ಕರೆ ನೀಡುತ್ತಾರೆ. ಆದರೂ ಹೊಂದಾಣಿಕೆ ಎಂಬುದು ತುಂಬಾ ಕಷ್ಟ. ಬದುಕಿನಲ್ಲಿ ಹೊಂದಾಣಿಕೆಯೇ ಮುಖ್ಯವೆಂದು ಭಾವಿಸುತ್ತಾರೆ. ಈ ಮೂಲಕ ಸಾಮಾಜಿಕ ವಾಸ್ತವತೆಗೆ ನೀಡಿರುವ ಅಭಿವ್ಯಕ್ತಿ ನಿಚ್ಚಳವಾಗಿದೆ. 'ರಾಜಕೀಯ–ಸಾಮಾಜಿಕ–ಸಾಹಿತ್ಯಿಕ ಕ್ಷೇತ್ರಗಳ ಇಂತಹ ಧಮನೀಯ ಪರಿಸ್ಥಿತಿಯನ್ನು ಇವರ ವಿಡಂಬನಾತ್ಮಕ ಕವನಗಳು ಬಯಲು ಮಾಡುತ್ತವೆ. ಆದರೆ ಇಲ್ಲಿ ನಾವು ಮರೆಯಬಾರದ ಒಂದು ಅಂಶವೆಂದರೆ ಸಾಧಾರಣವಾಗಿ ವಿಡಂಬನಕಾರ ತಾನು ವಿಡಂಬಿಸುವ ಸಮಾಜದಿಂದ/ಸಮುದಾಯದಿಂದ ಹೊರಗೆ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಆದರೆ ಜಿ.ಎಸ್.ಶಿವರುದ್ರಪ್ಪ ಅವರಿಗೆ

ತಾವೂ ಅಂತಹ ಸಮಾಜದ/ಸಮುದಾಯದ ಒಂದು ಭಾಗವೇ ಎಂಬ ಅರಿವು ಸರ್ವತಾ ಜಾಗೃತವಾಗಿರುತ್ತದೆ'.[19]

ಇಂತಹ ಜಾಗೃತ ಪ್ರಜ್ಞೆ ಜಿ.ಎಸ್.ಶಿವರುದ್ರಪ್ಪರಿಗೆ ಯಾವತ್ತೂ ಇರುತ್ತದೆ. ಆದ್ದರಿಂದ ಶತ ಶತಮಾನದ ಮಾಘ ಮೌನದಲಿ / ನೂರು ಗಾಳಿಗಳ ಸುಲಿಗೆಯ ದಾಳಿಗೆ / ವಸಂತ ಮೂಡುವುದೆಂದಿಗೆ? ಎಂದು ಪ್ರಶ್ನಿಸುತ್ತಾ, ಸಮಾಜದಲ್ಲಿ ಸುಲಿಗೆ ದಾಳಿ ನಿರಂತರವಾದ ಸಂಗತಿಯನ್ನು ಪರಿಚಯಿಸುತ್ತಾರೆ.

'ಎಲ್ಲಿದ್ದಾನೆ ಮನುಷ್ಯ, ಎಲ್ಲವನ್ನೂ ಮಾರು
ಕಟ್ಟೆಯ ಮಾಲನ್ನಾಗಿ ಪರಿವರ್ತಿಸುವ
ಈ ವ್ಯವಸ್ಥೆಯ ಒಳಗೆ? ಕಲೆ-ಸಾಹಿತ್ಯ-ಸಂಸ್ಕೃತಿ
ಗಳೂ ಈಗ ತಕ್ಕಡಿಯೊಳಗೆ!'[20]

ಈ ವ್ಯವಸ್ಥೆಯ ಒಳಗೆ ಎಲ್ಲವೂ ಮಾರುಕಟ್ಟೆಯ ಸರಕಾಗಿ ಹೋಗಿದ್ದು, ಕಲೆ, ಸಾಹಿತ್ಯ, ಸಂಸ್ಕೃತಿತಳೆಲ್ಲವೂ ಮಾರಾಟದ ಮಾಲಾಗಿದೆ ಎಂದು ವಿಡಂಬಿಸುತ್ತಾ 'ಎಲ್ಲಿದ್ದಾನೆ ಮನುಷ್ಯ' ಎಂದು ಪ್ರಶ್ನಿಸುತ್ತಾರೆ. ಸಮಾಜದಲ್ಲಿ ಮಾನವೀಯತೆ ಕಳೆದು ಹೋಗಿರುವ ಸಂಗತಿಯನ್ನು ವಿವೇಚಿಸಲಾಗಿದೆ. ಮಾನವೀಯ ಮೌಲ್ಯಗಳು ಅದಃಪತನವಾಗಿ 'ಮನ್ಯಷ್ಯತ್ವ'ದ ನೆಲೆ ನಾಶಾವಾಗಿರುವ ಇಂತಹ ಸಮಾಜದಲ್ಲಿ ಮನುಷ್ಯನಾಗಿ ಬದುಕುವುದು ಬಲು ಕಷ್ಟದ ಕೆಲಸವಾಗಿದೆ. ಆದ್ದರಿಂದ ಜಿ.ಎಸ್.ಶಿವರುದ್ರಪ್ಪರವರು ತಮ್ಮ 'ದೊಡ್ಡಪ್ಪ ಹೇಳಿದ್ದು' ಕವನದಲ್ಲಿ ಹೀಗೆ ವಿಡಂಬಿಸುತ್ತಾರೆ.

'ಅಯ್ಯಾ ಮರಿ
ನೀನು ಕುರಿಯಾಗು
ಅಥವಾ ನರಿಯಾಗು'

ಸಮಾಜದಲ್ಲಿ ಬದುಕನ್ನು ರೂಪಿಸಿಕೊಳ್ಳ ಬೇಕೆಂದರೆ ಕುರಿಯಾಗಿರಬೇಕು ಅಥವಾ ನರಿಯಾಗಿರಬೇಕು. ಕುರಿಯಾದರೆ ಒಡೆಯನ ಮಾತಿನಂತೆ ತಲೆಯಾಡಿಸಿಕೊಂಡು ಬದುಕಬಹುದು. ನರಿಯಾಗಿ ಬದುಕಿದರೆ ನರಿಯ ಉಪಾಯದಂತೆ, ಅನೇಕ ರೀತಿಯಲ್ಲಿ ಬಾಲವಾಡಿಸುತ್ತಾ ಬದುಕಬಹುದು ಎಂದು ವಿವರಣೆ ನೀಡುತ್ತಲೇ ಕವನದ ಕೊನೆಯ ಸಾಲುಗಳು ಅತ್ಯಂತ ಮಾರ್ಮಿಕವಾಗಿ ಸಮಾಜದ ಕಠೋರ ಸತ್ಯವನ್ನು ಮುಂದಿಡುತ್ತಾರೆ.

'ಈ ಎರಡೂ ಆಗದೆ ಮನುಷ್ಯನಾಗಿ ಬದುಕುತ್ತೇನೆ
ಎಂದರೆ,
ಬಂತು ನಿನಗರ ತೊಂದರೆ,
ಆದ್ದರಿಂದ ಹೇಳುತ್ತೇನೆ ಕೇಳು ಮರೀ
ನೀನಾಗು ಕುರಿ ಅಥವಾ ನರಿ'[21]

ಟಿಪ್ಪಣಿಗಳು

1. 'ಎಲ್ಲೋ ಮಗು ಅಳುತಾ ಇದೆ' / ಸಮಗ್ರ ಕಾವ್ಯ, ಪುಟ–424
2. 'ಸಾಕು ನಿಲ್ಲಿಸು ನಿನ್ನ ಸಾಮಗಾನ' / ಸಮಗ್ರ ಕಾವ್ಯ, ಪುಟ–349
3. 'ಆಟ' / ಸಮಗ್ರ ಕಾವ್ಯ ಪುಟ–49
4. 'ಆಟ – ಇದು ಲೋಕ ಇದು ಬಾಳು' / ಸಮಗ್ರ ಕಾವ್ಯ, ಪುಟ 49
5. ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ ಕಾವ್ಯ – ಒಂದು ಮರು ಓದು ಸಾಮಾಜಿಕ ತಲ್ಲಣ, ಪುಟ–50
6. 'ಈ ನೆಲಕ್ಕೆ ಸದಾ ಚಿಂತೆ' / ಆಕಾಶ–ನೆಲ, ಪುಟ–621
7. ಪುಟ–388
8. ಕವಿತೆಗೆ ಪುಟ–258
9. ನನ್ನ ಸುತ್ತ, ಪುಟ–389
10. ಬನ್ನಿ ನನ್ನ ಹೃದಯಕೆ, ಪುಟ–478
11. ನೀವೆ ಹೇಳಿ, ಪುಟ–513
12. ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪರವರ ಕಾವ್ಯ – ಒಂದು ಮರು ಓದು, ಪುಟ–63
13. ಸಮಗ್ರ ಕಾವ್ಯ, ಪುಟ–330
14. ಸಮಗ್ರ ಕಾವ್ಯ, ಪುಟ–338
15. ಸಮಗ್ರ ಕಾವ್ಯ, ಪುಟ–338
16.
17. ಸಮಗ್ರ ಕಾವ್ಯ, ಪುಟ–420
18. ಸಮಗ್ರ ಕಾವ್ಯ, ಪುಟ–418
19. ಪರಂಪರೆ ಪ್ರತಿರೋಧ – ಸಿ.ಎನ್. ರಾಮಚಂದ್ರನ್
    ಜಿ.ಎಸ್.ಶಿವರುದ್ರಪ್ಪ : ಸಮಗ್ರ ಕಾವ್ಯ & ವ್ಯಕ್ತಿ ಮಧ್ಯ, ಪುಟ–58
20. ಸಮಗ್ರ ಕಾವ್ಯ, ಪುಟ–573
21. ಸಮಗ್ರ ಕಾವ್ಯ, ಪುಟ–415

ಅಧ್ಯಾಯ – 3

ಪ್ರೇಮ ಮತ್ತು ಪ್ರಕೃತಿ ದರ್ಶನ

ಪ್ರಕೃತಿ ದರ್ಶನದಲ್ಲಿ ನಾವು ಹುಡುಕ ಬೇಕಾಗಿರುವುದು ಹೊಸ ನಿಸರ್ಗವನ್ನಲ್ಲ, ಹೊಸ ಮನುಷ್ಯನನ್ನು. ಪ್ರಕೃತಿ ದರ್ಶನದಲ್ಲಿ ಸಂಭ್ರಮಿಸುವ ಸ್ಥಿತ್ಯಂತರಗಳು ನೋಡುವಿಕೆಯ ಕ್ರಮಗಳಲ್ಲಿ ಆಗುವ ಬದಲಾವಣೆ ಸಂಬಂಧಿಸಿದ್ದು ಎನ್ನುತ್ತಾರೆ ಡಿ.ಆರ್. ನಾಗರಾಜ ಅವರು. ಈ ಹಿನ್ನೆಲೆಯಿಂದ ಜಿ.ಎಸ್.ಶಿವರುದ್ರಪ್ಪರವರು ಕೂಡಾ ಹೊರತಾಗಿಲ್ಲ. ಜಿ.ಎಸ್.ಶಿವರುದ್ರಪ್ಪರವರ ಕಾವ್ಯಪ್ರೇಮ ಮುಕ್ತ ಪ್ರಕೃತಿಯೊಡನೆ ಸಂವಾದಿಸಿದೆ. ಲೋಕಾನುಭವದಲ್ಲಿ ವಿಸ್ಮಯಗಳಿವೆ. ಜಿ.ಎಸ್.ಶಿವರುದ್ರಪ್ಪ ಅವರಿಗೆ ಕಾಣುವ ವಿಸ್ಮಯಗಳನ್ನು ತಮ್ಮ ಕಾವ್ಯಗಳಲ್ಲಿ ದರ್ಶನ ಮಾಡುತ್ತಾ ಸಾಗುತ್ತಾರೆ. ಪ್ರೇಮ ಮತ್ತು ಪ್ರಕೃತಿ ದರ್ಶನಸ ವಿಷಯದಲ್ಲಿ ಜಿ.ಎಸ್.ಶಿವರುದ್ರಪ್ಪರವರ ಆಧ್ಯಾತ್ಮಿಕ ಸೌಂದರ್ಯಾನುಭವವನ್ನು ಪ್ರಕೃತಿ ಗೀತಗಳಲ್ಲಿ ನಾವು ಕಾಣಬಹುದು.

ಜಿ.ಎಸ್. ಶಿವರುದ್ರಪ್ಪರವರ ಪ್ರಕೃತಿ ಕವನಗಳಲ್ಲಿ ಭಾಷಿಕ ಲಯಗಳು, ದೈನಂದಿನ ಲಯಗಳು, ಏಕಾಗ್ರತೆಯನ್ನು ಪಡೆಯುವ ಹಂಬಲ, ಜಾಗೃತ ಪ್ರಜ್ಞೆ ಕಾವ್ಯಾಕೃತಿಗೆ ಬೇಕಾದ ನಿರ್ಮಿತಿ ಇತ್ಯಾದಿಯಾಗಿ ಅಂಶಗಳು ನಿಚ್ಚಳತೆಯಾಗಿ ಕಾಣುತ್ತವೆ.

'ಮೂಡಿ ಬಾ, ಮುಡಿ ಬಾ, ಮೂಡಿ ಬಾರಾ
ನವ ದಿವ್ಯ ದಿನಮಣಿಯೆ ಮೂಡಿ ಬಾರಾ
....
ಯುಗ ಯುಗಾಂತರದೆದೆಯ ಚೆಲುವಿಕೆಯೆ ಚೇತನವೆ
ಯುಗ ಯುಗದ ಜೀವನದ ನಿತ್ಯ ಸಂಜೀವಿನಿಯೆ
...............................ಮೂಡಿ ಬಾರಾ!'[1]

ಕುವೆಂಪು ಅವರ ಪ್ರಮುಖ ಶಿಷ್ಯರಾಗಿದ್ದ ಜಿ.ಎಸ್.ಶಿವರುದ್ರಪ್ಪರವರ ಮೇಲೆ ಕುವೆಂಪು ಅವರ ದಟ್ಟ ಪ್ರಭಾವ ಬೀರಿರುವುದು ಗುರುತಿಸಬೇಕಾಗಿಲ್ಲ. ಸೂರ್ಯೋದಯದೊಂದಿಗೆ ಪ್ರಕೃತಿಯ ಚೆಲುವಿಕೆ ಒಂದು ನೂತನ ರೂಪವನ್ನೇ ಕೊಡುವ ಜಿ.ಎಸ್.ಶಿವರುದ್ರಪ್ಪರವರ ಪ್ರಕೃತಿ ದರ್ಶನ ಮಾಡಿಸುವುದೇ ಹೀಗೆ.

'ಪ್ರಕೃತಿ ಪೂಜೆಗೆ ಬನ್ನಿರೆಲ್ಲರು
ಪ್ರಕೃತಿ ಪೂಜೆಗೆ ಬನ್ನಿರಿ,
ಕಣ್ಣು ಹೃದಯಗಳೆಂಬ ಎರಡನು
ಮಾತ್ರ ಇಲ್ಲಿಗೆ ತನ್ನಿರಿ

ಇರಲಿ ಬಾ ಆ ಜಗದ ಜಂಜಡ
ಬರಿಯ ಮಣ್ಣಿನ ಗಡಿಬಿಡಿ
ಇಲ್ಲಿ ಸಂದರ ಶಿವನ ದರ್ಶನ
ಭವ್ಯವಾಗಿದೆ ಈ ಗುಡಿ'.[2]

'ವಚನಕಾರರ ಆಧ್ಯಾತ್ಮಿಕ ಸೌಂದರ್ಯದ ಆವಿಷ್ಕಾರ ಪಡೆಯುವ ಹಾಗೂ ಪ್ರಕೃತಿ ಆರಾಧನೆಗೆ ಆಹ್ವಾನ ನೀಡುವ ಕವಿಯು ಕಣ್ಣು, ಹೃದಯ ಮಾತ್ರ ಇಲ್ಲಿಗೆ ತನ್ನಿ ಎನ್ನುತ್ತಾ ಈ ಜಗದ ಜಂಜಾಟಗಳು ಎಷ್ಟೇ ಇದ್ದರೂ ಇರಲಿ ಪ್ರಕೃತಿ ಸೌಂದರ್ಯವೇ ಭವ್ಯವಾದ ಶಿವನ ಗುಡಿ. ಪ್ರಕೃತಿ ದರ್ಶನವೇ ದೈವ ದರ್ಶನವೆಂದು ಪ್ರಕೃತಿಯಲ್ಲಿ ಆಧ್ಯಾತ್ಮವನ್ನು ಕಾಣುತ್ತಾರೆ, ಹೊಸಯುಗದ, ಹೊಸವರ್ಗದ ಈ ಅನುಭವಕ್ಕೆ ಆಕಾರ ಕೊಡುವಲ್ಲಿ ಬಳಕೆಯಾದ ಭಾಷಾ ಸಾಮಾಗ್ರಿ ಹಳೆಯದೆ. ಈ ಹಳೆಯ ಭಾಷಿಕಲಯಗಳಿಗೆ ತಮ್ಮದೇ ಆದ ವಿಧ ಇದೆ. ನಿಯಂತ್ರಣದ ಆಂತರಿಕ ತರ್ಕವಿದೆ. ಮುಖ್ಯ ಸಂಗತಿಯೆಂದರೆ ಈ ಭಾಷಿಕ ಲಯಗಳ ಪರಂಪರೆಯಲ್ಲಿ ಜ್ಞಾತೃ-ಜ್ಞೇಯಗಳ ನಡುವೆ ಅಂತರವಿಲ್ಲ. ಸಬ್ಜೆಕ್ಟಿವ್ ಮತ್ತು ಆಬ್ಜೆಕ್ಟಿವ್‌ಗಳ ನಡುವಣ ಭೇದವಿರದ ಕಾವ್ಯ ಪರಂಪರೆಗೆ ಸೇರಿದ ಭಾಷಿಕ ಆಕೃತಿಗಳು ಅವು. ಕನ್ನಡ ಪರಂಪರೆಯ ಮಟ್ಟಿಗೆ ಕಾವ್ಯಕೃತಿಯ ಮಟ್ಟಿಗೆ ಜ್ಞಾತೃವನ್ನು ಬೇರ್ಪಡಿಸುವ ಮೂಲಕ ಸಬ್ಜೆಕ್ಟಿವ್ ಅಂತ ಕರೆಯಬಹುದಾದ ನಿರ್ಮಿತಿಯನ್ನು ಸ್ವಲ್ಪ ಮಟ್ಟಿಗೆ ವಚನಕಾರರಲ್ಲಿ ಕಾಣಬಹುದು'.[3]

ಜಿ.ಎಸ್.ಶಿವರುದ್ರಪ್ಪರವರಿಗೆ ಪ್ರಕೃತಿಗಿರುವ ನಂಟು ಅತ್ಯಂತ ಪ್ರಭಾವಶಾಲಿಯಾದುದು. ಆಕಾಶ-ಕಡಲು, ಮೋಡ-ಮಳೆ, ನೆಲ-ಋತು ಬದಲಾವಣೆ ಗಂಡು-ಹೆಣ್ಣು ಕೂಡ ನಿಸರ್ಗದ ಭಾಗವಾಗಿ ಕವಿತೆಗಳಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾರೆ.

'ಯಾರಿಗಾಗಿ ಸೊಬಗು ಇಂತು
ಸೂರೆಯಾಗಿ ಹೋಗಿದೆ
ಶಶಿಯ ಕೃಪೆಯ ಜೊನ್ನವಿಂತು
ಜಗವನ್ನೆಲ್ಲಾ ಹಬ್ಬಿದೆ.
ಅರ್ಧರಾತ್ರಿ! ಲೋಕವೆಲ್ಲ
ದಣಿದು ಮಲಗಿದೆ
ಮೌನಧಾತ್ರಿ ಶಿಶುವಿನಂತೆ
ಮುಗ್ಧವಾಗಿದೆ'[4]

ಇಂದಿನ ಯಾಂತ್ರಿಕರಣದ ಬದುಕಿನಲ್ಲಿ ಪ್ರಕೃತಿ ಸಂದರ್ಯದ ದರ್ಶನ ಮಾಡಿಸುವ ಕವಿಯ ನಿಲುವು. ಶಶಿಯ ಹೊಂಬೆಳಕು ಧರೆಗೆ ಚೆಲ್ಲಿ ಧಾರಿಣಿ ಮುಗ್ಧತೆಯಿಂದ ನಲಿದಾಡಿದೆ ಎಂಬುದು ಸೌಂದರ್ಯದ ದಾರ್ಶನಿಕತೆಯನ್ನು ಪ್ರತಿಪಾದಿಸುತ್ತದೆ.

'ಯಾರೂ ತುಳಿಯದ ಹಾದಿಯ ಬದಿಯಲಿ
ಮೌನದೊಳಿರುವಳು ಈ ಚೆಲುವೆ
ಪ್ರಕೃತಿಯ ಸುಂದರ ಹಂದರದಲ್ಲಿ
ವಧುವಾಗಿರುವಳು ಈ ಮುಗುದೆ!'

ಪ್ರಕೃತಿ ಸೌಂದರ್ಯದ ಹಂದರದಲ್ಲಿ ಮುಗುದೆಯಾಗಿ ಮೌನದೊಳಿರುವ ಚೆಲುವೆಯನ್ನು ನೋಡಿದ ಗಂಡಿನಲ್ಲಿ ಮೂಡಿದ ಪ್ರೇಮ ದರ್ಶನವನ್ನು ಕಾಣಬಹುದು. ಪ್ರಕೃತಿ ಚೆಲುವು ಮತ್ತು ಚೆಲುವೆಯ ಚೆಲುವನ್ನು ಸಮೀಕರಿಸುವ ಕೊನೆಯ ಸಾಲುಗಳಲ್ಲಿ ಗಂಡು ಆಕೆಯ ಮೌನದಂತೆಯೇ ಮೌನವಾಗಿ ಒಲಿಯಲು ಮುಂದಾಗುತ್ತಾನೆ.

'ಚೆಲಿವೆಗೆ ಚೆಲುವೆನ್ನದೆ ಮತ್ತೇನು?
ಮೌನದೊಳೊಲಿವುದೆ ಸನ್ಮಾನ!'[5]

'ಒಲವು' ಮತ್ತು 'ಚೆಲುವು' ಜಿ.ಎಸ್.ಶಿವರುದ್ರಪ್ಪರವರ ಕಾವ್ಯದ ಪ್ರಧಾನ ಕಾಳಜಿ. ಮಳೆಯನ್ನು ಕುರಿತ ಕವನದಲ್ಲಿ ಆಕಾಶದ ಅತಿಥಿಗಳು ಎಂದು ಮಳೆಯನ್ನು ಸ್ವಾಗತಿಸುತ್ತಾ 'ಮುಗಿಲಿನ ಮಕ್ಕಳಿಗೆ ಈ ನೆಲವೆಂದರೆ ಎನಿತಾಸೆ' ಎನ್ನುತ್ತಾರೆ.

'ಸಂಭ್ರಮವೆನ್, ಸಡಗರವೆನ್
ಇವರಾಗಮನಕ್ಕೆ

ಗುಡುಗಿನ ಮೃದಂಗ, ಮಿಂಚಿನ ಆರತಿ
ಎಲ್ಲವು ಈ ನೆಲದೊಲಿತಕ್ಕೆ

....

ಒಲವಿಗೆ ಒಲವಲ್ಲದೆ
ಬೇರೇನಿದೆ ಕೊಡುಗೆ"[6]

ಒಲವಿಗೆ ಒಲವೇ ಮದ್ದು ಎಂಬ ತಾತ್ವಿಕರಣ ನೆಲೆ ಇಲ್ಲಿ ವ್ಯಕ್ತವಾಗಿದೆ.

'ಅಂದು ನೀನೊಬ್ಬಳೆಯೆ ಅತಿ ಮಔನದಲಿ ಬಂದೆ
ಹೊಳೆಗೊಂದು ಹೊಳೆ ಬಂದು ಸಂಗಮಿಸಿದಂತೆ
ಇಂದು ಮತ್ತೊಂದು ಹೊಸ ಜೀವವನು ತಂದೆ
ಇಂದು ನಮ್ಮದೆಂದೆ'[7]

ಒಂದು ಹೊಳೆಗೆ ಮತ್ತೊಂದು ಹೊಳೆ ಬಂದು ಸೇರುವ ರೀತಿ ನೀನು ನನ್ನ ಬದುಕಿನೊಳಗೆ ಬಂದು ಸೇರಿ ಹೋದೆ. ಮತ್ತೊಂದು ಜೀವ ಚೈತನ್ಯವನ್ನು ಜೊತೆಯಾಗುವಂತೆ ಮಾಡಿದೆ ಎನ್ನುವ ಕವಿ ನಿಲುವು ಪ್ರಕೃತಿ ದರ್ಶನವನ್ನು ನೀಡುತ್ತಾ ಗಂಡು-ಹೆಣ್ಣಿನ ಪ್ರೇಮದ ದರ್ಶನವನ್ನು ಮಾಡಿಸುವುದು. ನಿಸರ್ಗ ಪ್ರೇಮದ ಪ್ರತೀಕವಾಗಿದೆ ಮತ್ತು ಹೆಣ್ಣು-ಗಂಡಿನ ನೈಸರ್ಗಿಕ ಪ್ರೇಮವನ್ನು ನಿರ್ಮಲ ಪ್ರಕೃತಿಗೆ ಸಮೀಕರಿಸುವ ಒಲವು ಎಷ್ಟು ಸುಂದರ.

'ನಿನು ಮುಗಿಲು ನಾನು ನೆಲ
ನಿನ್ನ ಒಲವೆ ನನ್ನ ಬಲ
ನಮ್ಮಿಬ್ಬರ ಮಿಲನದಿಂದ
ಉಲ್ಲಾಸವೆ ಶ್ಯಾಮಲ!
ನಾನು ಕರೆವೆ ನೀವು ಸುರಿವೆ
ನಮ್ಮಿಬ್ಬರ ಒಲುಮೆ ನಲುಮೆ
ಜಗಕಾಯಿತು ಹುಣ್ಣಿಮೆ!
ನಾನಚಲದ ತುಟಿಯೆತ್ತುವೆ
ನೀ ಮಳೆಯೊಲು ಮುತ್ತನ್ನಿಡುವೆ
ನಿನ್ನಿಂದಲೇ ತೆರೆವುದೆನ್ನ
ಚೈತನ್ಯದ ಕಣ್ಣಿವೆ!'

ಹೆಣ್ಣು-ಗಂಡಿನ ಪ್ರಣಯಗೀತೆಯಂತೆ ನೆಲ-ಮುಗಿಲ ಪ್ರಣಯ ಲಯಸ್ಥಿತಿಯನ್ನು ಮೇಳೈಸಿದೆ. ನೆಲಕ್ಕೆ ಮಳೆಯ ಮುತ್ತು ನೀಡುವಂತೆ ಜಗಕೆ ಬೆಳಕಾಗುವುದು, ಕಣ್ಣಿಗೆ ಚೈತನ್ಯ ತುಂಬುವುದೆಲ್ಲಾ ಸಾಮರಸ್ಯದ ಮಿಲನದ ಸ್ವರೂಪದಲ್ಲೇ ಜರುಗುವಂತೆ ಮಾಡಿದೆ. ಪ್ರಣಯ ಪ್ರಕ್ರಿಯೆಯಲ್ಲಿ ಒಂದಾಗುವ ಹೆಣ್ಣು-ಗಂಡಿನ ಉತ್ಸಾಹವನ್ನು ನೆಲ-ಮುಗಿಲ ಮಳೆಯೊಂದಿಗೆ ಸಮೀಕರಿಸುವ ಜಿ.ಎಸ್.ಶಿವರುದ್ರಪ್ಪರವರ ಸೃಜನಶೀಲ ಪ್ರಜ್ಞೆ ಅತ್ಯಂತ ವಿಶಿಷ್ಟವಾದುದು.

'ನೀನು ಗಂಡು-ನಾನು ಹೆಣ್ಣು
ನೀನು ರೆಪ್ಪೆ ನಾನು ಕಣ್ಣು
ನಮ್ಮಿಬ್ಬರ ಮಿಲನದಿಂದ
ಸುಫಲವಾಯ್ತು ಜೀವನ!'[8]

'ಪ್ರಕೃತಿ ಸಹಜ ಪ್ರೇಮ ಪ್ರಣಯಿಗಳ ಮಿಲನದಿಂದ ಜೀವನ ಸಫಲವಾದ ಬಗೆ, ಸಮಗ್ರ ಒಲವಿನ ಶಕ್ತಿಯ ಆಳವಾದ ಗ್ರಹಿಕೆಯ ರೂಪಕದಂತಿದೆ. ಗಂಡು-ಹೆಣ್ಣಿನ ಸಮಾಗಮಕ್ಕೆ ಸರಿಹೊಂದುವ ಪ್ರಕೃತಿ ಸೌಂದರ್ಯ ಈ ಕವನದಲ್ಲಿ ಒಲವು-ಚೆಲುವಾಗಿ ಸಾರ್ಥಕವಾಗುತ್ತದೆ. ಪ್ರಕೃತಿಯ ಚೆಲುವೆಲ್ಲವೂ ದೇವದ ಸಾಕ್ಷಾತ್ಕಾರವೇ. ಅಂತಿಮ ಹಂತದಲ್ಲಿ ಪ್ರಕೃತಿ ಸೌಂದರ್ಯ ಮತ್ತು ದೈವಗಳೆರಡರ ನಡುವೆ ಭಿನ್ನತೆಯನ್ನು ಕಾಣುವುದಿಲ್ಲ'.[9]

ಇಲ್ಲಿ ಅದ್ವೈತ ಪರಿಕಲ್ಪನೆ ಗುರುತಿಸಬಹುದು. ಕುವೆಂಪು, ಬೇಂದ್ರೆಯವರಂತೆಯೇ ಜಿ.ಎಸ್.ಶಿವರುದ್ರಪ್ಪರವರು ಕೂಡ ಪ್ರಕೃತಿ ಆರಾಧಕರು. ಶ್ರೀಗುರುವಿನಲ್ಲಿ ಶಕ್ತಿಯನ್ನು ಕೊಡುವಂತೆ ಪ್ರಾರ್ಥಿಸುವ ಈ ಕವನದ ಸಾಲುಗಳನ್ನು ನೋಡಿ.

'ಶಕ್ತಿಯ ಕೊಡು, ಶಕ್ತಿಯ ಕೊಡು
ಶಕ್ತಿಯ ಕೊಡು ಹೇ ಪ್ರಭೂ
ಸತ್ಯಕಾಗಿ ನಿಲುವ ಛಲವ
ದೀಪ್ತಗೊಳಿಸು ನನ್ನೊಳು
ಎದರ ಕಡಲ ತೆರೆ ಹೆಡೆಗಳು
ಭೋರ್ಗರೆಯುತ ಬಂದರೂ
ತಡೆದು ನಿಲುವ ಮಳಲ ತಡಿಯ
ಬಲವ ನೀಡು ಶ್ರೀ ಗುರೂ'.[10]

ದೈವ ಸಾಕ್ಷಾತ್ಕಾರದೊಂದಿಗೆ ಪ್ರಕೃತಿ ಸಾಕ್ಷಾತ್ಕಾರವನ್ನು ಪಡೆಯಲು ಶ್ರೀಗುರುವಿನ ಬಳಿ ಮೊರೆ ಹೋಗುವುದು ಮತ್ತು ಪ್ರಕೃತಿಯಲ್ಲಿಯೇ ದೇವರನ್ನು ಕಾಣುವುದು.

'ಪ್ರೀತಿ-ಕರುಣೆ, ಸ್ನೇಹ-ಮರುಕ
ಇವೇ ನಮ್ಮ ದೇವರು
....
ಇಲ್ಲಿ ಎಲ್ಲ ನಿರ್ಮಲ
ಇದು ಬೆಳಕಿನ ವರ್ತುಲ'[11]

'ಸುತ್ತಲಿನ ಪರಿಸರದಲ್ಲಿಯೇ ದೈವತ್ವವನ್ನು ಕಾಣುವ ಮತ್ತೊಂದು ಬಗೆ. ಕೆಲವೊಮ್ಮೆ ಈ ಕವನಗಳು ಪೂರ್ಣವಾಗಿ ಅಂತರ್ಮುಖವಾಗಿರುತ್ತವೆ. ಅಂದರೆ ಆ ಅನುಭಾವದ ವ್ಯಾಪ್ತಿಯೊಳಗೆ ಬೇರೆ ಯಾವುದರ ಹಂಗು ಇಲ್ಲದೆ ತನ್ಮಯವಾಗುವುದೇ ಆ ಕವನದ ಕೇಂದ್ರ ಅನುಭವವಾಗಿರುತ್ತದೆ. ಕೆಲವೊಮ್ಮೆ ಅಲ್ಲೇ ಆ ಅನುಭವದಿಂದ ಹೊರಗೆ ನಿಂತು ಅನುಭವವನ್ನು ತಾತ್ವಿಕರಿಸುವ ಪ್ರಯತ್ನವನ್ನು ಮಾಡುತ್ತಾರೆ. ಈ ಉತ್ಕಟತೆಯ ಅನುಭವ ನಿಧಾನಕ್ಕೆ ತನ್ಮಯತೆಯ ಕಡೆಗೆ ಸಾಗುತ್ತದೆ. ಇಡೀ ಮೈಯನ್ನು, ವ್ಯಕ್ತಿತ್ವದ ಸಮಗ್ರತೆಯನ್ನು ಆವರಿಸುತ್ತದೆ. ಈ ತನ್ಮಯತೆ ಕೊನೆಗೆ ಅಪೂರ್ಣ ಶಾಂತಿಯಲ್ಲಿ ಕೊನೆಯಾಗುತ್ತದೆ. ಇಲ್ಲಿಗೆ ನಿಸರ್ಗಾನುಭಾವದ ಚಕ್ರ ಪೂರ್ಣವಾಗಿ ಒಂದು ಸುತ್ತು ಬಂದಂತೆ'.[12]

ಪರಿಪೂರ್ಣವಾದ ಸೌಂದರ್ಯಾನುಭವ ನೆಲೆಗಳನ್ನು ಗುರುತಿಸುವ ಈ ಸಂದರ್ಭದಲ್ಲಿ ಚೆಲುವಿಗೆ ಎಂಬ ಕವನದ ಸಾಲುಗಳನ್ನು ನೋಡಬಹುದು.

'ಶಿಶಿರ ಮೌನ ಮಾನಗರ್ಭದಿ ಮೊಳೆವ ಸುಗ್ಗಿಯ ಸ್ವಪ್ನವೇ
ಹಳೆಯ ಹೆಜ್ಜೆಗೆ ಹೊಸತು ಗೆಜ್ಜೆಯ ಕಟ್ಟಿ ಸುಖಿಸುವ ತುಷ್ಟಿಯೇ
ಸುಪ್ತ ಮನದೊಳು ತಪ್ತ ಜ್ವಾಲಾಮುಖಿಯ ಹರಿಸುವ ಮೋಡವೆ
ಈ ಚಿರಂತನ ಉತ್ಸವ ಪ್ರಿಯ ಸೃಷ್ಟಿಯೇ ಸಿಂಗಾರವೆ'[13]

ಸೃಷ್ಟಿಯ ಸಿಂಗಾರವನ್ನು ವರ್ಣಿಸುವ ಕವಿ ಹಳೆಯ ಹೆಜ್ಜೆಗೆ ಹೊಡತು ಗೆಜ್ಜೆ ಕಟ್ಟಿ ಸುಖಿಸುವ ರೀತಿ ಇವೆಲ್ಲವೂ ನಿಸರ್ಗಾನುಭಾವದ ಉನ್ನತಿಯ ಪ್ರತೀಕವಾಗಿದೆ.

'ಸಂಜೆ ಮುಂಜಾನೆಯಲಿ ಮುತ್ತು ಚೆಲ್ಲುವ ಬೆಳಕು
ಸುತ್ತಲೂ ರಜತಮಯ ಹೇಮಧೂಪ
ನಗ್ನ ನೀರವ ಶ್ರವಣ ಧ್ಯಾನ ರೂಪ!'[14]

ಮುತ್ತಿನಂತೆ ಹೊಳೆವ ಬೆಳಕು, ನೀರವತೆಯಿಂದ ಕೂಡಿದ ಶ್ರವಣ ಧ್ಯಾನ ರೂಪದಂತೆ ಪ್ರಕೃತಿ ಸೌಂದರ್ಯದ ಮಾಧುರ್ಯತೆ ಮೈದಾಳಿದೆ. ಪ್ರಕೃತಿ ಸೌಂದರ್ಯದೊಂದಿಗೆ ಜಡೆಯನ್ನು ಸಮೀಕರಣದ ನೆಲೆಯಲ್ಲಿ ವ್ಯಾಖ್ಯಾನಿಸುವ ಕವನ 'ಜಡೆ ಮಲ್ಲಿಗೆಯ, ಕೇದಗೆಯ, ಮಾತೃ ಮಮತಾವೃಷ ಬಿಟ್ಟಂತೆ ಹರಡಿದ ಜಡೆ'

'ಸಂಜೆಯಲಿ ಹಗಲು ಕೆದರುವ ಕತ್ತಲೆಯ
ಕಪ್ಪು ಜಡೆ
ಬೆಳಗಿನಲಿ ಇರುಳು ಬಿಚ್ಚುವ ಬೆಳ್ಳನೆಯ
ಬೆಳಕು ಜಡೆ
....
ಮುಂಗಾರು ಮೋಡಗಳು ದಿಕ್ಕು ದಿಕ್ಕಿಗೆ ಬಿಚ್ಚಿ
ಹರಡಿರುವ ಮಳೆಯ ಜಡೆ
....
ಎಲ್ಲವೂ ರಮ್ಯವೆಲ್ಲ!
ಜಡೆಯಾಚೆ ತಿರುಗಿಸಿದ ತಾಯ ಮುಖ ಮಾತ್ರ
ಇಂದಿಗೂ ಕಾಣದಲ್ಲ'.

ಇಡೀ ಪ್ರಕೃತಿಯ ವಿಪುಲತೆಯೊಂದಿಗೆ ಜಡೆಯನ್ನು ವರ್ಣಿಸುವ ಕವಿ ಹೆಣ್ಣಿನ ಬಗೆಯ ಚೆಲುವು-ಒಲವಿನ ನಿರ್ಮಲ ವಾತಾವರಣವನ್ನು ಪ್ರಕೃತಿ ಸಹಜವೆಂಬಂತೆ ಚಿತ್ರಿಸುತ್ತಾರೆ. ಜಡೆ ಕವನದ ಮೂಲಕ ಪ್ರಕೃತಿ-ಪ್ರೇಮ ದರ್ಶನದೊಂದಿಗೆ ಸೌಂದರ್ಯ ದರ್ಶನದ ತಾತ್ವಿಕತೆಯನ್ನು ವಿವರಿಸುತ್ತಾರೆ. ಸೌಂದರ್ಯದಾಚೆಯ ಸತ್ಯವನ್ನು ಕಾಣುವ ತವಕ ಕವಿಯದು.

'ಎಲ್ಲವೂ ರಮ್ಯವೆಲ್ಲಾ! ಜಡೆಯಾಚೆ ತಿರುಗಿಸಿದ ತಾಯಮುಖ ಮಾತ್ರ ಇಂದಿಗೂ ಕಾಣದಲ್ಲ! ಎಂಬ ಕೊನೆಯ ಸಾಲುಗಳು ಇಡೀ ಕವನಕ್ಕೆ ಮತ್ತು ಕವನದ ವಸ್ತುವಿಗೆ ಶಬ್ದ ಸೌಂದರ್ಯವನ್ನೂ, ಅರ್ಥ ಸೌಂದರ್ಯವನ್ನೂ ಕೊಟ್ಟಿದೆ. ಹೆಣ್ಣಿನ ಸೌಂದರ್ಯವನ್ನು ಕೊಡುವುದರಷ್ಟರಿಂದಲೇ ಕವಿತೆ ವರ್ಣಿತವಾಗುವುದಿಲ್ಲ. ಅದರಲ್ಲಿಯೇ ವಿರಮಿಸುವುದಿಲ್ಲ. ಜಡೆಯ ಸೌಂದರ್ಯ, ಬೈಗು, ಬೆಳಗು, ಹಕ್ಕಿ ಪಕ್ಷಿ, ಗಿರಿ ಶಿಖರ, ಕಾನನ, ಮೋಡದವರೆಗೆ ವ್ಯಾಪಿಸಿದ್ದು, ಕಡೆಗೆ 'ಚಂದ್ರ ಚೂಡನ ವ್ಯೋಮ ಕೇಶನ' ವರೆಗೆ ವ್ಯಾಪಿಸಿ ಬಿಡುತ್ತದೆ ಮಾತ್ರವಲ್ಲ ಮಾನವ ಸೌಂದರ್ಯದಿಂದ ಹಿಡಿದು ದೈವ ಸೌಂದರ್ಯದವರಗೆ ಜಡೆಯ ಸೌಂದರ್ಯ ವಿಶದಗೊಳ್ಳುತ್ತದೆ. ಲೌಕಿಕ ಸೌಂದರ್ಯದಿಂದ ಅಲೌಕಿಕ ಸೌಂದರ್ಯದವರೆಗೆ ಕವನ ರೆಕ್ಕೆ ಬಿಚ್ಚುತ್ತದೆ. ಕೊನೆಗೆ 'ಮಾತೃ ಸೌಂದರ್ಯ'ದಲ್ಲಿ

ಐಕ್ಯವನ್ನೂ, ಸಾರ್ಥಕತೆಯನ್ನೂ ಪಡೆಯುತ್ತದೆ. "ಜಡೆಯಾಚೆ ತಿರುಗಿಸಿದ ತಾಯಮುಖ"ದಲ್ಲಿ ಇದು ಕೇಂದ್ರ ಪ್ರಜ್ಞೆಯನ್ನು ಪಡೆಯುತ್ತದೆ'.[15]

ಸೌಂದರ್ಯಾನುಭವ ನವನೂತನದ ಹೊಳಪನ್ನು ಹೊಳೆಯಿಸದೇ ಹೋದರೆ ಸೌಂದರ್ಯದ ಪೂರ್ಣತೆ ದೊರಕಲಾರದು. ಭಾವನಾತ್ಮಕ ಲಯದೊಂದಿಗೆ ಭಾಷಿಕ ಲಯಗಳ ಸ್ಪರ್ಶವನ್ನು ಕೊಡುತ್ತಾ, ಸ್ತ್ರೀ ಕವನ ಸೌಂದರ್ಯ, ಪ್ರಕೃತಿ ದರ್ಶನ ಮತ್ತೊಂದು ಮಗ್ಗಲನ್ನೇ ವಿಸ್ತರಿಸುತ್ತದೆ.

'ಆಕಾಶದ ನೀಲಿಯಲ್ಲಿ
ಚಂದ್ರ ತಾರೆ ತೊಟ್ಟಿಲಲ್ಲಿ
ಬೆಳಕನ್ನಿತ್ತು ತೂಗಿದಾಕೆ
ನಿನಗೆ ಬೇರೆ ಹೆಸರು ಬೇಕೆ?
ಸ್ತ್ರೀ ಎಂದರೆ ಅಷ್ಟೇ ಸಾಕೇ?'

ವಿಶಾಲವಾದ ಆಕಾಶದ ಅಗಾಧವಾದ ನೀಲಿಯಲ್ಲಿ ಚಂದ್ರ-ತಾರೆಗಳೇ ತೊಟ್ಟಿಲು, ಅಲ್ಲಿ ಬೆಳಕನ್ನಿತ್ತು ತೂಗುವ ಆಕೆಗೆ ಸ್ತ್ರೀ ಎಂಬ ಹೆಸರಷ್ಟೇ ಸಾಕಲ್ಲವೆ. ಬೇರೆ ಹೆಸರು ಬೇಕೆ? ಎಂದು ಪ್ರಶ್ನಿಸುತ್ತಲೇ ನಿಸರ್ಗ ಚೆಲುವಿನ ದರ್ಶನವನ್ನು ನೀಡುತ್ತಾರೆ.

'ಮರಗಿಡ ಹೂ ಮುಂಗುರುಳನು
ತಂಗಾಳಿಯ ಬೆಳಕು ಸವರಿ
ಹಕ್ಕಿಗಿಲಕಿ ಹಿಡಿಸಿದಾಕೆ
ನಿನಗೆ ಬೇರೆ ಹೆಸರು ಬೇಕೆ?
ಸ್ತ್ರೀ ಎಂದರೆ ಅಷ್ಟೇ ಸಾಕೇ?'

ಪ್ರಕೃತಿ ಸೌಂದರ್ಯಕ್ಕೆ ಮೆರಗು ನೀಡುವ ಮರಗಿಡ ಹೂಗಳೇ ಮುಂಗುರುಳು, ತೀಡುವ ತಂಗಾಳಿಯೇ ಬೆರಳು, ಹಕ್ಕಿಗಳ ಕಲರವಗಳೇ ಗಿಲಕಿಗಳು ಪ್ರಕೃತಿಯ ಕೈಗಳಿಗೆ ಹಿಡಿಸಿದ್ದಾಳೆ. ಆಕೆಯೇ ಪ್ರಕೃತಿ ಸ್ತ್ರೀ.

'ಮನೆ ಮನೆಯಲಿ ದೀಪ ಮೂಡಿಸಿ
ಹೊತ್ತು ಹೊತ್ತಿಗೆ ಅನ್ನ ಉಣಿಸಿ
ತಂದೆ ಮಗುವ ತಬ್ಬಿದಾಕೆ
ನಿನಗೆ ಬೇರೆ ಹೆಸರು ಬೇಕೆ?
ಸ್ತ್ರೀ ಎಂದರೆ ಅಷ್ಟೇ ಸಾಕೇ?'

ಮನೆಯನ್ನು ಬೆಳಗುವ ಸ್ತ್ರೀಯು ತಂದೆ-ಮಗುವಿಗೆ ಅನ್ನ ಉಣಿಸಿ, ಗಂಡ-ಮಗುವನ್ನು ಮುತುವರ್ಜಿಯಿಂದ ನೋಡಿಕೊಳ್ಳುತ್ತಾಳೆ. 'ತಂದೆ ಮಗುವ ತಬ್ಬಿದಾಕೆ' ಎಂಬ ಸಾಲು ಎಲ್ಲಾ ಸೌಂದರ್ಯಗಳ ಎಲ್ಲೆ ಮೀರಿದ ಅನುಭವ ಸೌಂದರ್ಯದ ಪ್ರತೀಕವಾಗಿದೆ.

'ಹಸುರುನುಟ್ಟ ಬೆಟ್ಟಗಳಲಿ
ಮೊಲೆ ಹಾಲಿನ ಸುಧೆಯನುಣಿಸಿ
ಬಯಲ ಹಸಿರ ನಗಿಸಿದಾಕೆ
ನಿನಗೆ ಬೇರೆ ಹೆಸರು ಬೇಕೆ?
ಸ್ತ್ರೀ ಎಂದರೆ ಅಷ್ಟೇ ಸಾಕೇ?'

ಪ್ರಕೃತಿ ಮಾತೆಯ ತಾಯ್ತನದ ಭಾವ ಉಕ್ಕುವ ಈ ಕವನ ವರ್ಣನ ಲಹರಿಯಲ್ಲಿ ವಿಶಿಷ್ಟತೆಯಿಂದ ಕೂಡಿದೆ. ಹೆಣ್ಣಿನ ಬಹಿರಂಗ ಸೌಂದರ್ಯ ಮಾರು ಹೋಗುವವರಿಗೆ ಅವರ ಆಲೋಚನ ದಿಕ್ಕನ್ನು ಬದಲಿಸಿ ಹೆಣ್ಣಿನ ಅಂತರಂಗ ಸೌಂದರ್ಯವನ್ನು ಪರಿಗಣಿಸುವ ಮತ್ತು ಹೆಣ್ಣನ್ನು ಪ್ರಕೃತಿಯೊಂದಿಗೆ ಸಾಂಕೇತಿಸುವ ಶೈಲಿ ವಿಶಿಷ್ಟವಾದುದು.

ಕುವೆಂಪು ಅವರ ಪ್ರಕೃತಿ ದರ್ಶನ ಮುಖ್ಯವಾಗಿ ಮಂಡಿತವಾಗುವುದು ಜಡ ಮತ್ತು ಚೈತನ್ಯದ ಪರಿಭಾಷೆಯಲ್ಲಿ. ಅತ್ಯಂತ ಉತ್ಕಟವಾದ ರೀತಿಯಲ್ಲಿ 'ಜಡ'ದ ನಿರಾಕರಣೆ ನಡೆಯುತ್ತದೆ. ಅದರಲ್ಲಿಯೂ ಪಕ್ಷಿಕಾಶಿ ಕವನದಲ್ಲಿ ಈ ತಾತ್ವಿಕ ನಿಲುವು ತುಂಬಾ ಪ್ರಧಾನವಾದದ್ದು. ನಿಸರ್ಗವನ್ನು ಅನುಭವಿಸುವ, ಅಭಿವ್ಯಕ್ತಿಸುವ ರೀತಿಯಲ್ಲಿ ಈ ಎರಡು ಪರಿಕಲ್ಪನೆಗಳಿಗೇ ಮುಖ್ಯಸ್ಥಾನ. (ಡಿ.ಆರ್. ನಾಗರಾಜ್, ಶಕ್ತಿ ಶಾರದೆಯ ಮೇಳ, ಪುಟ-೨೧) ಇಂತಹ ಪರಿಕಲ್ಪನೆಗಳು ಜಿ.ಎಸ್.ಶಿವರುದ್ರಪ್ಪರವರ ಕವನಗಳಿಗೂ ಅನ್ವಯಿಸುತ್ತವೆ. ಜಿ.ಎಸ್.ಶಿವರುದ್ರಪ್ಪರವರು ಚೈತ್ರದ ದರ್ಶನ ಮಾಡಿಸುವುದನ್ನು ನೋಡಿದರೆ ನಿಬ್ಬೆರಗಾಗುವುದು ಖಚಿತ.

'ಸುಗ್ಗಿ ಬಂದಿತು ಹಿಗ್ಗು ಹೊಮ್ಮಿತು ಮರದ ಹರೆಹರೆಯೊಳಗಡೆ
ಚಿಗುರು ಹೂವಿನ ಕಾಯಿ ಹಣ್ಣಿನ ಬಯಕೆಗಾಗಿದೆ ಬಿಡುಗಡೆ
ಎಂಥ ಬಡಕಲು ಗಿಡವು ಕೂಡಾ ಚೆಲುವಿಗಾಗಿ ನಿಲುಗಡೆ
ನೂರು ವರ್ಣದ ನೂರು ರಾಗದ ಚಿಲುಮೆ ಚಿಮ್ಮಿದೆ ಎಲ್ಲೆಡೆ!
ಹೂವ ಬಿಟ್ಟಿವೆ, ಹೂವ ತೊಟ್ಟಿವೆ, ಹೂವನುಟ್ಟಿವೆ ಮರಗಳು
ಚೈತ್ರ ಜಾತ್ರೆಗೆ ಬಂದು ನಿಂತುವೊ ನೂರು ಚೆಲುವಿನ ರಥಗಳು
ಕಾಮ-ರತಿಯರು ಬಂದು ಆಡುವ ರಾಸಲೀಲಾ ಪಥಗಳು
ಸೃಷ್ಟಿ ಬರೆಯುವ ಚೈತ್ರ ಕಾವ್ಯದ ಮಧು ಪವಾಡದ ಕಥೆಗಳು'[16]

ಎಂಥಾ ಬಡಕಲು ಗಿಡವು ಕೂಡಾ ಚೆಲುವು ಪಡೆದಿರುವುದು ಚೈತನ್ಯದ ಪ್ರತೀಕವಾಗಿದೆ. 'ಜಡತೆ'ಯನ್ನು ನಿರಾಕರಿಸಿ ನಡೆಯುವ ಚೈತನ್ಯದ ಆರಾಧನೆ ಶುದ್ಧವಾಗಿದೆ.

'ಸಾಮಗಾನ' ಕವಿತೆಗಳಿಂದ ಹಿಡಿದು 'ದೀಪದ ಹೆಜ್ಜೆ'ಯ ಕವಿತೆಗಳವೆರೆಗ ಬರುವ ಹೊತ್ತಿಗೆ ಕವಿ ಎರಡು ಜಗತ್ತುಗಳಿಗೆ ಸ್ಪಂದಿಸುವ ಹೊಣೆ ಹೊರಲು ಸಿದ್ಧರಾಗುವುದು ಕಂಡು ಬರುತ್ತದೆ. ಒಂದು ಜೀವ ಸಮೃದ್ಧ ಪ್ರಕೃತಿ, ಇನ್ನೊಂದು ಮಾನವ ಕೇಂದ್ರಿತ ಸಮಾಜ. ಇವುಗಳಲ್ಲಿ ಜೀವ ಸಮೃದ್ಧ ಪ್ರಕೃತಿ ಜಿ.ಎಸ್.ಶಿವರುದ್ರಪ್ಪರವರ ಕವಿತೆಗಳಲ್ಲಿ ಮೊದಲಿನಿಂದ ಈವರೆಗೆ ಜೀವನದ ಇತ್ಯಾತ್ಮಕತೆಯನ್ನು ಮಂಡಿಸಲು ಕಾಣಿಸಲು ನೆರವಿಗೆ ಬಂದಿದೆ. ವಿಸ್ಮಯ ಉತ್ಸುಕತೆಗಳು ಈ ನೆಲೆಯ ಕವಿತೆಗಳ ಪ್ರಧಾನ ಭಾವಗಳಾಗುತ್ತವೆ. ಪ್ರಕೃತಿಯ ನಿಯತಲಯಗಳು ಕವಿಗೆ ಸದಾ ಆಕರ್ಷಣೀಯ ಅಂಶಗಳಾಗಿವೆ. ಮರಳಿ ಮರಳಿ ಅಂತಹ ಸಂದರ್ಭಗಳನ್ನು ಕವಿ ಹಾಡಿದ್ದಾರೆ. (ಸಮಗ್ರ ಕಾವ್ಯ ಮುನ್ನುಡಿಯಿಂದ-ಕೆ.ವಿ. ನಾರಾಯಣ) ಜೀವ ಸಮೃದ್ಧ ಪ್ರಕೃತಿಯ ದರ್ಶನ ಮಾಡಿಸುವ ಕವಿಗೆ ಪ್ರಕೃತಿಯ ಸೌಂದರ್ಯಾನುಭವ ದರ್ಶನವು ಅತ್ಯಂತ ಅಗಾಧವಾದುದು. ಪ್ರಕೃತಿಗೆ ಚೆಲುವು ಎಷ್ಟು ಮುಖ್ಯವೋ ಮಾನವನಿಗೆ ಒಲವು ಅಷ್ಟೇ ಮುಖ್ಯ. ಈ ಪ್ರತಿಪಾದನೆಯನ್ನು ಕವಿ ತನ್ನ ಚೆಲುವು ಒಲವು ಸಂಕಲವದಲ್ಲಿ ದರ್ಶಿಸುತ್ತಾರೆ.

'ಹೂ ಹೂಗಳೆದೆಯ ನವುರನ್ನೆ ತೆಗೆದು ಮಾಡಿಟ್ಟ ಗೊಂಬೆಯಂತೆ
ಹೊಸ ತಳಿರ ಜೊಂಪ ತಂಗದಿರ ತಂಪ ಕುಡಿದು ಮಲಗಿದಂತೆ
ಮಲಗಿರುವೆ ನೀನು ಎದೆಹಾಲಸುಂಡು ನನ್ನ ಪಕ್ಕದಲ್ಲಿ
ನಿಸ್ತರಂಗ ಕಾಸಾರದಂತೆ ಬೆಳದಿಂಗಳಿರುಳಿನಲ್ಲಿ!'[17]

ಪ್ರಕೃತಿಯ ಪ್ರೀತಿ ಮತ್ತು ತಾಯಿ, ಮಗುವಿನ ಪ್ರೀತಿ ಮತ್ತು ತಾಯಿ, ಮಗುವಿನ ಪ್ರೀತಿಯ ಹುಡುಕಾಟದ ನೆಲೆಗಳು ಹಾಗೂ ಜೀವ ಚೈತನ್ಯ ದರ್ಶನ ಮಾಡಿಸುವ ಪ್ರತೀಕವಾಗಿದೆ. ಪ್ರೀತಿಯ ಹುಡುಕಾಟದ ನೆಲೆ ಜಿ.ಎಸ್.ಶಿವರುದ್ರಪ್ಪರವರ ಕವನಗಳಲ್ಲಿ ತುಡಿಯುತ್ತವೆ. ತಾಯಿಯ ಪ್ರೀತಿಗಾಗಿ, ಮಗುವಿನ ಪ್ರೀತಿಗಾಗಿ, ಸಂಗಾತಿಯ ಪ್ರೀತಿಗಾಗಿ, ಬದುಕಿನ ಪ್ರೀತಿಗಾಗಿ ಇತ್ಯಾದಿ.

'ಪ್ರೀತಿ ಇಲ್ಲದ ಮೇಲೆ
ಹೂವು ಅರಳೀತು ಹೇಗೇ?
ಮೋಡ ಕಟ್ಟೀತು ಹೇಗೆ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೇ?'[18]

ಚೆಲುವು-ಒಲವನ್ನು ಜೊತೆ ಜೊತೆಯಾಗಿಯೇ ಪ್ರತಿಪಾದಿಸುವ ಹವನ ಪ್ರೇಮ-ಪ್ರಕೃತಿ ದರ್ಶನದ ನೆಲೆಗಳನ್ನು ಸ್ಪಷ್ಟ ಪಡಿಸುತ್ತದೆ. ಪ್ರೀತಿ ಇಲ್ಲದ ಮೇಲೆ ಏನೂ ನಡೆಯಲು ಸಾಧ್ಯವಿಲ್ಲ. ಎಲ್ಲವೂ ಪ್ರೀತಿಯ ನೆಲೆಯಿಂದಲೇ ಜರುಗುವುದು ಎಂಬ ಪ್ರತಿಪಾದನೆ, ಈ ಪ್ರೀತಿ ತತ್ವದಲ್ಲೇ ಅಡಗಿದೆ. ಹೂವು ಅರಳುವುದು, ಮೋಡ ಕಟ್ಟುವುದು ಮತ್ತು ಮಳೆ ಬರುವುದು ನೆಲಕ್ಕೆ ಹಸಿರು ಮೂಡುವುದು ಈ ನೆಲೆಯ ಆಧಾರದ ಮೇಲೆಯೇ. ಇದು ಪ್ರಕೃತಿ ದರ್ಶನವಾದರೆ, ಮಾತಿಗೆ ಮಾತು ಕೂಡಿ ಅರ್ಥ ಬೆಸೆದು ಕಾವ್ಯವಾಗುವುದು ಪ್ರೇಮ ದರ್ಶನದ ಪ್ರತೀಕವಾಗಿದೆ. ಹೀಗೆ ಜಡ ತತ್ವದ ನಿರಾಕರಣೆಯೊಂದಿಗೆ ಮತ್ತೆ ಮತ್ತೆ ಚೈತನ್ಯದ ಪರಿಭಾಷೆಗೆ ಪ್ರಕೃತಿ ಮತ್ತು ಪ್ರೇಮದ ಬೆಸುಗೆಯನ್ನೇರ್ಪಡಿಸುತ್ತಾರೆ.

‘ಇದು ಜೀವನದ ಸಂಗಮ
ಯಾವ ಪರ್ವತ ಲಿಂಗದಿಚ್ಚೆ ಈ ತೆರದಿ
ಜಂಗಮವಾಗಿ ಬಂದಿಲ್ಲಿ ಸಂಗಮವಾಯ್ತೆ!
ಒಂದನೊಂದನು ಹುಡುಕಿ ಬಂದೆರಡು ಚೇತನಕೆ
ಇಲ್ಲಿ ಬಾಳೊಂದಾಯ್ತು
ಏನು ತೆರೆ ಏನು ನಿರ್ಘೋಷ!
ಆ ದಡದಿಂದ ಈ ದಡಕ್ಕೆ
ಈ ದಡದಿಂದ ಆ ದಡಕ್ಕೆ
ತುಂಬಿ ಗಂಭೀರವಾಗಿದೆ ಹೊನಲಿನಾವೇಶ!
ಚೇತನದ ಸುಳಿಯಲಿ ಸಿಕ್ಕ ಜಡಕೂ ಕೂಡ
ಚೈತನ್ಯ ಬಂದ ಹಾಗೆ
....
ಓ ಹೊನಲ ರಾಜ
ಒಯ್ದು ಮುಟ್ಟಿಸು ನನ್ನ ಎದೆಯ ಹಂಬಲನು ಆ
ಮೊರೆ ಮೊರೆವ ಮುನ್ನೀರಿಗೆ,
ನಾಲ್ಕು ಹನಿ ನೀರಾಗಿರುತ್ತಿದ್ದೇನೆ ನಾನು
ಸಂಗಮಿಸಿ ಬರುತ್ತಿದ್ದೆ ನಿನ್ನ ಜೋತೆಗೆ’[19]

ಇದು ವಚನಕಾರರ ತತ್ವವನ್ನು ಪರಿಭಾವಿಸುವಂಥದ್ದು. ಜಂಗಮನಾಗಿ ಬಂದು ಸಂಗಮವಾಗುವುದು. ಸ್ಥಾವರವನ್ನು ಗೆದ್ದು ಚಲನಾತ್ಮಕವಾದ ಸಂಚಲನವನ್ನು ಮೂಡಿಸಿ ಒಂದಾಗುವ

ಪ್ರಕ್ರಿಯೆ ಇದು. ನದಿ ಕಡಲಿಗೆ ಸೇರಿ ಸಂಗಮವಾಗುವುದರ ಪ್ರತೀಕ, ಚೇತನದ ಸುಳಿಗೆ ಸಿಕ್ಕ ಜಡವೂ ಕೂಡ ಚೈತನ್ಯ ಪಡೆಯುವ ರೀತಿ, ಆವೇಶ ಭರಿತ ಮೊನಲು ತುಂಬಿ ಗಂಭೀರವಾಗಿದೆ. ಈ ನಿಲುವುಗಳು ಜಡ ತತ್ವ ನಿರಾಕರಣೆಯ ಪ್ರಕೃತಿ ದರ್ಶನವಾದರೇ, ನನ್ನ ಎದೆಯ ಹಂಬಲನು ಮುಟ್ಟಿಸು, ನಿನ್ನ ಜೊತೆ ಸಂಗಮಿಸಿ ಬರುತಿದ್ದೆ ಎನ್ನುವ ಧೋರಣೆಗಳು ಪ್ರೇಮ ದರ್ಶನದ ಹುಡುಕಾಟವನ್ನು ಅತ್ಯಂತ ಯಶಸ್ವಿಯಾಗಿವೆ.

ಈ ಹಿನ್ನೆಲೆಯಿಂದ ಕಡಲನ್ನು ಸೇರುವ ತವಕವನ್ನು ಹೊಂದಿರುವ ನದಿಯ ಹಂಬಲವು, ಪ್ರೇಮಿಗಳಿಬ್ಬರೂ ಸಂಗಮಿಸುವ ತರದಲ್ಲಿ 'ತೊರೆಯ ಹಂಬಲ' ಎನ್ನುವ ಕವಿತೆ ಪ್ರೇಮದ, ಪ್ರಕೃತಿ ದರ್ಶನದ, ಹಲವು ಬಗೆಯ ಹಂದರಗಳನ್ನು ತೆರೆದಿಡುತ್ತದೆ.

'ಕಾಣದ ಕಡಲಿಗೆ ಹಂಬಲಿಸಿದೆ ಮನ
ಕಾಣ ಬಲ್ಲೆನೇ ಒಂದು ದಿನ?
ಕಡಲನು ಕೂಡ ಬಲ್ಲೆನೇ ಒಂದು ದಿನ?
ಕಾಣದ ಕಡಲಿನ ಮೊರೆತದ ಜೋಗುಳ
ಒಳಗಿವಿಗೆಂದೂ ಕೇಳುತಿದೆ
ನನ್ನ ಕಲ್ಪನೆಯು ತನ್ನ ಕಡಲನೇ
ಚಿತರಿಸಿ ಚಿಂತಿಸಿ ಸುಯ್ಯುತಿದೆ
ಎಲ್ಲಿರುವುದೊ ಅದು
ಎಂತಿರುವುದೊ ಅದು'

....

ಕಾಣದ ಕಡಲನ್ನು ಕಾಣುವ ಹಂಬಲ ನದಿಗಿದೆ. ಎಂದೂ ಕಾಣದ ಕಡಲಿನ ಮೊರೆತವು ನದಿಯ ಒಳಗಿವಿಗೆ ಕೇಳುತಿದೆ ನದಿಯೊಂದರ ಕಡಲ ಕಲ್ಪನೆಯು ಕೂಡ ತನ್ನ ಕಡಲನ್ನು ತನ್ನೊಳಗೆ ಕಾಣುವಂತ ಅಥವಾ ಕಲ್ಪಿಸಿಕೊಳ್ಳುವಂತಹ ಪರಿ ಪ್ರೇಮಿಯೊಬ್ಬಳ ವಿರಹಗೀತೆಯಂತೆಯೂ ಭಾಸವಾಗುತ್ತದೆ. ತಾನೂ ಸೇರುವ ಕಡಲು ಹೇಗಿದೆಯೋ? ಎಲ್ಲಿದೆಯೋ? ಏನೋ? ಎಂಬ ತವಕ ತಲ್ಲಣ ಉಂಟಾಗಿದೆ. ನದಿ ಮತ್ತು ಕಡಲು ಪ್ರಕೃತಿ ದರ್ಶನದ ಪ್ರತೀಕದಂತಿದೆ. ಪ್ರಕೃತಿಯಲ್ಲಿ ಕಡಲನ್ನು ಸೇರುವ ತವಕದಿಂದ ಸಾಗುವ ನದಿಯ ರೀತಿ ಹೀಗಿದೆ.

'ಜಟಿಲ ಕಾನನದ ಕುಟೀಲ ಪಥಗಳಲಿ
ಹರಿವ ತೊರೆಯು ನಾನು!

ಎಂದಿಗಾದರೂ ಕಾಣದ ಕಡಲಿಗೆ
ಸೇರ ಬಲ್ಲವೇನು?
ಕಡಲ ನೀಲಿಯೊಳು
ಕರಗಬಹುದೇ ನಾನು?'[20]

ಯಾವತ್ತಾದರೂ, ಒಂದಲ್ಲ ಒಂದು ದಿನ ಕಾಣದ ಕಡಲನ್ನು ಸೇರುತ್ತೇನೆಂಬ ಆಶಾವಾದದೊಂದಿಗೆ ಹರಿವ ತೊರೆಯು, ಜಟಿಲವಾದ ಅರಣ್ಯದ ಕುಟೀಲ ಮಾರ್ಗಗಳಲಿ ಹರಿದು ಬರುತ್ತಿದೆ. ಕಡಲ ನೀಲಿಯಲಿ ತಾನು ಕರಗಬಹುದೆಂಬ ಆಶಯವು ನದಿ ಮತ್ತು ಕಡಲಿನ ಸಮಾಗಮದ ಪ್ರತೀಕದಂತೆಯೂ ಹಾಗೂ ಹೆಣ್ಣು-ಗಂಡಿನ ಸಂಗಮದ ಪರಮಪ್ರೇಮದುನ್ನತಿಯು ಆಗಿ ಮಾರ್ಪಡುತ್ತದೆ. ಜಿ.ಎಸ್.ಶಿವರುದ್ರಪ್ಪರವರ ಪ್ರಕೃತಿ ಸಹಜ ಪ್ರೇಮದ ಸೃಜನಶೀಲ ಗುಣಗಳು ತನ್ನ ಕಾವ್ಯಾಭಿವ್ಯಕ್ತಿಯ ವಿಶೇಷತೆಗಳಿಂದ ಉನ್ನತ ಹಂತ ತಲುಪುತ್ತದೆ. 'ತೊರೆಯ ಹಂಬಲ' ಕವನವು ಪ್ರೇಮಿಗಳಿಬ್ಬರೂ ತಾನು ಪರಸ್ಪರ ನೋಡುವ ಕೂಡುವ ಮೊದಲಿನ ಅನುಭವದ ಸ್ಥಿತಿಯನ್ನು ನಿರೂಪಿಸುತ್ತಿದ್ದರೆ 'ಕಡಲನ್ನು ಕಂಡಾಗ' ಎಂಬ ಕವನವು ನದಿ ತಾನು ಕಡಲನ್ನು ಸೇರುವ ಅನಂತರದ ಅನುಭವದ ವಿಶ್ಲೇಷಣೆಯ ನಿರೂಪಣೆಯ ಚಿತ್ರಣವನ್ನು ನೀಡುತ್ತದೆ.

'ನಾವಿಲ್ಲಿ ಬರುವ ಮೊದಲಲ್ಲು ನೀನು ಇಂತೆ ಮೊರೆಯುತಿದ್ದೆ
ನಾನು ಬಂದಿಲ್ಲಿ ನಿಂತು ನೋಡುತಿರೆ ಇಂತೆ ಮೊರೆಯುತಿರುವೆ
ನಾನು ಹೋದರೂ ಎಂದಿನಂತೆ ನೀನಿಂತೆ ಹಾಡುತಿರುವೆ!
ನೀಲ ಬಾನಿನಾ ಭವ್ಯ ಮೌನದೆದೆಗೇನೊ ನುಡಿಯುತಿರುವೆ'.

ನದಿ ಕಲ್ಪಿಸಿಕೊಂಡಂತಹ ಕಡಲಿನ ಮೊರೆತ ಹಾಗೆ ಮೊರೆಯುತಿದೆ. ಕಡಲ ಎದುರು ನಿಂತಿರುವ ನದಿ ಕಡಲ ತೆರೆಗಳ ಕಂಡು ಬೆರಗಾಗಿದೆ.

'ಏನು ಆಟವೋ ಎಂಥ ಬೇಟವೋ ನಿನ್ನ ತೆರೆಗೆ ದಡಕೆ
ನಿಮಿಷ ನಿಮಿಷಕೂ ಬಂದು ದಡದೆಡೆಗೆ ಬಡಿಯುವಾಸೆ ಅವಕೆ
ವರುಷ ವರುಷಗಳು ಉರುಳಿ ಹೋದರೂ ಮುಗಿಯದಂಥ ಆಟ
ಬುವಿಯ ಹೆಣ್ಣಿಗೂ ಕಡಲ ಗಂಡಿಗೂ ತೀರದಿರುವ ಬೇಟ!'

ಎಂಬ ಸಾಲುಗಳು ಪ್ರಕೃತಿಯ ವಿಸ್ಮಯಗಳನ್ನು ಸೂಚಿಸುತ್ತವೆ.

ದಡಗಳಿಗೆ ಅಲೆಗಳ ಬಡಿತ, ಎಂದಿಗೂ ಮುಗಿಯದ ಆಟವೆಂದೂ ಹೇಳುತ್ತಲೇ ನದಿ ಮತ್ತು ಕಡಲಿನ ಕೂಡುವಿಕೆಯ ಸಂಬಂಧದ ನೆಲೆಗಳು, ಹೆಣ್ಣು-ಗಂಡು ಕೂಡುವುದು ಪ್ರಕೃತಿ ಸಹಜ ವಸ್ತುಸ್ಥಿತಿಯ ನೆಲೆ ಕೊಂಡೊಯ್ಯುತ್ತದೆ. ಋಷಿ-ಕಡಲು ಪ್ರಕೃತಿ ದರ್ಶನದಂತೆ ಹೆಣ್ಣು-ಗಂಡಿಗೂ ತೀರದಿರುವ ಪ್ರೇಮದ ಮೂಲವಾಗಿದೆ. ಇದೇ ಕವನದ ಕೊನೆಯ ಸಾಲುಗಳಲ್ಲಿ ಕಡಲಿಗೆ ಸೇರಿದ ನದಿ ಕರಗಿ ಹೋಗಿ, ನೀನೆ ಎಲ್ಲವಾದೆ! ಎಂದು ತಾನು ಒಂದಾದ ಪರಿಯನ್ನು ತಿಳಿಸುತ್ತದೆ.

'ನಿನ್ನ ಕಾಣುತ್ತ ನಿನ್ನ ರೂಪದಲಿ ನಾನೆ ಕರಗಿ ಹೋದೆ
ಮತ್ತೆ ನೋಡಿದರೆ ನೀಲ ನೀಲ ಜಲ ನೀನೆ ಎಲ್ಲವಾದೆ!
ನಿನ್ನ ಘೋಷದಲಿ ನನ್ನ ಎದೆಯ ದನಿ ಲೀನವಾಯಿತೆಲ್ಲ
ನಿನ್ನ ಎದುರಿನಲಿ ನನ್ನ ತನಕೆ ಏನೇನು ಉಳಿಯಲಿಲ್ಲ!'[21]

ಹೀಗೆ ನದಿಯನ್ನು, ಕಡಲನ್ನು ಅತ್ಯಂತ ಮನೋಜ್ಞವಾಗಿ ವರ್ಣಿಸುವ ಕವಿ ಸೌಂದರ್ಯಾನುಭವ ಸ್ವರೂಪವನ್ನು ತಿಳುವಳಿಕೆಯ ತಿಳಿಯನ್ನು, ಆಧ್ಯಾತ್ಮದ ಅನಂತತೆಯನ್ನು, ಮೌನ, ಬೆರಗು, ವಿಸ್ಮಯ ಮೊದಲಾದ ವಾಸ್ತವಿಕಾಂಶಗಳ ನೆಲೆಯಲ್ಲಿ ಕವನ ಮೈ ತಳೆಯುತ್ತದೆ. 'ನಿನ್ನ ಎದುರಿನಲಿ ನನ್ನ ತನಕೆ ಏನೇನು ಉಳಿಯಲಿಲ್ಲ' ಜೀವನದ ಅರ್ಥವಂತಿಕೆ, ಸೌಂದರ್ಯದ ಆಸ್ವಾದನೆ ತಿಳಿವನ್ನು ಈ ಕವಿತೆ ಧ್ವನಿಸುತ್ತದೆ.

ಟಿಪ್ಪಣಿಗಳು

1. ಸಮಗ್ರ ಕಾವ್ಯ, ಪುಟ - 45
2. ಪ್ರಕೃತಿ ಪೂಜೆ/ ಸಮಗ್ರ ಕಾವ್ಯ, ಪುಟ–4
3. ಶಕ್ತಿ ಶಾರದೆಯ ಮೇಳ, ಪುಟ–84
4. ಹಾಲುಹೊಳೆ, ಪುಟ–15
5. ಸಮಗ್ರ ಕಾವ್ಯ, ಪುಟ–72
6. ಸಮಗ್ರ ಕಾವ್ಯ, ಪುಟ–78
7. ಸಮಗ್ರ ಕಾವ್ಯ, ಪುಟ–85
8. ಸಮಗ್ರ ಕಾವ್ಯ, ಪುಟ–120
9. ಶಕ್ತಿ ಶಾರದೆಯ ಮೇಳ, ಪುಟ–87
10. ಸಮಗ್ರ ಕಾವ್ಯ, ಪುಟ–267
11. ಸಮಗ್ರ ಕಾವ್ಯ, ಪುಟ–325
12. ಶಕ್ತಿ ಶಾರದೆಯ ಮೇಳ, ಪುಟ–91
13. ಸಮಗ್ರ ಕಾವ್ಯ, ಪುಟ–236
14. ಸಮಗ್ರ ಕಾವ್ಯ, ಪುಟ–234
15. ಜಿ.ಎಸ್.ಶಿವರುದ್ರಪ್ಪರವರ ಕಾವ್ಯ, ಒಂದು ಮರು ಓದು, ಪುಟ–12
16. ಸಮಗ್ರ ಕಾವ್ಯ
17. ಸಮಗ್ರ ಕಾವ್ಯ, ಪುಟ–87
18. ಸಮಗ್ರ ಕಾವ್ಯ, ಪುಟ–469
19. ಸಮಗ್ರ ಕಾವ್ಯ, ಪುಟ–105
20. ಸಮಗ್ರ ಕಾವ್ಯ, ಪುಟ–96
21. ಸಮಗ್ರ ಕಾವ್ಯ, ಪುಟ–98

ಅಧ್ಯಾಯ – 4

ಸೃಜನಶೀಲತೆ ಹುಡುಕಾಟ

ಕಾವ್ಯಸೃಷ್ಟಿ ಕ್ರಿಯೆಯಲ್ಲಿ ತೊಡಗುವ ತನ್ನ ಸೃಜನಶೀಲ ಗುಣಗಳಿಂದ ವಿಶಿಷ್ಟವೆನಿಸುತ್ತಾನೆ. ಸಮಾಜದಿಂದ ತನ್ನ ಅನುಭವಕ್ಕೆ ತಂದುಕೊಂಡ ಬಹುಮುಖಿ ಆಯಾಮಗಳನ್ನು ಕಾವ್ಯದಲ್ಲಿ ನಿಚ್ಚಳವಾಗಿ ದಾಖಲಿಸಬಹುದು. ಹೀಗೆ ದಾಖಲಿಸುವಾಗ ಕವಿಗೆ ಮಾಂತ್ರಿಕಶಕ್ತಿ ಇರಬೇಕಾಗುತ್ತದೆ. ಯಾಕೆಂದರೆ ಕಾವ್ಯಕ್ಕೆ ಮಂತ್ರ ಶಕ್ತಿಯಿರುತ್ತದೆ. ಆದ್ದರಿಂದ ಕಾವ್ಯದ ವಸ್ತು ಯಾವುದೇ ಇದ್ದರೂ ಕಾವ್ಯ ಭಾಷೆಗೆ ಒಗ್ಗಿಸಿಕೊಳ್ಳುವ ಗುಣ ಕಪಿಯದ್ದಾಗಿರುತ್ತದೆ. ಕವಿಯ ಕಾವ್ಯದ ಆಶಯಗಳೇನೇ ಇದ್ದರೂ ಕವಿ ತನ್ನ ಕಾವ್ಯದ ಮೂಲಕ ತನ್ನ ಸೃಜನಶೀಲ ಗುಣದ ಹುಡುಕಾಟವನ್ನು ನಡೆಸುತ್ತಾನೆ. ಪ್ರಸ್ತುತ ಜಿ.ಎಸ್.ಶಿವರುದ್ರಪ್ಪರವರ ಕಾವ್ಯಬರಹ ಮತ್ತು ಬದುಕಿನ ಸೃಜನಶೀಲತೆಯ ಸ್ವರೂಪವನ್ನು ಸಾಧ್ಯವಾಗಿಸುವುದರ ಬಗೆಗೆ ನನ್ನ ಗಮನ ಕೊಡುತ್ತೇನೆ. ಲೋಕದ ಅನುಭವಗಳನ್ನು ವ್ಯಕ್ತಿತ್ವವು ಗ್ರಹಿಸುವ ನೆಲೆಗಳ ಸ್ವರೂಪವು, ಬದಲಾವಣೆಯುನ್ನು ಬಯುಸುವ ಗುಣವನ್ನು ಜಿ.ಎಸ್.ಶಿವರುದ್ರಪ್ಪರವರ ಕವಿತೆಗಳಲ್ಲಿ ಕಾಣಬಹುದು.

'ನಾನು ಬರೆಯುತ್ತೇನೆ
ಸುಮ್ಮನಿರಲಾರದಕ್ಕೆ
ನನ್ನ ವೇದನೆ ಸಂವೇದನೆಗಳನ್ನು
ಕ್ರಿಯೆ ಪ್ರಕ್ರಿಯೆಗಳನ್ನು
ದಾಖಲು ಮಾಡುವುದಕ್ಕೆ
ನಿಂತ ನೀರಾಗದೆ ಮುಂದಕ್ಕೆ
ಹರಿಯುವುದಕ್ಕೆ
ಎಲ್ಲದರ ಜತೆ ಬೆರೆಯುವುದಕ್ಕೆ'[1]

ಇಲ್ಲಿ ತನ್ನನ್ನು ತಾನು ಶೋಧಿಸಿಕೊಳ್ಳುವ ಗುಣ ಸ್ವಭಾವ ಕವಿತೆಯ ನಿಲುವು ಎಂಬುದು ಸ್ಪಷ್ಟವಾಗುತ್ತದೆ. ಸೃಜನಶೀಲತೆ ಎಂಬುದೇ ತನ್ನನ್ನು ತಾನು ತೆರೆದುಕೊಂಡು ಚಲನೆಯಲ್ಲಿರುವುದಾಗಿದೆ. ಆದ್ದರಿಂದ ನಿಂತ ನೀರಾಗದೇ ನಿರಂತರವಾಗಿ ಹರಿಯುತ್ತಿರಬೇಕೆಂಬ ಕವಿಯ ಹಂಬಲದ ಮಾತು ತನ್ನ ಸಂವೇದನೆಗಳನ್ನು ದಾಖಲು ಮಾಡುವುದಕ್ಕೆ ಎನ್ನುತ್ತಲೇ, ತನ್ನದೇ ಆದ ಒಂದು ನೂತನ ಮಾರ್ಗವನ್ನು ಕಂಡುಕೊಳ್ಳಬೇಕೆಂಬ ಹುಡುಕಾಟವನ್ನು ಕೂಡ ನಡೆಸುತ್ತಾರೆ. ಹೀಗೆ ಹುಡುಕಾಟ ನಡೆಸುವ ಕವಿಗೆ ಯಾವುದೇ ಒಂದು ಪಂಥದ ಬಗೆಗೆ ಆಸಕ್ತಿಯಿಲ್ಲ. ಆದರೆ ವಿಶಾಲವಾದ ಮನೋಭೂಮಿಕೆಯೊಂದನ್ನು ನಿರ್ಮಿಸುವ ಸೃಜನಶೀಲ ಗುಣ ಅವರಲ್ಲಿದೆ.

'ಬೇಡ ನನಗೆ ಸಿದ್ಧಾಂತಗಳ ರಾದ್ಧಾಂತ
ನನಗಿಲ್ಲ, ಇದೇ ಸರಿ, ಇಷ್ಟೇ ಸರಿ ಎನ್ನುವ ಪಂತ
ನಾ ಬಲ್ಲೆ, ಇವು ಎಲ್ಲ ಏರುವೆಯ
ಒಂದೊಂದು ಹಂತ'[2]

ಎನ್ನುವ ಮೂಲಕ ಯಾವೆಲ್ಲಾ ಸಿದ್ಧಾಂತಗಳ ಧಿಕ್ಕರಿಸುವುದೂ ಇಲ್ಲ, ಬದಲಾಗಿ ಅಪ್ಪಿಕೊಳ್ಳುವುದೂ ಇಲ್ಲ, ಎಲ್ಲಾ ಪಂತಗಳಿಂದ ಒಳ್ಳೆಯ ಮಾರ್ಗವನ್ನು ಕಂಡುಕೊಂಡು, ಮೇಲೆರುವುದಕ್ಕೆ ಒಂದೊಂದು ಪಂತವು ಒಂದೊಂದು ಹಂತವಾಗಿ ರೂಪುಗೊಳ್ಳುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಇದು ಸಮನ್ವಯ ಸಾಧನೆಯ ಪ್ರತೀಕದಂತೆ ಪ್ರಕಟವಾಗಿದೆ. ನಾವು ಆಯ್ಕೆ ಮಾಡಿಕೊಳ್ಳಬೇಕಾದ ಆಯ್ಕೆಗೆ ದಾರಿ ನೂರಾರಿವೆ ಬೆಳಕಿನರಮನೆಗೆ ಎಂದು ಬೆಳಕಿನರಮನೆಯಲ್ಲಿ ಆಯ್ಕೆ ಮಾಡಿಕೊಳ್ಳಬೇಕಾದ ದಾರಿಯ ಹುಡುಕಾಟವು ಇಲ್ಲಿ ವಿಶಿಷ್ಟವೆನಿಸಿದೆ.

'ಜಿ.ಎಸ್.ಶಿವರುದ್ರಪ್ಪರವರ ಸೃಜನಶೀಲ ಪ್ರಜ್ಞೆ ಮೊದಲಿನಿಂದಲೂ ತೀವ್ರವಾಗಿ ಕಾಲಕ್ಕೆ ಸ್ಪಂದಿಸಿದೆ. ಈ ದೃಷ್ಟಿಯಿಂದ ಇಲ್ಲಿ ತೀವ್ರ ವಾಸ್ತವಿಕ ತಿಳಿವು ವ್ಯಕ್ತವಾಗುವಷ್ಟು ಉತ್ಕಟವಾಗಿ ಅವರ ಆದರ್ಶವಾದೀ ಸತ್ವ ಪ್ರಕಟವಾಗುವುದಿಲ್ಲ. ಅವರ ಕಾಲದ ಬಗೆಗಿನ ಕವನಗಳು ಯಶಸ್ಸನ್ನು ಗಳಿಸಿರುವ ಕಾರಣ ಕೂಡಾ ಇದೇ ಎನ್ನಬಹುದು. ಕವಿಯ ಅನುಭವದ ಕೈಯೇ ಮೇಲಾಗುವ ವಿಶಿಷ್ಟ ಪ್ರಸಂಗ ಇದು'.[3]

'ಯೌವನದ ತೇರಿನೊಲು ನೀ ತೇಲಿ ಬಂದೆ
ನನ್ನ ಬಳಿಯೇ ಹಾದು ಮುಂದೆ ನಡೆದೆ
ನೀ ನಡೆದ ಮೇಲೆ ನಾ ಮರುಗಿದೆನು ನಿನಗೆ
ಬಲು ಮೌನದೊಳಗೆ'[4]

ಚೆಲುವಿನ ಧ್ವನಿಯನ್ನೇ ಮೈಯ್ವೆತ್ತ ಕವಿತೆ ಸೃಜನಶೀಲತೆಯ ಚೆಲುವನ್ನು ಮೈಯ್ವೆತ್ತಿದೆ. ಬಲು ಮೌನದೊಳಗೆ ಕವಿಯನ್ನೆ ಮರುಗುವಂತೆ ಮಾಡಿದೆ. ಅತೀವ ಚೆಲುವನ್ನು ಹೊಂದಿರುವ ಈ ಚೆಲುವೆಯನ್ನು ನೋಡಿದ ಕವಿಗೆ ಮೋಹ ಹುಟ್ಟುವುದಿಲ್ಲವೇ? ಮಾತು ಹುಟ್ಟುವುದಿಲ್ಲವೇ? ಪ್ರೀತಿ ಹುಟ್ಟುವುದಿಲ್ಲವೇ? ಎಂಬ ಸಂಶಯ ನಮಗೆ ಮೂಡುವುದಿಲ್ಲವೇ? ಎಂದಾಗ, ಜಿ.ಎಸ್.ಶಿವರುದ್ರಪ್ಪರವರ 'ಪ್ರೀತಿ ಇಲ್ಲದ ಮೇಲೆ' ಎಂಬ ಕವಿತೆ ಎದುರಾಗುತ್ತದೆ. ಅದನ್ನು ದಾಟಲಾಗದೇ ಕವಿತೆಯನ್ನು, ಅದರ ಗುಣಗಳನ್ನು ಮಂಡಿಸಿಲ್ಲವೆಂದರೇ ನನ್ನಂಥವರಿಗೆ ಅಪಮಾನವಾಗುತ್ತದೆ.

'ಪ್ರೀತಿ ಇಲ್ಲದೆ ಮೇಲೆ
ಹೂವು ಅರಳೀತು ಹೇಗೇ?
ಮೋಡ ಕಟ್ಟೀತು ಹೇಗೆ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೇ?'[5]

ಈ ಬಗೆಯ ಸಾರ್ಥಕತೆಯ, ಸಾರ್ವತ್ರಿಕ ವಿಧಾನದ ಸಾಮಾನ್ಯ ಪ್ರಜ್ಞೆ ಕೂಡಾ ಅಗಾಧತೆಯಲ್ಲಿ ಪೂರ್ಣವಾಗಿದೆ.

'ಪ್ರೀತಿ ಇಲ್ಲದೆ ಮೇಳೆ
ಮಾತಿಗೆ ಮಾತು ಕೂಡೀತು ಹೇಗೆ?
ಅರ್ಥ ಹುಟ್ಟೀತು ಹೇಗೆ?
ಬರಿ ಪದಕ್ಕೆ ಪದ ಜತೆಗಿದ್ದ ಮಾತ್ರಕ್ಕೆ
ಪದ್ಯವಾದೀತು ಹೇಗೇ?'[6]

ಜಿ.ಎಸ್.ಶಿವರುದ್ರಪ್ಪರವರ ಸೃಜನಶೀಲತೆಗೆ ಈ ಪದ್ಯ ಕನ್ನಡಿ ಹಿಡಿದಂತಿದೆ. ಪ್ರೀತಿ ಇಲ್ಲದೆ ಮಾತು ಹುಟ್ಟುವುದಿಲ್ಲ. ಅದಕ್ಕೊಂದು ಅರ್ಥವು ಇರಲಾರದು. ಎಲ್ಲಾ ಸೃಜನಶೀಲತೆಯ ಪ್ರಜ್ಞೆಗೂ ಪ್ರೀತಿ ಮೂಲ ದ್ರವ್ಯವೆಂಬ ನಿಲುವು ಜಿ.ಎಸ್.ಶಿವರುದ್ರಪ್ಪರವರ ಅವರದ್ದು. ಹೀಗೆ ಕಾವ್ಯ ಪ್ರೀತಿಯನ್ನು-ತನ್ನ ಪ್ರೀತಿಯೊಂದಿಗೆ ಸಮೀಕರಿಸಿ ನೋಡುವ ಗುಣದ ಅಭಿವ್ಯಕ್ತಿ ಬಹಳ ಮುಖ್ಯವಾದುದು.

'ನನಗು ನಿನಗು ಮೀರಿದೊಂದು
ಮೂಲ ಶಕ್ತಿ ಒಳಗೆ ಸಿಂದು
ಬೆಳಕ ತುಳುಕದಿರಲು ನಮ್ಮ
ಬಾಳು ಬರಿಯ ಶೂನ್ಯವು'[7]

ನನಗು ನಿನಗು ಮೀರಿದ ಒಂದು ಮೂಲಶಕ್ತಿ ಒಳಗೆ ಇರುವುದನ್ನು ಗುರುತಿಸುವ ಕವಿಗೆ, ಸೃಜನಶೀಲಯತೆಯ ಸೂಕ್ಷ್ಮ ಪ್ರಜ್ಞೆಯೊಂದು ತನಗೆ ತಿಳಿಯದೆ ಕೆಲಸ ಮಾಡುತ್ತಿದೆ ಎಂಬಂಶವನ್ನು ಗುರುತಿಸಬಹುದು.

> '[ಕೊತ ಕೊತ ಕುದಿವ ಹುಡುಕಾಟಗಳ ನಡುವೆ
> ಮಾತಿರದ ಮೌನದೊಳ
> ಗಸ್ತವ್ಯಸ್ತವಾಗಿ ತೊಳಲಿದ್ದ ಅಶರೀರ ಭಾವ
> ನಿಧಾನಕ್ಕೆ ಪಾಕವಾಗುತ್ತ
> ಶಬ್ದಾರ್ಥ ಸಂಪುಟದೊಳಗೆ ಹೊಳೆವ ಮುತ್ತಾಗಿ
> ಮಿನುಗುತಿದೆಯಲ್ಲ, ಯಾರ ಪ್ರಭಾವ?'[8]

ಕವಿಗೆ ಕಾವ್ಯೋತ್ಪತ್ತಿಗಾದ ಪ್ರಭಾವ ಯಾರದೆಂಬ ಹುಡುಕಾಟದೊಂದಿಗೆ ಉಂಟಾದ ಚಲನಶೀಲತೆ ಅಂಶವು ಶಬ್ದಾರ್ಥ ಸಂಪುಟದೊಳಗೆ ಹೊಳೆವ ಮುತ್ತಿನಂತೆ ಮಿನುಗುತಿದೆ ಎಂಬ ಕವಿವಾಣಿ ಅಪ್ಪಟ ಸೃಜನಶೀಳಪ್ರಜ್ಞೆಯಲ್ಲವೇ?

ಜಿ.ಎಸ್.ಶಿವರುದ್ರಪ್ಪರವರ ಕಾವ್ಯಾನುಸಂಧಾನ ಮಾಡುತ್ತಿದ್ದರೆ ಅವರ ಮೇಲೆ ನಮ್ಮ ಈ ಪ್ರಾಚೀನ ಕವಿ ಪರಂಪರೆ ಪ್ರಭಾವ ಇದಾಗ್ಯೂ ಅದನ್ನು ಮೀರಿದ ಮೌಲ್ಯಗಳ ಬಲವರ್ಧನೆಯತ್ತಲೇ ದೃಷ್ಟಿ ನೆಟ್ಟಿರುವುದು ಸ್ಪಷ್ಟ ಗೋಚರಿಸುತ್ತದೆ. ಅಂದಿನ ಧರ್ಮಪ್ರಜ್ಞೆ ಹಾಗೂ ರಾಜಭಕ್ತಿಗಳು ಇಂದು ನಾಡು ನುಡಿಗಳ ಮೇಲೆ ಪಲ್ಲಟಗೊಂಡಿದೆ. ಸಾಂಸ್ಥಿಕ ಧರ್ಮವನ್ನು ಹೊರತುಪಡಿಸಿದ ನಿಜವಾದ ಧರ್ಮ ಯಾವುದು ಎಂಬುದನ್ನು ಹೇಳಿದ ಕವಿರಾಜ ಮಾರ್ಗದಲ್ಲಿನ ಒಂದು ಮಾತು ಜಿ.ಎಸ್.ಶಿವರುದ್ರಪ್ಪರವರ ಕಾವ್ಯಾಧಾರಣೆಯಲ್ಲಿ ಅಂತರ್ಗಾಮಿಯಾಗಿ ಸದಾ ಪ್ರವಹಿಸುವುದನ್ನು ನೋಡಬಹುದು. (ಪುಟ-36) ಕಸವರವೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮುಮಂ, ಪರಧರ್ಮಮುಮಂ ನಿಜವಾದ ಐಶ್ವರ್ಯ(ಕಸವರ)ವೆಂದರೆ ಪರರ ವಿಚಾರಗಳನ್ನು ಪರಧರ್ಮಗಳನ್ನು ಸಹಿಸತಕ್ಕದ್ದೇ, ಎನ್ನುವುದು. "ಅನ್ಯರ ವಿಚಾರಗಳನ್ನು ಮತ್ತು ಅನ್ಯರ ಧರ್ಮಗಳನ್ನು ಸಹಿಸುವುದೇ ನಿಜವಾದ ಸಂಪತ್ತು - ಎನ್ನುವ ಈ ಸೂಕ್ತಿ ಕನ್ನಡ ನಾಡು ಧರ್ಮಗಳ ವಿಚಾರದಲ್ಲಿ ಉದ್ದಕ್ಕೂ ತಾಳಿದ ನಿಲುಪಿಗೆ ಬರೆದ ವ್ಯಾಖ್ಯಾನದಂತಿದೆ. ಕರ್ನಾಟಕ ಸಂಸ್ಕೃತಿಯು ವೈಶಿಷ್ಟವೆಂದರೆ ಅದರ ಧರ್ಮಸಹಿಷ್ಣುತೆಯೇ ಎಂದು ಹೇಳಬಹುದು. (ಜಿ.ಎಸ್.ಶಿವರುದ್ರಪ್ಪ-ಕನ್ನಡ ಸಾಹಿತ್ಯ ಸಮೀಕ್ಷೆ, ಪುಟ-30)

'ಹಾಡು ಹಳೆಯದಾದರೇನು
ಭಾವ ನವನವೀನ
ಎದೆಯ ಭಾವ ಹೊಮ್ಮುವುದಕೆ
ಭಾಷೆ ಒಂದು ಸಾಧನ.

ಹಳೆಯ ಹಾಡ ಹಾಡು ಮತ್ತೆ
ಅದನೆ ಕೇಳಿ ತಣಿಯುವೆ
ಹಳೆಯ ಹಾಡಿನಿಂದ ಹೊಸತು
ಜೀವನವನೆ ಕಟ್ಟುವೆ'[9]

ಹಳೆಯ ಹಾಡಿನಲ್ಲಿ ಹೊಸತನದ ಹುಡುಕಾಟದ ಪರಿಕಲ್ಪನೆಯೊಂದನ್ನು ಕಟ್ಟುವ ಕ್ರಿಯೆ ವಿಶಿಷ್ಟವಾದುದು. ಹಾಡು ಹಳೆಯದಾದರೇನು, ಭಾವನವನವೀನ ಎನ್ನುವ ಕವಿ ಹಾಡಿಗೆ ಹೆಚ್ಚು ಪ್ರಧಾನ ಕೊಡದೆ 'ಭಾವ'ಕ್ಕೆ ಒತ್ತು ಕೊಟ್ಟು, ಸ್ವೀಕಾರಪೂರ್ಣ ಮನೋಭಾವವೇ ಪ್ರಮುಖ ಸಾಧನವೆಂಬ ನಿಲುವು ತಾಳುತ್ತಾರೆ. ಹಳೆಯ ಹಾಡಿನಿಂದಲೇ ಹೊಸ ಬಗೆಯ ಜೀವನವನ್ನೇ ಸೃಷ್ಟಿಸುತ್ತೇನೆ ಎಂಬ ನಿಲುವು ಕೂಡ ಇಲ್ಲಿ ಸೃಜನಶೀಲ ಪ್ರಜ್ಞೆಯೇ ಆಗಿದೆ. ಕವಿಗೆ ಇಲ್ಲಿ ಯಾವುದೇ ಹಮ್ಮು ಬಿಮ್ಮು ಇಲ್ಲದೇ ಹಳೆಯ ಹಾಡು ಕೇಳಲು ಹೃದಯ ತೆರೆದುಕೊಂಡಿದೆ. ಇಂತಹ ಆತ್ಮ ಶೋಧನೆಯ ಮತ್ತು ಆತ್ಮಾವಲೀಕನದ ಸಂವಾದ ಗುಣಸ್ವಭಾವವನ್ನು ತನ್ನ ಕವಿತೆಯಲ್ಲಿ ಮಂಡಿಸುತ್ತಾರೆ.

'ಯಾವ ಹಾಡ ಹಾಡಲಿ
ಯಾವ ಹಾಡಿನಿಂದ ನಿಮಗೆ
ನೆಮ್ಮದಿಯನು ನೀಡಲಿ?

ಸುತ್ತ ಮುತ್ತ ಮನೆ ಮಠಗಳು
ಹೊತ್ತಿಕೊಂಡು ಉರಿಯುವಲ್ಲಿ
ಸೋತು ಮೂಕವಾದ ಬದುಕು
ನಿಟ್ಟುಸಿರೊಳು ತೇಲುವಲ್ಲಿ
ಯಾವ ಹಾಡ ಹಾಡಲಿ?'[10]

ಈ ರೀತಿ ವೈಚಾರಿಕ ಪ್ರಜ್ಞೆಯನ್ನು ಮಂಡಿಸುತ್ತಲೇ ಸಾಮಾಜಿಕ ದುಸ್ಥಿತಿಯು ಹದಗೆಟ್ಟಿರುವಾಗ ಯಾವ ಹಾಡನ್ನು ಹಾಡಲಿ? ಎಂದು ಆತಂಕ ವ್ಯಕ್ತಪಡಿಸುತ್ತಾರೆ. ಅದರೊಂದಿಗೆ ಇಂತಹ ಸಂದರ್ಭದಲ್ಲಿ ಹಾಡಬೇಕಾದ ಹಾಡೊಂದರ ಹುಡುಕಾಟದ ನೆಲೆ ವಾಸ್ತವ ಪ್ರಜ್ಞೆಯನ್ನು ಎಚ್ಚರಿಸುತ್ತದೆ. ಇದು ಸಹ ಸೃಜನಶೀಲ ಪ್ರಜ್ಞೆಯ ಹುಡುಕಾಟದ ಮತ್ತೊಂದು ಭಾಗವೇ ಆಗಿದೆ. ಜಿ.ಎಸ್.ಶಿವರುದ್ರಪ್ಪನವರ ಕವನಗಳಲ್ಲಿ ಸಂಘರ್ಷಗಳು ಮತ್ತು ಸಾಂತ್ವಾನಗಳು ಅಭಿವ್ಯಕ್ತಿ ಪಡೆದಿರುವ ಬಗೆಯನ್ನು ನೋಡುವಾಗ ಅವರ ಕವನಗಳಲ್ಲಿ ಪ್ರಸಾದ, ಮಾಧುರ್ಯ, ಅರ್ಥವ್ಯಕ್ತಿ, ಉದಾರತ್ವ ಮತ್ತು ಕಾಂತಿ ಎದ್ದು ಕಾಣುವ ಕಾವ್ಯ ಗುಣವಾಗಿರುತ್ತದೆ. ಆದ್ದರಿಂದಲೇ ತನಗನಿಸಿದ್ದನ್ನು ನೇರವಾಗಿ ಹೇಳುವ ಕವಿಯು ಕವನಗಳಲ್ಲಿ ಸಮಕಾಲೀನ ಕಾವ್ಯಮಾರ್ಗಗಳಲ್ಲಿದ್ದಂತಹ ಅತಿಯಾದ ಅಬ್ಬರ, ಕೆಚ್ಚಿನ ಘೋರಾಟ ತಂತ್ರಕ್ಕೋಸ್ಕರ ಪ್ರತಿಮೆಗಳ ಬಳಕೆ ಇವರ ಕವನಗಳಲ್ಲಿಲ್ಲ. ಬದಲಾಗಿ ಜೀವನಾನುಭವಗಳಿಗೆ ಕಾವ್ಯರೂಪ ನೀಡುವಾಗ ಒಂದು ಸಮಾಧಾನಕರ ನೆಲೆಯಲ್ಲಿ ಇಷ್ಟಾತ್ಮಕ ದೃಷ್ಟಿಕೋನದಿಂದ ಸ್ಪಂದಿಸಿರುವುದು ಕಂಡುಬರುತ್ತದೆ. ಕವಿಯ ಪ್ರಕಾರ ಎಲ್ಲಕ್ಕಿಂತ ಬದುಕು ದೊಡ್ಡದು. ಆ ಬದುಕು ಇರುವಷ್ಟು ಕಾಲ ಅರ್ಥಪೂರ್ಣವಾಗಿರಬೇಕು ಸುಂದರವಾಗಿರಬೇಕು."

ಬದುಕಿನ ಸಾರ್ಥಕತೆಯನ್ನು ಪಡೆಯಲು ಬೇಕಾದ ಮಾರ್ಗಗಳನ್ನು ಹುಡುಕುವ ಕವಿಯು ತನ್ನ 'ಕವಿ–ವೇದಾಂತಿ' ಕವನದಲ್ಲಿ ನಿಶ್ಚಳವಾಗಿ ಗುರುತಿಸಿದ್ದಾರೆ.

'ವೇದಾಂತಿ ಹೇಳಿದನು
    ಹೊನ್ನೆಲ್ಲ ಮಣ್ಣು
ಕವಿಯೊಬ್ಬ ಹಾಡಿದನು
    ಮಣ್ಣೆಲ್ಲ ಹೊನ್ನು!

ವೇದಾಂತಿ ಹೇಳಿದನು
    ಈ ಹೆಣ್ಣು ಮಾಯೆ
ಕವಿಯು ಕನವರಿಸಿದನು
    ಓ ಇವಳೆ ಚೆಲುವೆ
ಇವಳ ಜೊತೆಯಲಿ ನಾನು
    ಸ್ವರ್ಗವನೆ ಗೆಲುವೆ!
ವೇದಾಂತಿ ಹೇಳಿದನು
    ಈ ಬದುಕು ಶೂನ್ಯ

ಕವಿ ನಿಂತು ಸಾರಿದನು
ಇದು ಅಲ್ಲ ಅನು
ಜನ್ಮ ಜನ್ಮದಿ ಸವಿದೆ
ನಾನೆಷ್ಟು ಧನ್ಯ!'

ಬದುಕಿನ ಬಗೆಗೆ ಕವಿ ಮತ್ತು ವೇದಾಂತಿಗಳಿಬ್ಬರೂ ತಳೆದ ವಿದ್ಯಮಾನಗಳು ವಿಭಿನ್ನ ನೆಲೆಯದ್ದಾಗಿದೆ. ವೇದಾಂತಿಗೆ ಕಾಣುವ ಹೊನ್ನು ಮಣ್ಣಿನಂತೆ ಕಂಡಿದೆ. ಹೆಣ್ಣು, ಮಾಯೆಯಾಗಿ ಕಾಣುತ್ತದೆ. ಆದರೆ ಕವಿಗೆ ಮಣ್ಣೆಲ್ಲಾ ಹೊನ್ನಾಗಿ, ಹೆಣ್ಣು ಚೆಲುವೆಯಾಗಿ ಕಂಡು ಆ ಚೆಲುವೆ ಜೊತೆಗಿದ್ದರೆ ಸ್ವರ್ಗವನ್ನೇ ಗೆಲ್ಲುವ ಭರವಸೆ ಕವಿಗಿದೆ. ಚೆಲುವೆಯೊಂದಿಗೆ ಬದುಕಿನಲಿ ಸ್ವರ್ಗವನ್ನೇ ಗೆಲ್ಲುವ ಕವಿಗೆ ಇಂತಹ ಬದುಕನ್ನು ಪಡೆದ ನಾನೆಷ್ಟು ಧನ್ಯವೆಂದು ಭಾವಿಸಿದರೆ, ವೇದಾಂತಿಗೆ ಈ ಬದುಕೆಲ್ಲವೂ ಶೂನ್ಯವಾಗಿ ಕಾಣುತ್ತದೆ. ಈ ಕವನದ ಮೂಲಕ ಜಿ.ಎಸ್.ಶಿವರುದ್ರಪ್ಪರವರು ಕವಿಯೊಬ್ಬನ ಸೃಜನಶೀಲ ಪ್ರಜ್ಞೆಗೂ, ವೇದಾಂತಿಯೊಬ್ಬನ ಸೃಜನಶೀಲ ಪ್ರಜ್ಞೆಯ ನಿಲುವುಗಳಿಗೂ ಇರುವ ಅಂತರ ಅಥವಾ ವಿಭಿನ್ನ ಮಾದರಿಯ ನೆಲೆಯನ್ನು ಗುರುತಿಸುತ್ತಾರೆ. ಈ ಬದುಕಿನ ಬಗ್ಗೆ ಎರಡು ನೆಲೆಗಳ ಸೃಜನಶೀಲ ತಾತ್ವಿಕ ರೂಪಣೆಯೊಂದಿಗೆ ಸೃಜನಶೀಲ ತತ್ವದ ಹುಡುಕಾಟವೊಂದನ್ನು ನಡೆಸಲಾಗಿದೆ. ಇಂತಹ ಅನೇಕ ಮಾದರಿಗಳು ಜಿ.ಎಸ್.ಶಿವರುದ್ರಪ್ಪರವರ ಕವನಗಳಲ್ಲಿ ಗುರುತಿಸಬಹುದು.

'ಯಾವ ರಾಗಕೊ ಏನೋ ನನ್ನೆದೆ ವೀಣೆ ಮಿಡಿಯುತ ನರಳಿದೆ
ಬಯಸುತಿರುವಾ ರಾಗ ಹೊರ್ಮ್ಮದೆ ಬೇರೆ ನಾದಗಳೆದ್ದಿವೆ

ಮುಗಿಲ ತಾರೆಯ ರಜತನಂದನದಲ್ಲಿ ದನಿಯನು ಹುಡುಕಿತು
ಸರ್ವ ಋತುಗಳ ಕೋಶಕೋಶಕೆ ನುಗ್ಗಿ ತೃಪ್ತಿಯನರಸಿತೂ
ಏನು ಆದರೂ ದೊರೆಯದಾದುದು ಮನದ ಬಯಕೆಯ ರಾಗವು
ಬರಿಯ ವೇದನೆ ಎದೆಯ ತುಂಬಿದೆ, ಮೂಕವಾಗಿದೆ ಹೃದಯವು'[11]

ಕವಿಯು ಬಯಸುತಿರುವ ರಾಗ ಹೊರ್ಮ್ಮದೆ ಬೇರೆ ನಾದಗಳೆದ್ದಿವೆ. ಸೃಜನಶೀಲ ರಾಗವೊಂದರ ಹುಡುಕಾಟವನ್ನು ನಡೆಸುವ ಕವಿಗೆ ಯಾವುದೂ ಕೂಡ ತೃಪ್ತಿ ನೀಡುತ್ತಿಲ್ಲ. ಮನದ ಬಯಕೆಯ ರಾಗ ದೊರೆಯದೇ ಹೃದಯದಲ್ಲಿ ಬರೀ ವೇದನೆ ತುಂಬಿ ಹೃದಯ ಮೂಕವಾಗಿ ಹೋಗಿದೆ. ಒಂದು ಹೊಸತನದ ಹುಡುಕಾಟದ ಸ್ವರೂಪವು ಇಲ್ಲಿ ಮಹತ್ವ ಪಡೆಯುತ್ತದೆ. ಬದುಕು ಕೂಡ ಒಂದು ಸಂಗೀತದಂತೆ ಮಧುರಸ್ವರದಂತಿರಬೇಕು. ಸ್ವರಗಳು ತಪ್ಪಿದರೆ ರಾಗಗಳು ಕೆಡುತ್ತವೆ.

ಹಾಗೆಯೇ ಬದುಕು ಹಸನುಗೊಳ್ಳಲಿಕ್ಕೆ ನಿರಂತರವೂ ಹೊಸತನದ ಚೈತನ್ಯದ ಚಿಲುಮೆ ಮಿಡಿಯುತ್ತಿರಬೇಕು. ಆದ್ದರಿಂದ ಕವಿ ಹೊಸ ರಾಗವೊಂದರ ಅನ್ವೇಷಣೆಯಲ್ಲಿ ತೊಡಗಿದ್ದಾರೆ ಆದರೂ ಕೂಡ ಹುಡುಕಾಟ ಮುಂದುವರೆದಿದೆ. ಇದು ಆತ್ಮಶೋಧನೆಯ ಸೃಜನಶೀಲ ಗುಣದಂತಿದೆ.ಲೀ ತರದ ಆತ್ಮವಲೋಕನದ ಚಿಂತನೆಯ ತಾತ್ವೀಕರಣದ ನೆಲೆಗಳನ್ನು ಗುರುತಿಸಬಹುದಾದ ಮತ್ತೊಂದು ಜನಪ್ರಿಯತೆಯಾದ ಭಾವಗೀತೆಯೊಂದಿದೆ.

'ಎದೆ ತುಂಬಿ ಹಾಡಿದೆನು ಅಂದು ನಾನು
ಮನವಿಟ್ಟು ಕೇಳಿದಿರಿ ಅಲ್ಲಿ ನೀವು
ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನ?
ಎಲ್ಲಾ ಕೇಳಲಿ ಎಂದು ನಾನು ಹಾಡುವುದಿಲ್ಲ
ಹಾಡುವುದು ಅನಿವಾರ್ಯ ಕರ್ಮ ನನಗೆ
ಕೇಳುವವರಿಹರೆಂದು ನಾ ಬಲ್ಲೆನದರಿಂದ
ಹಾಡುವೆನು ಮೂದುಂಬಿ ಎಂದಿನಂತೆ
ಯಾರು ಕಿವಿ ಮುಚ್ಚಿದರೂ ನನಗಿಲ್ಲ ಚಿಂತೆ'[12]

ಎಲ್ಲಾ ಕೇಳಲಿ ಎಂದು ಕವಿ ಹಾಡುವುದಿಲ್ಲ ಆದರೆ ಹಾಡುವುದೇ ಅವರ ಅನಿವಾರ್ಯ ಕರ್ಮವಾಗಿದೆ. ಯಾರು ಕಿವಿ ಮುಚ್ಚಿದರೂ ಕೂಡ ಕವಿಗೆ ಚಿಂತೆಯ ಪ್ರಶ್ನೆಯೇ ಇಲ್ಲ. ಇಲ್ಲಿ ತನ್ನ ಆತ್ಮಶೋಧನೆಯ ಹುಡುಕಾಟದ ನೆಲೆ ಸಿಚ್ಚಳವಾಗಿ ಕಂಡು ಬರುತ್ತದೆ. ಹಾಡು ಹಕಿಗೆ ಬೇಕೆ ಬಿರುದು ಸನ್ಮಾನ? ಎಂದು ಪ್ರಶ್ನಿಸುತ್ತಾ, ಎದೆ ತುಂಬಿ ಹಾಡಿದ ಜಿ.ಎಸ್.ಶಿವರುದ್ರಪ್ಪರವರ ಕಾವ್ಯದ ಧ್ರುವ್ಯ ಚಲನಶೀಲ ಗುಣವೇ ಆಗಿದೆ. ಓೀಗೆ ಚಲಿಸುವ ಕವಿಯ ಸೃಜನಶೀಲ ತತ್ವವು ತೊರೆಯೊಂದು ಕಡಲ ಸೇರುವ ತವಕ-ತೀವ್ರತೆಯನ್ನು 'ತೊರೆಯ ಹಂಬಲ' ಕವನದಲ್ಲಿ ಶೋಧಿಸಿದೆ.

'ಕಾಣದ ಕಡಲಿಗೆ ಹಂಬಲಿಸಿದೆ ಮನ
ಕಾಣಬಲ್ಲೆನೇ ಒಂದು ದಿನ?
ಕಡಲನು ಕೂಡಬಲ್ಲೆನೇ ಒಂದು ದಿನ?

ಕಾಣದ ಕಡಲಿನ ಮೊರೆತದ ಜೋಗುಳ
ಒಳಗಿಗೆಂದೂ ಕೇಳುತಿದೆ
ನನ್ನ ಕಲ್ಪನೆಯು ತನ್ನ ಕಡಲನೇ
ಚಿತ್ರಿಸಿ ಚಿಂತಿಸಿ ಸುಯ್ಯುತಿದೆ

ಎಲ್ಲಿರುವುದೊ ಅದು
ಎಂತಿರುವುದೋ ಅದು
ನೋಡಬಲ್ಲೆನೇ ಒಂದು ದಿನ
ಕಡಲನು ಕೂಡಬಲ್ಲೆನೇ ಒಂದು ದಿನ!'[13]

ಕಡಲನ್ನು ಸೇರುವ ತೊರೆಯ ಹಂಬಲ ತೀವ್ರವಾಗಿದೆ. ಕಾಣದ ಕಡಲಿನ ಅಲೆಗಳ ಮೊರೆತ ಎಲ್ಲೋ ಒಳಗಿವಿಗೆ ಕೇಳುತಿದೆ. ಎಂದೂ ಕಡಲನ್ನು ಕಾಣದ ನದಿಯೊಂದು ಆ ಕಡಲನ್ನು ನೋಡುವ, ಕೂಡುವ ತವಕ ಮತ್ತು ತಾನು ಸೇರಬಹುದಾದ ಕಡಲನ್ನು ಹುಡುಕುವ ಪ್ರಯತ್ನವೊಂದು ನಡೆದಿದೆ. ಬದುಕಿನಲ್ಲಿ ತಾನು ಸೇರಬಹುದಾದ ಹಂತದ ಬಗೆಗೆ ಚಿಂತನೆಗೂ ಒಳಪಡಿಸುತ್ತದೆ. ತನ್ನ ಪ್ರೇಮಿಯನ್ನು ನೋಡುವ, ಕೂಡುವ ಪ್ರೇಮದ ಹಂಬಲದ ತೀವ್ರ ಹುಡುಕಾಟವೊಂದು ಇಲ್ಲಿ ನಡೆದಿದೆ ಎಂಬುದನ್ನು ಗುರುತಿಸಬಹುದು. ಈ ಕವನದ ಕೊನೆಯ ಸಾಲುಗಳನ್ನು ಗಮನಿಸಬಹುದು.

'ಎಂದಿಗಾದರೂ ಕಾಣದ ಕಡಲಿಗೆ
ಸೇರಬಲ್ಲೆನೇನು?
ಸೇರಬಹುದೆ ನಾನು
ಕಡಲ ನೀಲಿಯೊಳು
ಕರಗಬಹುದೆ ನಾನು?'

'ನದಿಯೊಂದು ಕಡಲನ್ನು ಸೇರುವ ತೀವ್ರ ಹುಡುಕಾಟವನ್ನು ಮಾಡುತ್ತಿದೆ. ಆ ಮೂಲಕ ಸೃಜನಶೀಲ ಹುಡುಕಾಟವು ಪ್ರೀತಿಯ ಬಹುಳತೆಯನ್ನು ಎತ್ತಿ ಓಡಿಯುತ್ತಿದೆ. ಈಕವನವು ಬಹುಮುಖಿ ಶೋಧನಾ ತತ್ವ ಗುಣವನ್ನು ಪಡೆದುಕೊಂಡು ನಿರಂತರ ಕಾರ್ಯೋನ್ಮುಖವಾಗ ಬೇಕಾಗಿರುವ ತಾತ್ವಿಕ ಚಿಂತನೆಗೂ ಒಳಪಡಿಸುತ್ತದೆ. ಬದುಕಿನಲ್ಲಿ ಬೇಕಾಗಿರುವ ತಾತ್ವಿಕ ಚಿಂತನೆಗೂ ಒಳಪಡಿಸುತ್ತದೆ. ಬದುಕಿನಲ್ಲಿ ಭರವಸೆ ಇರಬೇಕೆಂಬುದು ಈ ಕವನ ಸಾಲುಗಳ ಚಿಂತನೆಯಾಗಿದೆ. ಇಂತಹ ಸೃಜನಶೀಲ ಕವನಗಳನ್ನು ನಾವು ಜಿ.ಎಸ್.ಶಿವರುದ್ರಪ್ಪ ಅವರಿಂದ ಮಾತ್ರ ನಿರೀಕ್ಷಿಸಲು ಸಾಧ್ಯ. ಅಂತಿಮವಾಗಿ ಯಶಸ್ಸನ್ನು ಗೆಲ್ಲುವ ನಂಬಿಕೆ ಮತ್ತು ಸೃಷ್ಟಿಶೀಲತೆ ಎಲ್ಲವನ್ನು ಗೆಲ್ಲಬಲ್ಲದು ಎಂಬ ಆಶಾವಾದದ ನಿಲುವು ಇದು. 'ತನ್ನಂತರಂಗದ ಕಾಲ ಮತ್ತು ಸೃಜನಶೀಲತೆ ಎರಡೂ ಕಾಲದ ಸವಾಲನ್ನು ದಾಟಲು ಇರುವ ಶಕ್ತಿಗಳು ಎಂಬ ನಿಲುವು ಒಟ್ಟಾರೆಯಾಗಿ ಈ ಕವನದ್ದು'.[14]

ಭರವಸೆಯ ಬೆಳಕನ್ನು, ಬದುಕನ್ನು ಸಾರ್ಥಗೊಳಿಸುವ ತೀವ್ರ ಪ್ರಯತ್ನವೂ ಕಾಣದ ಕಡಲಿನ ನಿಗೂಢತೆಯನ್ನು ಕಾವ್ಯಾಭಿವ್ಯಕ್ತಿಯ ತೀವ್ರತೆಯೂ ಅಷ್ಟೇ ಮುಖ್ಯವಾಗಿ ತೋರಿಸುತ್ತದೆ.

ಜಿ.ಎಸ್.ಶಿವರುದ್ರಪ್ಪರವರ ಕೇಂದ್ರ ಕಾಳಜಿ ಪ್ರೀತಿ. ಅವರ ಎಲ್ಲಾ ಕವಿತೆಗಳಲ್ಲೂ ಪರೋಕ್ಷವಾಗಿಯಾದರೂ ಕಂಡು ಬರುತ್ತದೆ. ಅದು ಅವರ ಕಾವ್ಯ ಜೀವಾಳ. ಸೃಜನಶೀಲತೆಯ ಮೂಲ ಕೇಂದ್ರ. ಪ್ರಶ್ನೆ ಎಂಬ ಕವಿತೆಯಲ್ಲಿ ಪ್ರೀತಿ ಎಂದರೇನು? ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನ ಮಾಡಲಾಗಿದೆ.

'ಪ್ರೀತಿ ಎಂದರೇನು – ಎಂದು
ನೀನು ನನ್ನ ಕೇಳಿದೆ
ನಾನು ಮಿಡುಕಿ ತಡಕಾಡಿದೆ'

ಎನ್ನುವ ಅವರು ಹೊಳೆಗಳೆಲ್ಲಾ ಕಡಲಿಗೋಡಿ / ಅಪ್ಪಿಕೊಂಡು ಕರಗಿವೆ / ಮೋಡವೆಲ್ಲಾ ಕೆಳಗೆ ಸುರಿದು ನೆಲಕೆ ಮುತ್ತನೊತ್ತಿವೆ / ಎಂಬ ನಿಲುವು ಪ್ರೀತಿಗುತ್ತರದಂತಿದೆ.

'ತಾಯಿ ಕೊಟ್ಟ ಮೊಲೆ ಹಾಲಿನ
ರುಚಿಯಲಿ ಮಗು ಬೆಚ್ಚನೆ
ಗಂಡು ಹೆಣ್ಣಿನಪ್ಪುಗೆಯಲಿ
ಸುತ್ತ ಎಲ್ಲ ಹಚ್ಚಗೆ'[15]

ಪ್ರೀತಿಯ ಅಮರತ್ವವನ್ನು ಪ್ರತಿಪಾದಿಸುವ ನಿಲುವು ಇದು. 'ಪ್ರೀತಿ ಇಲ್ಲದ ಮೇಲೆ' ಕವನದ ಪಾರದರ್ಶಕತೆಯನ್ನೇ ಈ ಕವನ ಚಿಂತನೆಗೊಳಪಡಿಸುತ್ತದೆ. ಜೀವ ಸೃಷ್ಟಿಗೆ, ಸಾಹಿತ್ಯ ಸೃಷ್ಟಿಗೆ, ಕರುಣೆ–ವಿಶ್ವಾಸಗಳ ಉಗಮ ವಿಕಾಸಕ್ಕೆ ಪ್ರೀತಿಯ ಮೂಲದ್ರವ್ಯದ ಅಗತ್ಯವಿದೆ. ಜಗತ್ತಿನಲ್ಲಿ ಪ್ರೀತಿಯ ಅಭಾವವಿದ್ದು, ವ್ಯಕ್ತಿ ಮತ್ತು ಸಮಷ್ಠಿ ನೆಲೆಯಲ್ಲಿ ಪ್ರೀತಿಯ ಹುಡುಕಾಟ ನಡೆದಿದೆ.

ಟಿಪ್ಪಣಿಗಳು

1. ಸಮಗ್ರ ಕಾವ್ಯ, ಪುಟ-461
2. ಸಮಗ್ರ ಕಾವ್ಯ. ಪುಟ-228
3. ಡಿ.ಆರ್. ನಾಗರಾಜ್ - ಶಕ್ತಿ ಶಾರದೆಯ ಮೇಳ, ಪುಟ-186
4. ಸಮಗ್ರ ಕಾವ್ಯ, ಪುಟ-104
5. ಸಮಗ್ರ ಕಾವ್ಯ
6. ಸಮಗ್ರ ಕಾವ್ಯ
7. ಸಮಗ್ರ ಕಾವ್ಯ, ಪುಟ-130
8. ಸಮಗ್ರ ಕಾವ್ಯ, ಪುಟ-528
9. ಸಮಗ್ರ ಕಾವ್ಯ, ಪುಟ-60
10. ಸಮಗ್ರ ಕಾವ್ಯ, ಪುಟ-468
11. ಜಿ.ಎಸ್.ಶಿವರುದ್ರಪ್ಪ- ಕಾವ್ಯ - ಒಂದು ಮರು ಓದು, ಪುಟ-80
12. ಸಮಗ್ರ ಕಾವ್ಯ, ಪುಟ-36
13. ಸಮಗ್ರ ಕಾವ್ಯ, ಪುಟ-65
14. ಸಮಗ್ರ ಕಾವ್ಯ, ಪುಟ-96
15. ಡಿ.ಆರ್. ನಾಗರಾಜ್ / ಶಕ್ತಿ ಶಾರದೆಯ ಮೇಳ, ಪುಟ-195
16. ಸಮಗ್ರ ಕಾವ್ಯ, ಪುಟ-327

ಅಧ್ಯಾಯ – 5

ಜಿ.ಎಸ್. ಶಿವರುದ್ರಪ್ಪ ಅವರ ಕವಿತೆಗಳಲ್ಲಿ ಸ್ತ್ರೀ ಪರಿಕಲ್ಪನೆ

ಪರಂಪರೆಯನ್ನು ಅವಲೋಕಿಸಿದಾಗ ಸ್ತ್ರೀ–ಯನ್ನು ಕುರಿತು 'ಭಾರತಮಾತೆ' ಎಂಬ ದೃಷ್ಟಿಕೋನದಲ್ಲಿ ಇಂದಿಗೂ ಉನ್ನತ ಸ್ಥಾನದಲ್ಲಿಟ್ಟು ಪೂಜಿಸುವ ಹಾಗೆ ವಿಶೇಷ ಸ್ಥಾನಮಾನದ ನೆಲೆಗಟ್ಟಿನಲ್ಲಿ ಸ್ತ್ರೀ–ಗೆ ಪ್ರಕೃತಿಯ ವರ್ಣನೆ, ದೇವತೆಯ ವರ್ಣನೆ, ಮಾತೃದೇವೋ ಭಾವದ ವರ್ಣನೆಯೊಂದಿಗೆ ಶೃಂಗಾರದ ಅಥವಾ ಸೌಂದರ್ಯದ ಪ್ರತೀಕವಾಗಿಯೂ ಸ್ತ್ರೀ ಗುರುತಿಸಿಕೊಂಡಿರುವುದು ನಾವು ಆಕೆಗೆ ಉನ್ನತ ಸ್ಥಾನಮಾನವನ್ನು ನೀಡಿರುವುದೂ ಕೂಡ ನಮ್ಮ ಸಮಾಜದ ಬಹುಮುಖ್ಯ ಅಂಶಗಳಲ್ಲಿ ಒಂದಾಗಿದೆ.

ಅಂತೆಯೇ ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಕೋನವನ್ನು ಅವಲೋಕಿಸಿದಾಗ ಪ್ರತಿಯೊಬ್ಬ ಕವಿಯೂ ಸಹ ಪ್ರಾಚೀನ ಪರಂಪರೆಯಿಂದ ಇತ್ತೀಚಿನವರೆಗೂ ವಿಭಿನ್ನ ದೃಷ್ಟಿಕೋನದಲ್ಲಿ, ಹಿಂದಿನ ಪರಂಪರೆಗಿಂತ ಅಂದರೆ ಪ್ರಾಚೀನ ಪರಂಪರೆಗಿಂತ ವಿಕಾಸ ಕಾಲಘಟ್ಟದಲ್ಲಿ ಪೂಜ್ಯನೀಯ ಸ್ಥಾನಮಾನವನ್ನು ಪಡೆಯುತ್ತಿರುವುದು ಮತ್ತು ಗೌರವದ ಸ್ಥಾನಮಾನವನ್ನು ಪಡೆಯುತ್ತಿರುವುದೂ ಕೂಡ ಹೆಮ್ಮೆಯ ಸಂಗತಿಯಾಗಿದೆ. ಕುವೆಂಪುರವರ 'ಶ್ರೀರಾಮಾಯಣ ದರ್ಶನಂ' ಕಾವ್ಯದಲ್ಲಿ ವಾಲ್ಮೀಕಿ ಯವರ ರಾಮಾಯಣಕ್ಕಿಂತ ಭಿನ್ನವಾಗಿ 'ಸೀತೆಯ' ಪಾತ್ರವನ್ನು ಚಿತ್ರಿಸಿರುವುದನ್ನು ಕಾಣಬಹುದು.

ಅಂತೆಯೇ 'ಒಬ್ಬ ಸೃಜನಶೀಲ ಲೇಖಕ ವಾಸ್ತವವಾಗಿ ತನ್ನ ಬರಹಗಳಲ್ಲೇ ತನ್ನ ನಿಜವಾದ ಆತ್ಮಕತೆಯನ್ನು ಬರೆದುಕೊಂಡಿರುತ್ತಾನೆ' ಎನ್ನುತ್ತಾರೆ. ಈ ಮಾತುಗಳ ಹಿನ್ನೆಲೆಯಲ್ಲಿ ಚಿಂತಿಸಿದಾಗ ಆರಂಭದಲ್ಲಿ ಉಲ್ಲೇಖಿಸಲಾದಂತೆ ಜಿ.ಎಸ್. ಶಿವರುದ್ರಪ್ಪ ರವರ ಬಾಲ್ಯ ಜೀವನದಲ್ಲಿನ ಘಟನೆಯು ಅವರ ಮುಂದಿನ ಕವಿತೆಗೆ ಪ್ರೇರಣೆಯಾಗಿರ ಬೇಕೆಂದು ಊಹಿಸಿರುವುದು ತಪ್ಪಾಗಲಾರದು'.

'ಇದ್ದಕ್ಕಿದ್ದಂತೆಯೇ ನೀ ಹಾರಿ ಹೋದೆ
ಬುವಿಯ ಪಂಜರದಿಂದ ಬಿಡುಗಡೆಯ ಪಡೆದ
ನಾನೊಬ್ಬನೇ ಉಳಿದೆ
ನಾನೊಬ್ಬನೇ ಬೆಳೆದೆ
ಬಾಳ ಬಿರುಗಾಳಿಯಲಿ ಎದೆಯನೊಡ್ಡಿ
ಕಳೆದ ಸಾಲಕೆ ಇನ್ನು ತೀರದಿದೆ ಬಡ್ಡಿ'

'ನೀ ಸತ್ತು ಹೋಗಿರುವೆ ಎಂಬುದನು ಕೇಳಿ
ನಾನು ನಂಬಲೇ ಇಲ್ಲ. ನನ್ನೆಳೆವೆಯಲ್ಲಿ
ನೀನೆಲ್ಲೊ ಹೋಗಿರುವೆ
ಎಂಬ ನಂಬುಗೆಯಲ್ಲಿ ಹಲವು ದಿನ ಕಾದೆ
ಕಡೆಗೆ ನಂಬಿದೆ ನಾನು – 'ನೀ ತೊರೆದು ಹೋದೆ!'
ತಾಯೊಲವೆ ತಾಯೊಲವು ಈ ಲೋಕದೊಳಗೆ
ಕಡಲಿಗೆ ಕಡಲಲ್ಲದುಂಟೆ ಹೋಲಿಕೆಗೆ
ಓ ಅಮೃತ ಪ್ರೇಮವೇ
ಓ ಮಾತೃ ರೂಪವೇ
ತೀರಲಾರದ ತೃಷೆಗೆ ಮರುಜನ್ಮ ಬೇಕು
ಮತ್ತೊಮ್ಮೆ ಶಿಶುವಾಗಿ ನಾ ನಲಿಯಬೇಕು''

ಕಳೆದುಕೊಂಡ ತನ್ನ ತಾಯಿಯನ್ನು ಕುರಿತು ಕವಿತೆ ಬರೆಯಲು ಪ್ರೇರಣೆ ನೀಡಿದ್ದೇ ಕಳೆದುಹೋದ ತಾಯಿಯ ಹಂಬಲದಿಂದ. ಈ ಭೂಮಿಯೆಂಬ ಪಂಜರದಿಂದ ಕಳೆದುಹೋದ ದೇವತೆಯಿಂದ ಉಳಿದದ್ದು ನಾನೊಬ್ಬನೇ ಬೆಳೆದದ್ದು ನಾನೊಬ್ಬನೇ ಬಾಳಿನಲ್ಲಿ ಎದೆಯನೊಡ್ಡಿ ಈ ಜೀವನ ಸಾಗಿಸಿ ಮಾಡಿದ ಸಾಲ ತೀರದೆ ಅದಕ್ಕೆ ಬಡ್ಡಿ ಮಾತ್ರ ಏರುತ್ತಿದೆ...

ನಿನ್ನ ಕಳೆದುಕೊಂಡದ್ದನ್ನ ನಾನು ನಂಬಲೇ ಇಲ್ಲ ನನ್ನಳೆವೆಯಲ್ಲಿ ನೀನೆಲ್ಲೋ ಹೋಗಿರುವೆ ಮತ್ತೆ ಬಳಿಗೆ ಬರುವೆ ಎಂಬ ನಂಬಿಕೆಯಲ್ಲೇ ಹಲವು ದಿನ ಜೀವನ ನೂಕಿದ್ದೇನೆ ಕಡೆಗೆ ನಂಬಿದೆ ನಾನು – ನೀತೊರೆದು ಹೋದೆ!

ತಾಯಿಯ ಪ್ರೀತಿಯೆ ಈ ಲೋಕದಲ್ಲಿ ಕಡಲಿಂಗೆ ಕಡಲಲ್ಲದುಂಟೆ ಹೋಲಿಕೆಗೆ ಓ ಅಮೃತ ಪ್ರೇಮವೇ ಓ ಮಾತೃ ರೂಪವೇ ತೀರಲಾರದ ತೃಷೆಗೆ ಮರುಜನ್ಮಬೇಕು ಮತ್ತೊಮ್ಮೆ ಶಿಶುವಾಗಿ

ನಾ ನಲಿಯಬೇಕು... ಎನ್ನುವ ಕವಿಯ ಹಂಬಲ ಮಾತೃದೇವತೆಗೆ ಮಾಡಿದ ನಿವೇದನೆಯ ಅಂತರಾಳವನ್ನೊಳಗೊಂಡ ಕವಿತೆ ಸ್ಫೂರ್ತಿ ಪಡೆದದ್ದೇ 'ತಾಯಿ' ಎಂಬ ದೇವತೆಯಿಂದ... ಎನ್ನುವಲ್ಲಿ ಪರಿಪರಿಯಾಗಿ ಮಾತೃದೇವತೆಯ ಬಗೆಗಿನ ನಿಲುವು ವ್ಯಕ್ತವಾಗಿದೆ. ಹಾಗೆಯೇ ರಾಷ್ಟ್ರಕವಿ ಕುವೆಂಪುರವರು ಕೂಡ ರಾಷ್ಟ್ರವನ್ನೆ – 'ಭಾರತಾಂಬೆ' ಎನ್ನುವ ದೃಷ್ಟಿಕೋನದಲ್ಲಿ ಭೂದೇವಿ ಎನ್ನುವ ಪರಿಕಲ್ಪನೆಯಲ್ಲಿ ಸ್ತ್ರೀಯನ್ನ ಉನ್ನತಮಟ್ಟದಲ್ಲಿರಿಸಿರುವುದನ್ನು ಗಮನಿಸಬಹುದು. ಅಂತೆಯೇ ಬೇಂದ್ರೆಯವರು "ಇಳಿದು ಬಾ ತಾಯಿ ಇಳಿದು ಬಾ" ಸಾಲು ಬೇಂದ್ರೆಯವರ 'ಗಂಗಾವತರಣ'ದಲ್ಲಿ ಬರುತ್ತದೆ ಇಲ್ಲಿಯೂ ಸಹ ಗಂಗೆಯ/ನೀರಿನ ಮಹತ್ವವನ್ನು ಹಾಗೂ ಭವ್ಯತೆಯಿಂದ ಹೋಲಿಕೆ ಮಾಡಿರುವುದು ಪ್ರಮುಖವಾದದ್ದಾಗಿದೆ.

ಹಾಗೆಯೆ ಜಿ.ಎಸ್. ಶಿವರುದ್ರಪ್ಪ ಅವರ ಕವಿತೆಗಳಲ್ಲಿ ಹೆಚ್ಚಿನ ಕವಿತೆಗಳು ಒಂದು ಗುಪ್ತಗಾಮಿನಿಯಾದ ಹುಡುಕಾಟವನ್ನು ಹೊಂದಿದೆ. "ಜಡೆ" ಎಂಬ ಪ್ರಸಿದ್ಧ ಕವಿತೆಯಲ್ಲಿ ಕವಿ "ಜಡೆಯಾಚೆ ತಿರುಗಿಸಿದ ತಾಯಿ ಮುಖ ಮಾತ್ರ ಕಾಣದಲ್ಲ" ಎಂಬ ಕೊನೆ ವಾಕ್ಯದಿಂದ ಕವಿತೆಯ ಸಾಮಾನ್ಯ ಅರ್ಥದಾಚೆಗೆ ಒಂದು ನೆಗೆತವನ್ನು ಸಾಧ್ಯವಾಗಿಸಿ ಬಿಡುತ್ತಾರೆ. ಇಲ್ಲದ ದೇವರನ್ನು ಕಲ್ಲುಮಣ್ಣುಗಳ ಗುಡಿಯೊಳಗೆ ಹುಡುಕಿದೆ, ಇಲ್ಲೇ ಇರುವ ಪ್ರೀತಿ ಸ್ನೇಹಗಳನ್ನು ಗುರುತಿಸದಾದೆ – ಎಂಬ ಆಳವಾದ ತಿಳುವಳಿಕೆ ಜಿ.ಎಸ್. ಶಿವರುದ್ರಪ್ಪರವರ ಕಾವ್ಯದೊಳಗೆ ಇದೆ.

ಪ್ರಸ್ತುತ ಪದ್ಯದಲ್ಲಿ ಕವಿ/ನಿರೂಪಕ ತನ್ನ ಕಣ್ಣಿಗೆ ಕಂಡ ಎಲ್ಲ ಹೆಣ್ಣುಗಳ ಮುಖದಲ್ಲಿ ತಾಯಿಯ ಮುಖವನ್ನು ಅರಸುತ್ತಾನೆ. ಆ ಹುಡುಕಾಟದಲ್ಲಿ ತಾಯಿ ಮುಖ ಕಾಣದಾದಾಗ ನಿಟ್ಟುಸಿರಿನಲ್ಲಿ ಮುಳುಗುತ್ತಾರೆ.

ಇಲ್ಲಿ ತಾಯಿಯ ಮುಖದ ಅನ್ವೇಷಣೆಗೆ ಸ್ಪಷ್ಟ ಚಹರೆಗಳೇನೂ ಇಲ್ಲ. ಅವಳು ಎಂತಿದ್ದಳು ಎಂಬ ಸ್ಪಷ್ಟ ನಿರ್ದೇಶಕ ರೇಖೆಗಳೇನೂ ಇಲ್ಲ ತಾಯಿಯ ರೂಪದ ಅಸ್ಪಷ್ಟ ನೆನಪು. ಅವಳು ಎಂತಿದ್ದಾಳೋ ಎಂಬ ಬೆರಗುಗಳಲ್ಲಿ ಬದುಕು ಮುಂದುವರಿದು ನಿರೂಪಕ ಸಂಸಾರಿಯೂ, ತಂದೆಯೂ ಆಗುತ್ತಾನೆ. ಬಾಳ ನೂಲು ಬಿಗಿದಾಗ ದೈನಂದಿನ ಜೀವನದ ಸಾಮಾನ್ಯ ದೃಶ್ಯವೊಂದರಲ್ಲಿ ಅವನಿಗೊಂದು ದರ್ಶನ ಕಾಣುತ್ತದೆ. ಇಷ್ಟುಕಾಲ ಮರೀಚಿಕೆಯಾಗಿ ಅವನನ್ನು ಕಾಡಿಸಿದ ತಾಯಿಯ ಚಿತ್ರ ಮನದಲ್ಲಿ ಮೂಡುತ್ತದೆ. ಅದು ಯಾವಾಗ – ತನ್ನ ಮಡದಿ ಮಗುವಿಗೆ ಮುತ್ತಿಡುವ ಹೊತ್ತಿನಲ್ಲಿ ತನ್ನನ್ನು ಬಾಲ್ಯದಿಂದಲೂ ಕಾಡುತ್ತ ಬಂದ ತಾಯಿಯ ಬಿಂದ ಮೂಡಿತು. ಇದರಲ್ಲೂ ಪ್ರಮುಖವಾಗಿ ತಾಯಿಯ ಪರಿಕಲ್ಪನೆಯನ್ನೊಳಗೊಂಡ ಸ್ತ್ರೀ ದೃಷ್ಟಿಕೋನ ಉತ್ತಮವಾಗಿ ವ್ಯಕ್ತವಾಗಿದೆ.

ಅಂತೆಯೇ ..

'ಮದುವೆಯಾಯ್ತು, ಮಕ್ಕಳಾಯ್ತು
ಬಾಳನೂಲು ಬಿಗಿಯಿತು
ಕಡೆಗೆ ಇಲ್ಲಿ ನನ್ನ ಮಡದಿ
ಮಗುವಿಗೆ ಮುತ್ತನಿಡುವ ಹೊತ್ತು
ನಿನ್ನ ಚಿತ್ರ ಮೂಡಿತು
ಬೆರಗು – ಹರ್ಷ ಕವಿಯಿತು!'

ಈ ಪದ್ಯಗಳೊಡನೆ ತುಂಬಾ ಹತ್ತಿರವಾಗಿ ಹೋಲಿಸಿ ಅಧ್ಯಯನ ಮಾಡಬಹುದಾದ ಕವಿತೆಯೊಂದು ಇಂಗ್ಲೀಷ್ ಸಾಹಿತ್ಯದಲ್ಲಿದೆ. ಅದು ಕೂಪರ್ ಕವಿಯ "Oh Receipt of my mothers picture" ಎಂಬ ಕವಿತೆ. ಶ್ರೀಮಂತ ಕುಲೀನನ ಮಗನಾದ ಕೂಪರ್ ಎಳೆತನದಲ್ಲೇ ತನ್ನ ತಾಯಿಯನ್ನು ಕಳೆದುಕೊಂಡವನು. ಅವನ ಪಕ್ವ ವಯಸ್ಸಿನಲ್ಲಿ ಪರಿಚಿತರೊಬ್ಬರು ಅವನಿಗೆ ತಾಯಿಯ ಚಿತ್ರವೊಂದನ್ನು ಕಳುಹಿಸಿಕೊಡುತ್ತಾರೆ.

'ಕವಿ ಈ ಚಿತ್ರವನ್ನು ನೋಡುತ್ತಾ ತಾಯಿಯ ರೂಪ, ಅವಳ ಕರುಣೆ, ಅವಳ ಬುದ್ಧಿವಾದಗಳನ್ನು ಪನರನುಭವಿಸುತ್ತಾ ಕಲೆಯು ಮನುಷ್ಯನನ್ನ ಅಮರವಾಗಿಸಿದೆಯಲ್ಲಾ ಎಂದು ಬೆರಗುಪಡುತ್ತಾನೆ. ಕೂಪರ್ ತನ್ನ ತಾಯಿಯ ಚಿತ್ರವನ್ನು ನೋಡಿ ಕಲೆಯ ಮಹತ್ವವನ್ನು ಪರಿಭಾವಿಸಿದರೆ ಅನ್ವೇಷಣೆಯ ಕವಿ ಸ್ಪಷ್ಟ ರೂಪುರೇಖೆಗಳಿಲ್ಲದ ತನ್ನ ತಾಯಿಯ ಬರೆಯದ ಚಿತ್ರವನ್ನು ಹುಡುಕುತ್ತಾ ಮಡದಿಯಲ್ಲಿ ಎಲ್ಲ ತಾಯಿಯರ ಚಿತ್ರವನ್ನು ಕಂಡಿದ್ದಾರೆ'.[2]

ಜಿ.ಎಸ್. ಶಿವರುದ್ರಪ್ಪ ಅವರ ಸಿಂಡರೆಲಾ ಕಾವ್ಯ ಭಾಗದಲ್ಲಿ ಸಿಂಡರೆಲಾ ಎಂಬ ಮುಗ್ಧ ಹೆಣ್ಣೊಬ್ಬಳ ಬದುಕಿನ ನಿರ್ಣಾಯಕ ಘಟನೆಯನ್ನು ಕುರಿತದ್ದು. ಕವಿ ಪ್ರತಿಭೆ ಪದವಾಗಿ ಪ್ರಾಣ ಪಡೆಯುವುದು ಕೂಡ ಬಡಹುಡುಗಿಯೊಬ್ಬಳು ರಾಜಕುಮಾರಿಯಾಗಿ ರೂಪಾಂತರಗೊಳ್ಳುವ ಪ್ರಕ್ರಿಯೆಯನ್ನು ಸಂಕೇತಿಸುತ್ತದೆ. ಅಂತೆಯೇ ಕಾಲ ಮತ್ತು ಮನುಷ್ಯನ ಸಂಬಂಧದ ಪ್ರಶ್ನೆ ಜಗತ್ತಿನ ಎಲ್ಲಾ ಕವಿಗಳನ್ನು ಕಾಡಿದೆ ಕನ್ನಡದ ಕವಿಗಳು ಇದಕ್ಕೆ ಹೊರತಲ್ಲ

'ಪಾದ ಒಂದೇ ಒಂದು ಹೊಳೆಯುವ ಬೂಡ್ಸೂ ಅ
ನಾಥವಾಗಿ! ಕೈಗೆತ್ತಿಕೊಂಡ ರಾಜಕುಮಾರ
ಒಳ ಮನೆಯೊಳಗೆ ಕೂತ ಚಿಂತಾಕ್ರಾಂತ. ಇತ್ತ
ಸಿಂಡರೆಲಾ ಅಡುಗೆ ಮನೆಯೊಳಗೆ, ಸುಂದರ'

'ಮನುಷ್ಯ ಬದುಕಿನ ಅನನ್ಯ ಅನುಭವಗಳಲ್ಲಿ ಒಂದು ಬಗೆಯಲ್ಲಿ ಹೀಗೆ ಕಾಲ ಮಿತಿಗೆ ಬದ್ಧ. ಇದೇ ಸಿಂಡರೆಲಾಗೆ ಇರುವ ಅವಸರಕ್ಕೆ, ವಿಷಾದಕ್ಕೆ ಕಾರಣ ಸಿಂಡರೆಲಾ ಕವಿತೆಯಲ್ಲಿನ ಕಾಲದ ಪಲ್ಲಟ ಈ ಪಲ್ಲಟ ಹೊರಳಿಗೆ ಬದಲಾಗುವ ಮಾಂತ್ರಿಕ ಆವರಣದ ನಿರೀಕ್ಷೆ ಈ ಕವಿತೆಯ ಶೋಧ ಇನ್ನು ಸಿಂಡರೆಲಾ ದೇವತೆಯ ಕಾಲ ಮಿತಿಯನ್ನು ಉಲ್ಲಂಘಿಸುವುದು ಯಾಕೋ ಕಾಳಿದ್ದಾಸನ ಶಕುಂತಲೆ ದುಷ್ಯಂತನ ಧ್ಯಾನ್ಯದ ತಲ್ಲೀನತೆಯಲ್ಲಿ ದುರ್ವಾಸನನ್ನು ನಿರ್ಲಕ್ಷಿಸುವುದನ್ನು ನೆನಪಿಗೆ ತಂತು. ಈ ಎರಡು ಪ್ರಕರಣಗಳಲ್ಲಿ ತಮ್ಮ ಪ್ರೇಮದ ಪರಾಕಷ್ಟತೆಯಿಂದಲೇ ಸಿಂಡರೆಲಾ ಹಾಗೂ ಶಕುಂತಲಾ ಪ್ರೇಮಿಗಳಿಂದ ಅಗಲಿಕೆಗೆ ಆ ಮೂಲಕ ವಿರಹಕ್ಕೆ ತಾಗುವ ಘಟನೆಗಳು ನಡೆಯುತ್ತವೆ. ಆದರೆ ಈ ಇಬ್ಬರು ತಬ್ಬಲಿಗಳು ತಮ್ಮ ಬದುಕಿನ ಆಕಸ್ಮಿಕ ಮಾಂತ್ರಿಕತೆಯಿಂದಾಗಿ ರಾಜಮನೆತನಕ್ಕೆ ಪರಿಚಯವಾದವರಾಗಿದ್ದಾರೆ. ಆದರೆ ನೀರಿನಲ್ಲಿ ಶಕುಂತಲೆ ಕಳೆದುಕೊಂಡ ಉಂಗುರ ಹಾಗೂ ಸಿಡರೆಲಾ ಅರಮನೆಯನ್ನು ದಾಟುವಾಗ ಕಳೆದುಕೊಂಡ ಬೂಟ್ಸ್‌ಗಳೇ ಈ ಹೆಣ್ಣುಗಳು ಕಳೆದುಕೊಂಡ ಅರಮನೆಯನ್ನು ಮರಳಿ ಸಂಪಾದಿಸಿಕೊಳ್ಳಲು ನೆರವಾಗಿದ್ದನ್ನು ಕವಿತೆ ಹೊಳೆಯಿಸುತ್ತದೆ. ಕಾಲದ ಹಲವು ಹೊರಳುಗಳಲ್ಲಿ ಇಂತಹ ಮಾಂತ್ರಿಕ ಘಳಿಗೆಗಳು ಹುದುಗಿರುವ ಸಂಭವಗಳ ಬಗ್ಗೆ ಕವಿತೆ ನಂಬಿಕೆ ತಾಳುತ್ತದೆ.[3]

ಅಂತೆಯೇ ಸ್ತ್ರೀ ಪರಿಕಲ್ಪನೆಯನ್ನೊಳಗೊಂಡ ಅಕ್ಕಮಹಾದೇವಿಯನ್ನು ಕುರಿತು ರಚಿಸಿದ ಕವನಗಳಲ್ಲೊಂದಾದ "ಅಮೃತ ಮುಹೂರ್ತ" ಕವನ ಸಾರ್ಥಕ ಕವನವಾಗಿದೆ. ಅಸಾಧಾರಣ ಚೇತನವೊಂದರ ಸಾಧನೆಯ ಪ್ರಕ್ರಿಯೆಯನ್ನು ಗುರುತಿಸುವ ಪ್ರಯತ್ನದ ಕವಿತೆ ಇದು. ಈ ಪದ್ಯದ ಶೀರ್ಷಿಕೆಯಲ್ಲಿ "ಅಮೃತ ಮುಹೂರ್ತ" ಎನ್ನುವುದು ಹುಡುಕಿದ್ದು ಸಿಗುವ, ಬಯಸಿದ್ದು ದಕ್ಕುವ ಸಾರ್ಥಕ ಘಳಿಗೆಯೊಂದನ್ನು ಕುರಿತದ್ದು ಎನಿಸುತ್ತದೆ. ಆದರೆ ನಿಜದಲ್ಲಿ ಈ ಕವನವು ನಿರೀಕ್ಷಿತ ಅಮೃತ ಮುಹೂರ್ತವು ಸಾಧಿತವಾಗಲು ಅಕ್ಕಮಹಾದೇವಿ ಕ್ರಮಿಸಿದ ಇತರ ಅನೇಕ ಮುಹೂರ್ತಗಳು, ಘಳಿಗೆಗಳೂ ಮುಖ್ಯವಾದವು.

ಅಂತೆಯೇ 12ನೇ ಶತಮಾನದ ವಚನಕಾರ್ತಿಯನ್ನು ಕುರಿತು ಸ್ತ್ರೀ ಲೋಕದ ಅನಾವರಣದೊಳಗೆ ವಿಶೇಷವಾಗಿ ಗುರ್ತಿಸಿದ್ದು ಅವರಲ್ಲಿ ಭಕ್ತಿ ಪ್ರೀತಿಗಳೆರಡು ಅಭಿನ್ನವಾಗಿ ಬೆರೆತ ಅಪೂರ್ವ ಸಖ್ಯವೆಂದಕ್ಕೆ ಹಾತೊರೆದವಳು ಅಕ್ಕಮಹಾದೇವಿ ಲೋಕ ಒಪ್ಪದ ಅದಕ್ಕೆ ಅರ್ಥವಾಗದ ಈ ಸಂಬಂಧವನ್ನು ಸಾಕ್ಷಾತ್ಕರಿಸಿಕೊಳ್ಳು ಅಕ್ಕಮಹಾದೇವಿ ಅಂತರಂಗ ಮತ್ತು ಬಹಿರಂಗದ ನೆಲೆಗಳಲ್ಲಿ ಅನೇಕ ಸವಾಲುಗಳನ್ನು ಎದುರಿಸಿದು. ಅಂತೆಯೇ ವಾಸ್ತವ ಸಮಾಜದಲ್ಲಿ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅಕ್ಕಮಹಾದೇವಿ ಎದುರಿಸಿದ ಸಹಜ ಸವಾಲುಗಳು ಮಾತ್ರವಲ್ಲದೆ ಆ ವ್ಯವಸ್ಥೆ ಒಡ್ಡುವ ಆಮಿಷಗಳು ಆ ಆಮಿಷಗಳನ್ನು ಮೀರುವ ಕಷ್ಟವೂ ಇಲ್ಲಿ ಚಿತ್ರಿತವಾಗಿದೆ. ಆ ಆಮಿಷಗಳಾದರೂ ಸಾಧಾರಣವಾದವಲ್ಲ ಇದಕ್ಕೆ ಸಂಬಂಧಿಸಿದ ಕವಿತೆಯನ್ನು ನೋಡಿದರೆ

'ಅದಿಗೊ ಕರೆಯುತ್ತಲಿದೆ ಕನಕ ಸರ್ಪದ ಬಳಸು
ಅನುರಾಗ ದೀಪಗಳ ಹೆಡೆಯಾಡಿಸಿ
ಅರಮನೆಯ ವೈಭವದ ಮೋಹ ಮಂದಿರದಲಿ
ಕರೆಯುತ್ತಿದೆ ಪುಂಗಿದನಿ ಬಲೆಯ ಬೀಸಿ:
'ಬಾ ಬಾರೆ ಬಾ ಚೆಲುವೆ
ಬಾ ಇಲ್ಲಿ ನಿನಗೊಲಿವೆ
ಪಟ್ಟ ಮಹಿಷಿಯ ಪದವಿ ಇಗೋ ಮೀಸಲು'

""ಪಟ್ಟ ಮಹಿಷಿಯ ಪದವಿ ಇಗೋ ಮೀಸಲು" ಎನ್ನುವ ಸವಾಲನ್ನು ಎದುರಿಸುವುದಾಗಲೀ "ಅನುರಾಗ ದೀಪಗಳ ಹೆಡೆಯಾಡಿಸಿ ಅರಮನೆಯ ವೈಭವದ ಮೋಹ ಮಂದಿತದಲಿ" ಕರೆಯುವ ಪುಂಗಿ ದನಿಗೆ ತಲೆಯಾಡಿಸದೇ, ಒಳಗಾಗದೆ, ಇರುವುದಾಗಲೀ ಸುಲಭವಲ್ಲ. 12ನೇ ಶತಮಾನದ ದಿಟ್ಟ ವಚನಕಾರ್ತಿಯ ನಿಲುವಿನಲ್ಲಿ ಸ್ತ್ರೀ ಸಮಾಜದ ದಿಟ್ಟ ನಿಲುವನ್ನು ಪ್ರಶಂಸುವಲ್ಲಿ ಜಿ.ಎಸ್. ಶಿವರುದ್ರಪ್ಪ ರವರು ಸಫಲರಾಗಿರುವುದು ವಿಶೇಷವೆನಿಸುತ್ತದೆ. ಅಕ್ಕ ಬುದ್ಧಿ, ಭಾವಗಳೆರಡರ ಬಲದಿಂದಲೂ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಮನಸ್ಸನ್ನು ಪಳಗಿಸುವ, ನಿಯಂತ್ರಿಸುವ ಘಳಿಗೆಗಳು ಪರಮ ಆತ್ಮ ಹಿಂಸೆಯ ಘಳಿಗೆಗಳು ಹೌದು ಹಾಗೆಯೇ ನಿತ್ಯನೂತನವೆನ್ನುವಂತೆ ಕಾಡುವ ಈ ಬಯಕೆಗಳನ್ನು ನಿತ್ಯವ್ರತದ ನಿಷ್ಠೆಯಲ್ಲಿಯೇ ಗೆಲ್ಲುವ ನಿರಂತರ ಪ್ರಯತ್ನ ಅಕ್ಕನದು.

ಹಾಗೆಯೇ ಕೌಶಿಕನ ಕಾಯುವಿಕೆಯ ಆರ್ತತೆಯ ಅಕ್ಕನ ಕಷ್ಟವನ್ನು ಇನ್ನೂ ಹೆಚ್ಚಿಸುತ್ತದೆ'

'ಸಾಲು ಸುಪ್ಪತ್ತಿಗೆಯ ರನ್ನಗಂಬಳಿ ನೆಲದಿ
ಪವಡಿಸಿದೆ ಅರಮನೆಯ ನೆಳಲ ತಂಪು
ಮೂಕವಾಗಿದೆ ವೀಣೆ ಭಗ್ನವಾಗಿದೆ ಮುರಳಿ
ನಿನಗಾಗಿ ಕಾಯುತ್ತಾ ಕೊರಗಿ ನರಳಿ'

"ಅಧಿಕಾರ, ಆರ್ತತೆ, ಆಮಿಷ, ವಾತ್ಸಲ್ಯದ ಬಂಧನಗಳು, ಸ್ಥಾಪಿತ ಮೌಲ್ಯಗಳು ಈ ಎಲ್ಲವನ್ನು ಒಂದೊಂದಾಗಿ ಬಿಡಿಸಿಕೊಂಡ ಮೇಲೆಯೇ ಅಕ್ಕನ ವ್ಯಕ್ತಿತ್ವ ಒಳಗಿನ ತೇಜಸ್ಸು ಹೊಳೆಯುವುದು" ಹಾಗೆಯೇ ಆಧುನಿಕತೆಯ ದೃಷ್ಟಿಕೋನದಲ್ಲಿ ಏಕಾಗ್ರತೆ ಧೀರಾದ್ಭಾತ್ತತೆಯಲ್ಲಿಯೇ ಅಕ್ಕನಂತೆಯೇ ವಾಸ್ತವತೆಯಲ್ಲಿಯೂ ಆಧುನಿಕ ಮಹಿಳೆಯಲ್ಲಿಯೂ ಅಕ್ಕನ ಮಾದರಿಗುಣಗಳನ್ನು ಕಾಣಬಹುದು, ಹಾಗೆಯೇ "ಅದಮ್ಯವಾದ ಕಾಮವನ್ನು ಅಕ್ಕಮಹಾದೇವಿ ಮಣಿಸುವುದು ತನ್ನ ಈ ಧೀರೋದ್ಧಾತ್ತವಾದ ಸತತ ಪ್ರಯತ್ನದ ಮೂಲಕವೇ. ಆಯ್ಕೆಯ ಬದುಕಿಗಾಗಿ ಹಂಬಲಿಸಿದ

ಅನೇಕರಿದ್ದಾರೆ ನಮ್ಮಲ್ಲಿ ಸೀತೆ, ಮಹಾಶ್ವೇತೆ, ಗೌರಿ ಇವರೆಲ್ಲರೂ ಗಂಡಿನೊಂದಿಗಿನ ಅದ್ವೈತಕ್ಕಾಗಿ ಸ್ವಯಂಪೂರ್ಣವೆನ್ನಬಹುದಾದ ಒಲುಮೆಗಾಗಿ ಹಂಬಲಿಸಿದವರೇ ಹಾಗಾಗಿ ಇವರೆಲ್ಲರ ಲೌಕಿಕ ರೂಪವಾಗಿ ಅಕ್ಕ ಕಾಣಿಸುತ್ತಾಳೆ".[4]

ಎಂ.ಎಸ್. ಆಶಾದೇವಿಯವರು "ಜಿ.ಎಸ್.ಶಿವರುದ್ರಪ್ಪರ ಕಾವ್ಯಾಂತರಾಳ ಕೃತಿಯಲ್ಲಿನ ಜಿ.ಎಸ್. ಶಿವರುದ್ರಪ್ಪರವರ "ದಾಟಿ ಬಾ ನಿರ್ಭಯದ ನಿಲುವಿಗೆ" ಕವಿತೆಯಲ್ಲಿ ಹೆಣ್ಣನ್ನು ಕುರಿತಂತೆ ಆರ್ಷೇಯ ದೃಷ್ಟಿಕೋನದವರು ಎಂದಿದ್ದಾರೆ. ಹಾಗೆಯೇ ಹೆಣ್ಣಿನ ಬಗೆಗಿನ ಗೌರವ, ಪ್ರೀತಿ, ಮಮತೆಗೆ, ವಾತ್ಸಲ್ಯಕ್ಕೆ ನಾವು ಹಿಂದಿನಿಂದಲೂ ಗೌರವವನ್ನು ಕೊಟ್ಟಿರುವುದು ಒಂದರ್ಥದಲ್ಲಿ ಕಡಿಮೆ ಎನಿಸಿದರೂ ವಾಸ್ತವದಲ್ಲಿ ಈ ಆಧುನಿಕ ಮಹಿಳೆಯರ ಅದರಲ್ಲೂ ಸಾಧಿತ ಮಹಿಳೆಯರಿಗೆ ಗೌರವ ಪೂರ್ವಕವಾಗಿಯೇ ನಮ್ಮ ಸಮಾಜ ಮನ್ನಿಸಿದೆ. ಜೊತೆಗೆ ಹಿಂಸೆಗೆ ಒಳಗಾದ ಸ್ತ್ರೀ ಕುಲಕ್ಕೂ ಉನ್ನತ ಮಟ್ಟದಲ್ಲೂ ಗೌರವ ಪೂರ್ವಕವಾಗಿ ಕಾಣಲು ಸಾಹಿತ್ಯ, ಮಾಧ್ಯಮಗಳು ಇತ್ಯಾದಿಗಳಲ್ಲೂ ಶ್ರಮವಹಿಸಿ ದುಡಿಯುತ್ತಿರುವ ರಂಗವನ್ನೂ ನಾವು ಕಾಣಬಹುದು.

ಕುವೆಂಪುರವರ ಶ್ರೀ ರಾಮಾಯಣ ದರ್ಶನಂದಲ್ಲಿ ಸೀತೆಯನ್ನು ಉನ್ನತ ನೆಲೆಗೆ ಕೊಂಡೊಯ್ದು ಮೂಲ ರಾಮಾಯಣದಲ್ಲಿ ಮುಖ್ಯವಾಹಿನಿಗೆ ಮುಖ್ಯ ಪಾತ್ರಗಳಲ್ಲದ ಸ್ತ್ರೀ ಪಾತ್ರಗಳನ್ನೂ ಸಹ ಕುವೆಂಪುರವರು ಉನ್ನತೀಕರಿಸಿರುವರು.

ಮಂಥರೆ ಇತ್ಯಾದಿ ಅಂಶಗಳನ್ನೆ ಗಮನಿಸಿದರೆ ನಾವು ಮನಗಾಣಬಹುದು.

ಅದರಲ್ಲೂ 'ದಾಟಿ ಬಾ ನಿರ್ಭಯದ ನಿಲುವಿಗೆ' ಎಂಬ ಜಿ.ಎಸ್. ಶಿವರುದ್ರಪ್ಪರವರ ಕವಿತೆಯಲ್ಲಿ ಹೆಣ್ಣಿನ ಬಗೆಗೆ ಗೌರವ, ಪ್ರೀತಿ ಇವೆಲ್ಲವೂ ಅಪ್ರಜ್ಞಾಪೂರ್ವಕವಾಗಿಯೇ ಸಾಧ್ಯವಾದ ಕವಿ ಇವರು. ಪ್ರಸ್ತುತ ಈ ಕವನ ಜಿ.ಎಸ್. ಶಿವರುದ್ರಪ್ಪ ಅವರ ಇದಕ್ಕಿಂತ ವಿಭಿನ್ನವಾದ ಸ್ತ್ರೀ ದೃಷ್ಟಿಕೋನವನ್ನು ಪ್ರತಿಪಾದಿಸುವ ಕವಿತೆ. ಆಯ್ಕೆಯ ಬದುಕು ಎನ್ನುವುದು ಹೆಣ್ಣಿನ ಸಹಜ ನೆಲೆಯಾಗಬೇಕು ಎನ್ನುವುದನ್ನು ಪ್ರಶ್ನಿಸಲಾಗದ ಪ್ರಾಮಾಣಿಕತೆಯಲ್ಲಿ ಈ ಕವನ ಹೇಳುತ್ತದೆ. ಕಾಲಾತೀತ ಎನ್ನುವಂತೆ ಹೆಣ್ಣು ಅನುಭವಿಸುತ್ತಾ ಬಂದಿರುವ ಭಯದ, ಅಧೀನ ಬದುಕನ್ನು ಹೆಣ್ಣು ಇನ್ನಾದರೂ ಧಿಕ್ಕರಿಸಿ ಹೊರಬರಬೇಕೆನ್ನುವ ಆಶಯ ಈ ಕವನದ್ದು.

> 'ಹೊಸ ತಿಳಿವಿನೆಚ್ಚರದಲ್ಲಿ ಲೋಕ ಸಾಗಿದೆ
> ಮಗಳೆ, ದಾಟಿ ಬಾ ಮಹದೇವಿಯಕ್ಕನ ಹಾಗೆ
> ನಿರ್ಭಯದ ನಿಲುವಿಗೆ. ಆತ್ಮ ಗೌರವದ ಗಿರಿಶಿಖರ
> ದೆತ್ತರದಲ್ಲೂ ಅರಳಿಕೊಳಲ್ಲಿ ಬದುಕು ಹೊಸ ಬೆಳಕಿಗೆ'

ಎನ್ನುವಂತೆ ಹೊಸ ತಿಳಿವಿನ ಎಚ್ಚರಿಕೆಯಲ್ಲಿಯೇ ಲೋಕ ಸಾಗಿದೆ. ಎನ್ನುವಲ್ಲಿಯೇ ಹೆಣ್ಣಿನಲ್ಲಿ ಹೊಸ ಪರಿಕಲ್ಪನೆಯನ್ನ ಮೂಡಿಸುವಲ್ಲಿ ಜಿ.ಎಸ್. ಶಿವರುದ್ರಪ್ಪರವರ ಈ ಕವನ ಸಾಗಿದ್ದು 12ನೇ ಶತಮಾನದ ವಚನ ಸಾಹಿತ್ಯದಲ್ಲಿ ಅಕ್ಕ ತನ್ನ ಕೌಶಿಕನನ್ನು ದಿಕ್ಕರಿಸಿ ಹೊರಟಂತೆ ನಿರ್ಭಯದ ನಿಲುವಿಗೆ ಮಹದೇವಿಯಕ್ಕನ ಹಾಗೆಯೇ ಇಂದಿನ ಪ್ರಸ್ತುತದಲ್ಲೂ ಆಯ್ಕೆಯ ಬದುಕು ಎನ್ನುವುದು ಹೆಣ್ಣಿನ ಸಹಜ ನೆಲೆಯಾಗಬೇಕೆಂಬುದನ್ನು ಪ್ರಶ್ನಿಸುತ್ತಿಲ್ಲ ಆಧುನಿಕತೆಯಲ್ಲಿನ ನೆಲೆಗಟ್ಟಿನಲ್ಲೂ ಪ್ರಾಚೀನತೆಗೆ ಹೋಲಿಸಿಕೊಂಡಲ್ಲಿ ಹೊಸ ಬದುಕಿನ ಬದಲಾವಣೆಯನ್ನು ಇಂದಿನ ವಾಸ್ತವ ಸಂದರ್ಭದಲ್ಲಿ ಕಾಣಬಹುದು.

ಅಂತೆಯೇ

'ಅಗ್ನಿ ಪರೀಕ್ಷೆ ಸೀತೆಗೆ ಮಾತ್ರ, ಶ್ರೀರಾಮ
ನಾದರೋ ಅಕಳಂಕ ಪ್ರಶ್ನಾತೀತ!
ಚಂದ್ರಮತಿ ಹರಾಜಿಗೆ, ದ್ರೌಪದಿ ಜೂಜಿಗೆ
ವಸ್ತುವಾಗುಳಿದದ್ದು ಎಂಥ ವಿಪರೀತ'

ಹೆಣ್ಣಿನ ಬದುಕಿನ ದಾರಿಯುದ್ದಕ್ಕೂ ವನವಾಸ, ಅಗ್ನಿಪರೀಕ್ಷೆ ಎನ್ನುವುದು ತ್ರೇತಾಯುಗದ ಸೀತೆಗೆ ಮಾತ್ರವಲ್ಲ, ಎಲ್ಲ ಕಾಲದ ಹೆಣ್ಣುಮಕ್ಕಳ ಮಟ್ಟಿಗೂ ನಿಜ, ವನವಾಸದ ಅಗ್ನಿಪರೀಕ್ಷೆಯ ಅನೇಕ ರೂಪಗಳನ್ನು, ಮಾದರಿಗಳನ್ನು ಈ ಸಮುದಾಯ ಕಟ್ಟುತ್ತಲೇ ಇರುತ್ತದೆ ಎನ್ನುವುದು "ದಾರಿಯುದ್ದಕ್ಕೂ" ಎನ್ನುವ ಮಾತು ಅರ್ಥಪೂರ್ಣವಾಗಿ ಧ್ವನಿಸುತ್ತದೆ. ಯಾಕೆಂದರೆ ಮನುವಿನ ಮಾತು ಬದಲಾದ ಈ ಕಾಲದಲ್ಲಿಯೂ ಸಂಪೂರ್ಣ ಅಪ್ರಸ್ತುತವೇನಲ್ಲ! ಎಂದು ಎಂ. ಎಸ್. ಆಶಾದೇವಿಯವರು ಜಿ.ಎಸ್. ಶಿವರುದ್ರಪ್ಪರವರ ಕಾವ್ಯಾಂತರಾಳದಲ್ಲಿ ಉಲ್ಲೇಖಿಸಿದ್ದಾರೆ.......

ಹೆಣ್ಣು ನಿಕೃಷ್ಟತೆಗೆ ಹೇಗೆ ಒಳಗಾಗಿದ್ದಳೆಂಬುದಕ್ಕೆ ತೀರ ಅಸಾಮಾನ್ಯತೆಗೆ ಒಳಗಾಗಿರುವುದಕ್ಕೆ ಜಿ.ಎಸ್. ಶಿವರುದ್ರಪ್ಪರವರ ಈ ಕವಿತೆ ನಿದರ್ಶನ..

'ಹೇಳುತ್ತದೆ ಖುರಾನ್: ಹೆಣ್ಣೊಂದು ಬರಿಯ ಹೊಲ
ನಿನ್ನ ಸ್ವತ್ತು: ಮೂರು ಸಲ ತಲಾಕ್ ಎಂದರೆ ಸಾಕು
ಸ್ತ್ರೀ ಶೂದ್ರಾದಿಗಳಿಗೆಲ್ಲಿಯದೊ ವೇದಾದಿಕಾರ?
ಇಂಥ ದಯವಿರದ ಧರ್ಮಗಳ ಆಚೆ ನೂಕು'.

ಪುರುಷನ ಮನಸ್ಸಿನ ಮುಂದಿನ ಆಸೆಗಳಿಗೆಲ್ಲ ಒಂದೇ ಹೆಸರು..... ಈ ವಿಚಾರದಲ್ಲಿ ಎಲ್ಲ ಧರ್ಮಗಳೂ ಕೂಡ ಒಂದೇ. ಮಾನವೀಯತೆ ಮುಟ್ಟಬಹುದಾದ ಆಳ, ವಿಸ್ತಾರ, ಸೂಕ್ಷ್ಮಗಳನ್ನೆಲ್ಲ

ಸಾಧಿಸಿದ ಬುದ್ಧನಿಗೂ ಹೆಣ್ಣು ತನ್ನ ಸಂಗಾತ ಸೇರುವುದು ಬೇಡವೆನಿಸುವ ಹಾಗೆ ಖುರಾನಿಗೆ ಹೆಣ್ಣು ಕ್ಷೇತ್ರ ಮಾತ್ರ ಬೇಡವಾದ ಹೆಣ್ಣನ್ನು ಕಳೆದುಕೊಳ್ಳುವುದಕ್ಕೆ ಪದವೊಂದನ್ನು ಮೂರು 'ತಲಾಕ್' ಎಂದು ಉಚ್ಚರಿಸಿದರೆ ಸಾಕು ಹೀಗೆ ಹೆಣ್ಣು ನಿರಾಕರಣೆಗೆ ಒಳಗೊಳ್ಳುವ ಸೂಕ್ಷ್ಮಗಳನ್ನೆಲ್ಲ ಆಧುನಿಕತೆಯ ಹೋಲಿಕೆಯೊಂದಿಗೆ 12ನೇ ಶತಮಾನದ ವಚನಕಾರ್ತಿ ಅಕ್ಕಮಹಾದೇವಿಯ ದೀರೋದ್ಧೋತತೆಯೊಂದಿಗೆ ಹೆಣ್ಣು ಧರ್ಮಗಳ ಹಂಗು, ಭಯವನ್ನು ಮೀರಬೇಕು.

"ಕವನದಲ್ಲಿ ಪುನರುಕ್ತವಾಗುವ ಮಗಳೇ ಸಂಭೋದನೆ ಕವನಕ್ಕೆ ಆಪ್ತತೆಯ ಭಾವವನ್ನು ಕೊಡುತ್ತದೆ. ಬೌದ್ಧಿಕ ಆಶಯವಾಗಿಯೋ, ಘೋಷಣೆಯೋ ಆಗಿ ಕೃತಕವಾಗಿ ಬಿಡಬಹುದಾದ ಮಿತಿಯನ್ನು ಕವನ ದಾಟುವುದು ಈ ಸಂಭೋದನೆಯ ಮೂಲಕ. ಹೆಣ್ಣಿನ ಸ್ಥಿತಿ ಗತಿಯಲ್ಲಾಗಬೇಕಾದ ಸ್ವತಃ ಹೆಣ್ಣಿನ ಮನೋವಿನ್ಯಾಸದಲ್ಲೇ ಆಗಬೇಕಾದ ಬದಲಾವಣೆಯ ಬಗ್ಗೆ ಕವಿಗಿರುವ ಅಪಾರ ಕಾಳಜಿ, ಪ್ರಾಮಾಣಿಕತೆ ಈ ಕವನದಲ್ಲಿ ತುಂಬ ಸಹಜವಾಗಿ ಮೂಡಿ ಬಂದಿದೆ".[5]

ಅಂತೆಯೇ 'ಜಿ.ಎಸ್. ಶಿವರುದ್ರಪ್ಪ ಅವರ 'ಶಕುಂತಲೆಯ ಪರಿವೇಶದ ಪೂಜೆ' ಕವಿತೆಯಲ್ಲಿ ಸಹ ಶಕುಂತಲೆಗೆ ದೊರೆತ ದುರ್ವಾಸರ ಶಾಪ ಶಕುಂತಲೆಯ ಗೆಳತಿಯರಾದ ಪ್ರಿಯಂವದೆ – ಅನುಸೂಯರಿಗೆ (ಶಾಕುಂತಲೆಯ ತಾರೆಯರು) ಶಾಪದ ವಿಚಾರ ಗೊತ್ತಿದ್ದೂ ಬಿಡಲಾಗದ ಅಸಾಹಯಕ ಸ್ಥಿತಿ ಅವರದು. ಅದಕ್ಕಾಗಿ ಅವರ ಒದ್ದೆಯ ಕಣ್ಣುಗಳಲ್ಲಿ ನೀರವತೆಯ ಮೌನ ಮಾಡುಗಟ್ಟಿರುವುದೂ ಕೂಡ ಹೆಣ್ಣಿನ ಅಸಾಹಾಯಕತೆಯನ್ನು ಸೂಕ್ಷ್ಮವಾಗಿ ದಾಖಲಿಸಿರುವುದನ್ನು ನಾವು ಗಮನಿಸಬಹುದು ಅಂತೆಯೇ' ಶ್ರೀ ರಾಮಭಟ್ಟರ" 'ಅನಿಸಿಕೆಯಂತೆಯೇ ಜಿ.ಎಸ್. ಶಿವರುದ್ರಪ್ಪ ನವರ ಈ ಕೆಳಗಿನ ಕವಿತೆಯಾದ...

'ಅಸಾಹಯಕ ತಾರೆ ಬಳಗ
ಹನಿಗಣ್ಣೊಳು ನೀರವ
ಸುಯ್ವುಗಾಳಿ ತಡೆಯುತಿಹುದು
ಉಕ್ಕಿ ಬರುವ ದುಃಖವ..'

ಎನ್ನುವಲ್ಲಿ "ಈ ಕವಿತೆ ವಿಷಾದವನ್ನು ಮಡಗಟ್ಟಿಸಿಕೊಂಡಿದ್ದರೂ, ಇಲ್ಲಿಯ ವಿಷಾದ ಹನನಾತ್ಮಕವಾದದ್ದಲ್ಲ. ಅದಕ್ಕಾಗಿಯೇ ಶೋಕಕ್ಕೇರುವುದಿಲ್ಲ. ಆಶೆಯ ಕಿರಣವನ್ನು ಭಾರವಸೆಯ ಬೆಳಕನ್ನೂ ಎದೊಯೊಳಗೆ ಬೆಚ್ಚಗೆ ಇಟ್ಟುಕೊಂಡಿದೆ ಚಂದ್ರ ಮರೆಯಾದರೂ ಮುಂದೆ ಮತ್ತೆ ಮೂಡುವವನು. ಕತ್ತಲಲ್ಲಿ ಮರೆಯಾದುದನ್ನು ತಂಗಿರಣ ಚೆಲ್ಲಿ ಮೆರೆಸಿ ತೋರುವವನು. ವಿಸ್ಮೃತಿ ಮನುಕುಲಕ್ಕೆ ತಗುಲಿದ ಶಾಪದ ಕತ್ತಲು, ಅದು ಸ್ಥಾಯಿಯಲ್ಲ ಮತ್ತೆ ಸ್ಮೃತಿ ಅದು ನೀಡುವ ಜೀವನಾಹ್ಲಾದ – ಆಶಾವಾದ "ಸುಯ್ವುಗಾಳಿ"ಯಿಂದ ಸೂಚಿತವಾಗಿದೆ ಇಲ್ಲಿ ಬಳಸುವ ಉಪಮೇಯ

ಪರಿಕರಗಳೂ ಅದನ್ನೇ ಸಮರ್ಥಿಸಿವೆ. ಆಕಾರ ವರ್ಣಗಳಿಂದ ಚಂದ್ರನನ್ನು ಹೋಲುವ ಉಂಗುರ ಯೂವುದೋ ಉಂಗುರವಲ್ಲ ಶಕುಂತಲೆಯ ಉಂಗುರ. ಆಕಾಶದಲ್ಲಿ ಮುಳುಗಿ ಹೋದರೂ ಮೀನಿನ ಮೂಲಕ ಮತ್ತೆ ಮೇಲೆದ್ದು ಬಂದ ಉಂಗುರ. ದುರ್ವಾಸದತ್ತ ವಿಸ್ಮೃತಿ ಶಾಪದ ಕತ್ತಲನ್ನು ಮೀರಿ ಸ್ಮೃತಿ ಪ್ರಕಾಶಕ್ಕೆ ಆಣೆಯಾದ ಉಂಗುರ. ವಿಷಾದ ಕಳೆದು ಮುಂದೆ ಗಬುಕಿನ ಸಂತಸದ ಬೆಳಕನ್ನು ಪಡೆಯಲಿರುವ ಶಕುಂತಲೆಯ ಪರಿವೇಶ ಈ ಕವಿತೆಯನ್ನಾಧರಿಸಿದೆ".

ಶಕುಂತಲೆ ಇಲ್ಲಿ ದುರಂತ ವಸ್ತು ವಿನ್ಯಾಸವಾಗದೆ ಭರವಸೆಯ ಬಿಂಬವಾಗಿದೆ ಎಂದು ಶ್ರೀ ರಾಮಭಟ್ಟರವರ ಅಭಿಪ್ರಾಯ ಅಂತೆಯೇ ಶಕುಂತಲೆಯನ್ನು ಹಾಗೆ ಶಕುಂತಲೆಗೆ ಅನಿವಾರ್ಯವಾಗಿ ದುರ್ವಾಸರು ಕೊಟ್ಟ ಶಾಪ ಅದನ್ನು ತಿಳಿದಿರುವ ತನ್ನ ತಾರೆಯರೂ ಕೂಡ ಅವಿಚಾರವಾಗಿ ಮೌನದಲ್ಲಿರುವುದು ಹೆಣ್ಣಿನ ಅಸಹಾಯಕತೆಯ ದ್ಯೋತಕವೆಂದೇ ಬಿಂಬಿಸಬಹುದು.

ಹಾಗೆಯೇ ಹೆಣ್ಣಿಗೆ ಹೆಣ್ಣೇ ಆಸರೆಯೆಂಬಂತೆ ಬಿಂಬಿತವಾಗಿರುವ ಆಧುನಿಕತೆಯ ದ್ಯೋತಕದ ಕವಿತೆಯಾದ

'ತಾಯ್ತನದ ಕರುಳು ಚುರ್ರೆಂದಿರಬೇಕು ಮೇನಕೆಗೆ
ಕಂಗೆಟ್ಟ ಹುಡುಗಿಗೊಂದಿಷ್ಟು ಆಸರೆ.
ಆಸೆ, ಬದುಕು, ಕನಸುಗಳ ದಹಿಸಿಯೇ ಬಂದ
"ಸರ್ವಧಮನ!"

ಎನ್ನುವಲ್ಲಿ ತಾಯಿಯಾದ ಮೇನಕೆಗೆ ಹೆತ್ತ ಸಂಕಟದಲ್ಲಿಯೇ ಮರುಕ ಪಡುವ ಮೇನಕೆ ತತ್ತ ಮಗಳ ಬಗ್ಗೆ ಆಸರೆಯ ರೂಪದ ಮರುಕ.... ಹಾಗೆಯೇ ಆಸೆ, ಬದುಕು, ಕನಸುಗಳ ಹಿಂದೆಯೆ ಆ ಎಲ್ಲಾವನ್ನೂ ದಹಿಸಿಯೇ ಬಂದಾತ 'ಸರ್ವದಮನ'.. ಎನ್ನುವಲ್ಲಿ ತಾಯಿಯೇ ಮಗಳ ಬಗ್ಗೆ ವ್ಯಕ್ತ ಪಡಿಸುವ ಕನಿಕರ ವ್ಯಕ್ತವಾಗಿದೆ.

ಈ ಕವಿತೆಯ ದೃಷ್ಟಿಕೋನದಲ್ಲಿ ಹೆಣ್ಣಿನ ಮನಸ್ಸಿನ ಮೃದುತ್ವ, ಆತಂಕ, ಆತ್ಮ ವಿಶ್ವಾಸ ಎಲ್ಲವನ್ನು ನವುರಾದ ರೀತಿಯಲ್ಲಿಯೇ, "ಶಕುಂತಲೋಪಾಖ್ಯಾನ ಕವಿತೆಯಲ್ಲಿ ಎಂ.ಆರ್. ಕಮಲ ಅವರು ಸ್ತ್ರೀ ಸಂವೇದನೆಯ ಅಪರೂಪದ ಕವಿತೆ ಶಕುಂತಲೋಪಾಖ್ಯಾನ. ನಾಲ್ಕು ಗೋಡೆಗಳ ಮಧ್ಯೆ ಬಂಧಿಸಲ್ಪಟ್ಟಿದ್ದ ಮಹಿಳೆ ಅಕ್ಷರಕ್ಕೆ ಒಗ್ಗಿಕೊಂಡಾಗ, ತಮ್ಮ ಮೇಲೆ ಆಗುತ್ತಿದ್ದ ಹಿಂಸೆ ಮತ್ತು ದೌರ್ಜನ್ಯಗಳನ್ನು ಅಕ್ಷರಗಳ ಮೂಲಕವೇ ಹಿಡಿಯಲ್ಪಟ್ಟಳು. ಈ ಸಂವೇದನೆಗೆ ಮೊದಲು ಗುರಿಯಾದದ್ದು ಮಾತ್ರ ಪುರಾಣಗಳು– ಪುರಾಣಗಳಲ್ಲಿನ ಮಹಿಳಾ ಪಾತ್ರಗಳು, ಈ ಕವಿತೆಯಲ್ಲಿ ಕಣ್ವ ಮಹರ್ಷಿಯ ಸಾಕುಮಗಳು ಶಕುಂತಲೆಯ ಬದುಕಿನ ಚಿತ್ರಣವಿದೆ ಶಕುಂತಳೆಯ ಬದುಕನ್ನು

ಇಟ್ಟುಕೊಂಡು ಆಧುನಿಕ ಮಹಿಳೆ ಮಾತನಾಡುವಂತೆ, ಪ್ರಶ್ನಿಸುವಂತೆ, ವಿವರಿಸುವಂತೆ ಇವರ ಕವಿತೆಯಾದ

'ಅಪ್ಸರೆಯ ಮಗಳು,
ಕೂದಲೆಳೆಯಲ್ಲಿ, ಉಗುರ ತುದಿಯಲ್ಲೂ ಸೌಂದರ್ಯ!
ಆಶ್ರಮದ ತರುಲತೆಗೂ ಉಕ್ಕಿಬಂದ ಜೀವನ್ಮೋದ
ದುಮ್ಮಿಕ್ಕಿ ಹರಿವ ಎದೆಯೀಗ ಮಚ್ಚು ಹೊಳೆ'

ಎನ್ನುವ ರೀತಿಯಲ್ಲಿ ಆಧುನಿಕತೆಯೊಂದಿಗೆ ಸ್ತ್ರೀ ಸಂವೇದನೆ ವ್ಯಕ್ತವಾಗುವ ದಾಟಿಯಲ್ಲಿಯೇ ಪುರಾಣಗಳ ಹಿನ್ನೆಲೆಯಲ್ಲಿ ಆಧುನಿಕತೆಯ ಮಹಿಳೆ ಮಾತನಾಡುವಂತೆ, ಎಂ.ಆರ್. ಕಮಲ ಅವರ ದೃಷ್ಟಿಕೋನದಲ್ಲಿ ವ್ಯಕ್ತಿವಾಗಿರುವಂತೆ ಪುರಾಣ ಪ್ರತೀಕವಾಗಿರುವ ಶಕುಂತಲೆಯನ್ನು ಆಧುನಿಕತೆಯೊಂದಿಗೆ ಬೆಸೆಯಲಾಗಿದೆ.

ಅಂತೆಯೇ

'ಧಾವಿಸಿ ಬಂದ ದುಷ್ಯಂತ
ದುರ್ವಾಸನ ಶಾಪ, ಉಂಗುರದ ನೆಪ
ಒಡ್ಡಿ ನಿಂತವನ ನೋಡಿ ನಕ್ಕಳು
("ನೋವುಂಡೇ ನಕ್ಕ ನಗೆ ನಗೆಯಲ್ಲ")
ಚಿಗುರು ಬೆರಳಿಗೆ ಮತ್ತೆ ಉಂಗುರದ ಸಂಭ್ರಮ
ಹಿಮಗಟ್ಟಿದ್ದ ಹುಡುಗಿ – ಅಲ್ಲಲ್ಲಿ ಪ್ರೌಢ
ಥಣ್ಣಗೆ ನುಡಿದಳು'[7]

ಹಾಗೆಯೇ ಆಧುನಿಕತೆಯ ನೆಲೆಯೊಂಟಗೆ ಪುರಾಣದ ಅಂಶವನ್ನಾಧರಿಸಿ ವಿಶೇಷ ರೀತಿಯಲ್ಲಿ ಶಕುಂತಲೆಯನ್ನು ಚಿತ್ರಿಸಿರುವುದು ಕೂಡ ಪುರುಷ ಸಮಾಜದ ದ್ಯೋತಕತೆಗೆ ಹಿಡಿದ ಕನ್ನಡಿಯಾಗಿದೆ ನನಗೆ ಉಂಗುರದಲ್ಲಿ ನೆಚ್ಚಿಗೆಯಿಲ್ಲ ಆದರೆ ನೋವುಂಡು ನಕ್ಕ ನಗೆ ನಗೆಯಲ್ಲ ಎಂದು ಕವಿಯಿತ್ರಿ ಮಾರ್ಮಿಕವಾಗೂ ಚಿತ್ರಿಸಿದ್ದಾರೆ.

ಅಂತೆಯೇ ಸ್ತ್ರೀ–ಚಿತ್ರಲೋಕವನ್ನ ಅನಾವರಣಗೊಳಿಸುವ ಪ್ರಮುಖ ಕವಿತೆಯಲ್ಲಿ 'ಷಹಜಾದೆಗೆ' ಕವಿತೆಯು ಪ್ರಮುಖ ಕಪಿತೆಗಳಲ್ಲೊಂದು 'ಅರೇಬಿಯನ್ ನೈಟ್ಸ್' ಒಂದು ಸಾವಿರದ ರಾತ್ರಿಗಳು, ಜಗತ್ತಿನ ಅತ್ಯಂತ ಜನಪ್ರಿಯ ಕಥಾ ಸರಿತ್ಸಾಗರಗಳಲ್ಲಿ ಒಂದು, ಮಕ್ಕಳಿಗೆ ಹಾಗೆಯೇ ಹಿರಿಯರಿಗೂ ಪ್ರಿಯವಾದ ಕಥೆಗಳನ್ನೊಳಗೊಂಡ 'ಅಲಿಬಾಬ ಮತ್ತು ನಲವತ್ತು ಕಳ್ಳರು' 'ಅಲ್ಲಾವುದ್ದೀನ್

ಮತ್ತು ಅಧ್ಭಿತ ದೀಪ' 'ನಾವಿಕ ಸಿಂದಾಬಾದ್' ಮುಂತಾದ ಅನೇಕ ಅದ್ಭುತ ರಮ್ಯಕಥೆಗಳು ಇದರಲ್ಲಿದೆ. ಬಾಗ್ದಾದಿನ ದೊರೆ ಷಾರಾಯಾರ್ ತನ್ನ ನಂಬಿಕೆಗೆ ದ್ರೋಹ ಬಗೆದ ತನ್ನ ಜಾರಿಣಿ ಪತ್ನಿಯನ್ನು ಶೂಲಕ್ಕೇರಿಸಿ ಕೊಲ್ಲಿಸುತ್ತಾನೆ ಅದನ್ನ ವಿವರಿಸುವ ಕವಿತೆ

> **'ಸಾವಿರದೊಂದು ಕಾರಿರುಳನ್ನು ಕತೆ**
> **ಹೇಳುತ್ತಲೇ ಗೆದ್ದ ಷಹಜಾದೆ,**
> **ಹೇಳೆ, ಈ ರಾತ್ರಿಗೆಂದು ಕೊನೆ? ಯಾವ**
> **ಕತೆ ನಮ್ಮನ್ನೀಗ ಉಳಿಸಬಹುದೇ?'**

ಅಂತೆಯೇ ಸ್ತ್ರೀ ಪರಿಕಲ್ಪನೆಯನ್ನು ಕಟ್ಟಿಕೊಟ್ಟಿರುವ ಜಿ.ಎಸ್. ಶಿವರುದ್ರಪ್ಪ ಈ ಕವಿತೆಯ ಅಂತರಾಳದಲ್ಲಿಯೇ ಸ್ತ್ರೀಯ ಜಾಣ್ಮೆಯ ತಲ್ಲೀನತೆಯನ್ನು ಮೆರೆದಿದ್ದಾರೆ. ಅಂದರೆ ಬಾಗ್ದಾದಿನ ದೊರೆ ಷಾರಾಯಾರ್ ಜಾರಿಣಿಯ ನೆಪದಿಂದ ಇಡೀ ಸ್ತ್ರೀ ಕುಲವನ್ನೇ ದ್ವೇಷಿಸತೊಡಗುತ್ತಾನೆ. ದಿನಕ್ಕೊಬ್ಬಳನ್ನು ಮದುವೆಯಾಗಿ, ಮರುದಿನ ಅವಳಿಗೆ ಮರಣ ದಂಡನೆಯನ್ನು ವಿಧಿಸಿರುತ್ತಾನೆ. ಅವನ ಮಂತ್ರಿಯ ಮಗಳಾದ ಷಹಜಾದೆ ಈ 'ಸ್ತ್ರೀ ಹತ್ಯಾ' ಕಾಂಡವನ್ನು ಕೊನೆಗಾಣಿಸಲು ನಿರ್ಧರಿಸಿ ದೊರೆಯನ್ನು ತಾನೇ ವರಿಸುತ್ತಾಳೆ ಅಂದು ಆರಾತ್ರಿ ಷಹಜಾದೆ ದೊರೆಗೆ ಒಂದು ಸ್ವಾರಸ್ಯಕರ ಕಥೆ ಹೇಳಿ ಮರುದಿನ ಬೆಳಗಾದರೂ ಕಥೆ ಮುಗಿಯುವುದಿಲ್ಲ. ಕುತೂಹಲಕ ಘಟಕ್ಕೆ ಬಂದು ನಿಂತಿರುತ್ತದೆ ಆದ್ದರಿಂದ ದೊರೆ ಅವಳ ಮರಣದಂಡನೆಯನ್ನು ಮತ್ತೆ ಮತ್ತೆ ಮುಂದುವರೆಸುತ್ತಾ ಕೊನೆಗೆ ಹಾಗೆ ನಿರಂತರವಾಗಿ ಮುಂದುವರೆದು ಅವಳ ಮರಣ ದಂಡೆಯನ್ನು ಮುಂದುವರೆಸುವುದು ಕೊನೆಗೆ ಷಹಜಾದೆಯ ಮರಣದಂಡೆಯನ್ನು ರದ್ದುಗೊಳಿಸಿ ಅವಳನ್ನೆ ಪಟ್ಟದರಸಿಯನ್ನಾಗಿ ಸ್ವೀಕರಿಸಿ ನೆಮ್ಮದಿಯಿಂದ ಬಾಳುವುದು ವಿಶೇಷವಾಗುವುದು ಅಂದರೆ ಜಾಣ್ಮೆ ಬದುಕಿನಲ್ಲಿ ಕೇವಲ ಪುರುಷನಲ್ಲಿ ಅಲ್ಲದೆ ಸ್ತ್ರೀಯೂ ಅರ್ಹಳೆನ್ನುವ ಪರಿಕಲ್ಪನೆಯನ್ನು ಮೂಡಿಸುವಲ್ಲಿ ಕವಿತೆಯ ನೆಲೆಯೊಂದಿಗೆ ತನ್ನ ನಿಲುವನ್ನ ಸ್ಪಷ್ಟಪಡಿಸುತ್ತಾರೆ. "ಈ ರಾತ್ರಿಗೊಂದು ಕೊನೆ? ಯಾವ ಕಥನ ನಮ್ಮನ್ನಿಗ ಉಳಿಸಬಹುದೇ? ಕ್ರೌರ್ಯ, ಹಿಂಸೆ, ಸ್ವಾರ್ಥ ಹಾಗೂ ಭ್ರಷ್ಟತೆ ತಾಂಡವವಾಡುತ್ತಿರುವ ವಿಷಮ ಪರಿಸ್ಥಿತಿಯಲ್ಲಿ ಸಾಹಿತ್ಯದ ಅಗತ್ಯ ಹಾಗೂ ಪರಿಣಾಮದ ಬಗ್ಗೆ ಈ ಕವಿತೆ ಚಿಂತಿಸುತ್ತದೆ".[8]

ಅಂತೆಯೇ ಸ್ತ್ರೀ ಮತ್ತು ಪ್ರಕೃತಿಯ ಸಂಬಂಧವನ್ನು ಸಮೀಕರಿಸುತ್ತಾ ಎರಡೂ ಹೇಗೆ ನಿಷ್ಕಲ್ಮಶವಾಗಿ ಕೇವಲ ಪ್ರೀತಿಯನ್ನಷ್ಟೇ ನೀಡುವ ಪ್ರತೀಕವಾಗಿದೆ ಎಂಬುದನ್ನು ಈ ಕವಿತೆಯಲ್ಲಿ ವಿಸ್ಮಯಗೊಳಿಸುತ್ತಾರೆ. ಸೃಷ್ಟಿಯ ಸಾತತ್ಯವನ್ನು ಕಾಪಾಡುತ್ತ ಬರುತ್ತಿರುವ ಎರಡು ಪ್ರತಿಮೆಗಳೂ ಬೇರೆ ಬೇರೆಯಲ್ಲ

"ಆಕಾಶದ ನೀಲಿಯಲ್ಲಿ
ಚಂದ್ರ - ತಾರೆ ತೊಟ್ಟಿಲಲ್ಲಿ
ಬೆಳಕನಿಟ್ಟು ತೂಗಿದಾಕೆ"

'ಆಕಾಶದ ನೀಲಿಯಲಿ ಚಂದ್ರ-ತಾರೆ ತೊಟ್ಟಿಲಿನಲ್ಲಿ ಬೆಳಕನ್ನಿಟ್ಟು ತೂಗುವ, ಬೆಟ್ಟದಿಂದ ಬಯಲಿಗೆ ಜೀವರಸವನ್ನು ಹೊಮ್ಮಿಸಿ ಹಸಿರು ಮೂಡಿಸುವ, ಮರ, ಗಿಡ, ಹೂಗಳಿಗೆ ತಂಗಾಳಿಯ ಬೆರಳ ಸವರಿ, ಹಕ್ಕಿಗಳ ಗಿಲಕಿ ಹಿಡಿವ ವಾತ್ಸಲಮಯಿ ಪ್ರಕೃತಿ ಮತ್ತು ಮನೆ ಮನೆಗಳಲ್ಲಿ ತಂದೆ-ಮಗುವಿಗೆ ಆಧಾರವಾಗಿ, ಮಮತೆಯೂಡುವ ಹೆಣ್ಣು ಮಗಳು ಈ ಇಬ್ಬರಲಿ ಯಾವ ವ್ಯತ್ಯಾಸವೂ ಇಲ್ಲ. ಜೀವ ಪೋಷಕ ಶಕ್ತಿಗಳಾಗಿ ಸೃಷ್ಟಿಯ ನಿರಂತರತೆಯನ್ನು ಅತ್ಯಂತ ಪ್ರೀತಿ ಪೂರ್ಣವಾಗಿ ಕಾದುಕೊಂಡು ಬಂದವರು! ಇಂತಹ ಹೆಣ್ಣು ಮಗಳಿಗೆ ಸ್ತ್ರೀ ಅಂದರೆ ಅಷ್ಟೇ ಸಾಕೆ? ಎಂದು ಪ್ರಶ್ನಿಸುವ ಮೂಲಕ ಕವಿ ಹೆಣ್ಣಿನ ಅಸಮಾನ್ಯತೆಯನ್ನು ಹೇಳುತ್ತಾರೆ", ಹೆಣ್ಣು ಸಾಮಾನ್ಯಳಲ್ಲ ಅಸಾಮಾನ್ಯಳು ಎಂಬುದನ್ನು ಕವಿತೆ ಸಾರಿ ಹೇಳುತ್ತದೆ'.[9]

ಟಿಪ್ಪಣಿಗಳು

1. ಕವನ: "ತಾಯಿಗೆ" ಸಾಮಗಾನ 1951
2. ಜಿ.ಎಸ್. ಶಿವರುದ್ರಪ್ಪ / ಕಾವ್ಯಾಂತರಾಳ, ಸಂಪಾದಕರು ಉಷಾ
3. ಕೆ.ವೈ. ನಾರಾಯಣ ಸ್ವಾಮಿ, ಕಾವ್ಯಾಂತರಾಳದ 'ಸಿಂಡರೆಲಾ' ಕವಿತೆ
4. ಎಂ.ಎಸ್. ಆಶಾದೇವಿ, ಅಮೃತ ಮುಹೂರ್ತ (ಕಾವ್ಯಾಂತರಾಳ)
5. ಎಂ.ಎಸ್. ಆಶಾದೇವಿ, ಜಿ.ಎಸ್. ಶಿವರುದ್ರಪ್ಪ ಕಾವ್ಯಾಂತರಾಳ, ಪುಟ-54
6. ಜಿ.ಎಸ್. ಶಿವರುದ್ರಪ್ಪ / 'ಶಕುಂತಲೆಯ ಪರಿವೇಶದ ಪೂಜೆ'
7. ನನಗೆ ಈ ಉಂಗುರದಲ್ಲಿ ನೆಚ್ಚಿಗೆಯಿಲ್ಲ
8. ಬಿ.ಆರ್. ಲಕ್ಷ್ಮಣರಾವ್, ಜಿ.ಎಸ್. ಶಿವರುದ್ರಪ್ಪ / ಕಾವ್ಯಾಂತರಾಳ, ಪುಟ 109
9. ಎಂ.ಆರ್. ಕಮಲ / ಸ್ತ್ರೀ - ಕವಿತೆ, ಜಿ.ಎಸ್. ಶಿವರುದ್ರಪ್ಪ - ಕಾವ್ಯಾಂತರಾಳ, ಪುಟ-119

ಉಪಸಂಹಾರ

ಕವಿತೆ ಎಂದೊಡನೆ – ಲೌಕಿಕತೆಯ ಅನುಭವವು ಅನುಭಾವತೆಯೊಂದಿಗೆ ಮಿಳಿತಗೊಂಡು ಅನುಭಾವ ವಿಶೇಷ ದರ್ಶನ ಬಲು ಅಪರೂಪ. ಕಾಂತಾ ಸಮ್ಮಿತದಂತೆ ಬಲು ಅಪರೂಪ ಅಂತೆಯೇ ರಾಷ್ಟ್ರಕವಿ, ಜಿ.ಎಸ್. ಶಿವರುದ್ರಪ್ಪ ಅವರ ಕವಿತೆಯಲ್ಲಿ ಅನುಭವ ವಿಶೇಷವೂ ಇದೆ ಅನುಭಾವ ವಿಶೇಷತೆಯೂ ಇದೆ ಅವರೇ ತಮ್ಮ 'ಕಾವ್ಯಾರ್ಥ ಚಿಂತನ'ದಲ್ಲಿ ಹೇಳಿರುವಂತೆ ಬುದ್ಧಿಯ ಮೂಲಕ ಲೋಕ ವಿಷಯಗಳನ್ನು ಗ್ರಹಿಸಿ, ವಿಶ್ಲೇಷಿಸಿ, ತರ್ಕಬದ್ಧವಾಗಿ ನಿರೂಪಿಸುವ ಕ್ರಮ ಶಾಸ್ತ್ರವೆನಿಸಿದೆ ಭಾವದ ಮೂಲಕ ಗ್ರಹಿಸಿ ಅಭಿವ್ಯಕ್ತಿಸುವ ವಿಶೇಷ ಕ್ರಮ ಕಾವ್ಯವೆನಿಸುತ್ತದೆ. ಇನ್ನೂ ವಿಶೇಷತೆ ಎಂದರೆ ಭಾವದ ಜೊತೆಗೆ ಅನುಭಾವದ ಶೃತಿ ಅಂತರ್‌ಗಾಮಿಯಾಗಿ ಮಿಡಿಯುವುದನ್ನು ಮನಗಾಣಬಹುದಾಗಿದೆ.

ಅಂತೆಯೇ ಮನುಷ್ಯತ್ವವನ್ನು ಕಾವ್ಯದ ಚಲನಶೀಲತೆಯೊಂದಿಗೆ ಅಥವಾ ಚಲನಶೀಲತೆಯ ಆಶಯದೊಂದಿಗೆ ಸಮನ್ವಯತೆಯನ್ನು ಸಾಧಿಸಿಕೊಂಡವರಲ್ಲಿ ಜಿ.ಎಸ್. ಶಿವರುದ್ರಪ್ಪ ಪ್ರಮುಖರು ಇವರ ಕಾವ್ಯಪ್ರೀತಿ, ಮಾನವೀಯ ಗುಣದ ನೆಲೆಗಳು ಎಲ್ಲಾ ಕಾಲದಲ್ಲೂ ಸಮನ್ವಯ ಗುಣಗಳನ್ನು ಸಾರುವಂತಹವು ಇವರು ನವ್ಯತೆಯ ಬಗ್ಗೆ ಆಶ್ಚರ್ಯ ಪಡದಿದ್ದರೂ ಕೂಡ ಅದರಲ್ಲಿ ವಿಕಾಸವನ್ನು ಪಡೆಯಲು ಹಾತೊರೆಯುತ್ತಾರೆ. ಅಂತೆಯೇ ತಾನೊಬ್ಬ ಭಾರತೀಯ ಎನ್ನುವುದನ್ನು ಎಂತಹ ಸಂದರ್ಭದಲ್ಲಿ ಮರೆಯಲಾರದ ಕವಿಯಾದ ಇವರು ಶ್ರದ್ಧೆಯಲ್ಲಿ ಭಾವುಕತೆಯಲ್ಲಿ ಭಾವುಕತೆ ಮತ್ತು ವೈಚಾರೀಕತೆಯಲ್ಲಿ ಹಾಗೂ ವಾಸ್ತವ ಪ್ರಜ್ಞೆಗಳಲ್ಲಿ ವಿವೇಕ ಶಾಲಿಗಳೇ ಸರಿ ಅಂತೆಯೇ ವಾಸ್ತವ ಪ್ರಜ್ಞೆಯ ಧಾರ್ಮಿಕ ಮತ್ತು ಸಾಮಾಜಿಕ ರಾಜಕೀಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಬದುಕಿನಲ್ಲಿ ಮೂಡಿರುವ ಸಾಮಾಜಿಕ ಕಳಕಳಿ ಇಲ್ಲಿ ಬಿಂಬಿತವಾಗಿದೆ ಗುಡಿ, ಚರ್ಚಿನ ಗಣಗಣ ಗಂಟೆ ಎನ್ನುವಾಗ ಇಲ್ಲಿ ಮಸೀದಿಯನ್ನು ಉಲ್ಲೇಖಿಸುವುದಿಲ್ಲ. ಆದರೆ ಕುವೆಂಪು

ಅದಕ್ಕೆ ಆಸ್ಪದ ಕೊಡುತ್ತಾರೆ. ಧರ್ಮಾಂಧಕಾರದಲ್ಲಿ ಮುಳುಗಿರುವ ಸಮಾಜಕ್ಕೆ "ಮಗು ಅಳುವ ಕೂಗು ಕೇಳುತ್ತಿಲ್ಲ" ಎನ್ನುವಲ್ಲಿ ಕವಿಯ ಸಾಮಾಜಿಕ ಮತ್ತು ವಾಸ್ತವ ಪ್ರಜ್ಞೆಯ ಸೂಕ್ಷ್ಮತೆ ಹೊರ ಹೊಮ್ಮಿರುವುದನ್ನು ಗಮನಿಸಬೇಕು.

ಆಳುವ ವರ್ಗದ ಭರವಸೆಯ ಭಾಷಣವನ್ನು ಹಲವೆಡೆ ಅಣೆಕಟ್ಟೆ ನಿರ್ಮಾಣದ ಯೋಜನೆಗಳನ್ನು ರೂಪಿಸುವ ಆಳುವ ವರ್ಗದ ಹುಸಿಯ ಆಶಾಭಾವನೆಯನ್ನು ವಿಮರ್ಶಾತ್ಮಕವಾಗಿ ಪ್ರಶ್ನಿಸುತ್ತಾ "ಬೆಳದದ್ದೇನು ಬರಿ ಹಸಿವೇ?" ಎಂದು ವಿಮರ್ಶಿಸಿದ್ದಾರೆ.

ಸಾಮಾಜಿಕ ವಾಸ್ತವತೆಗೆ, ಸಾಂಸ್ಕೃತಿಕ ಪಲ್ಲಟಗಳಿಗೆ ವೈಚಾರಿಕ ಪ್ರಜ್ಞೆಯ ಮೂಲಕ ಅಭಿವ್ಯಕ್ತಿ ನೀಡುತ್ತಾ ತನ್ನ ಕಾವ್ಯದ ಬಗೆಗೆ ಮತ್ತು ಅದರ ಹೊರ ಹೊಮ್ಮುವಿಕೆಯ ಬಗೆಗೆ ಕವಿಯು ಖಚಿತವಾದ ನಿಲುವನ್ನು ಹೊಂದಿದ್ದಾರೆ. ಏಕೆಂದರೆ ಲೋಕವನ್ನು ಬಿಟ್ಟು ಕಾವ್ಯ ಬರಲಾರದು ಆದ್ದರಿಂದ ಲೋಕದೊಂದಿಗೆ ಬೆಳೆದ ಕವಿಯ ಅನುಭವ ಕವಿತೆಯ ಒಳಗೆ ದಾಖಲಾಗುತ್ತದೆ ಅಂದರೆ

'ನಮ್ಮವರು ನಮಗಿಲ್ಲ
ನಮಗೆ ನಾವೇ ಎಲ್ಲ
          ಕಟ್ಟಕಡೆಗೆ
ನಂಬಿದವರೇ ನಮಗೆ
ಕಾರುವರು ವಿಷದ ಹೊಗೆ
          ಆಂತರ್ಯದೊಳಗೆ'[1]

ಎಂದು ಹೇಳುವ ಆಟ ಭಾಗದ ಸಮಗ್ರ ಕಾವ್ಯದಲ್ಲಿ ಜಿ.ಎಸ್. ಶಿವರುದ್ರಪ್ಪ ಅಭಿವ್ಯಕ್ತಿಸುವ ಲೋಕದೊಳಗೆ ನಮ್ಮವರಿದ್ದರೂ ನಮ್ಮವರು ನಮಗೆ ಎಂದಿಗೂ ಆಗುವುದಿಲ್ಲ ನಮ್ಮ ಬದುಕಿಗೆ ನಾವೇ ಗುರುವಾಗಬೇಕು ನಂಬಿಕೆ ಎನ್ನುವುದು ಹುಸಿ ಸುಳ್ಳಾಗಿದೆ ಸುಳ್ಳಷ್ಟೇ ಅಲ್ಲದೆ ವಿಷದ ಹೊಗೆಯಾಗಿದೆ ಅದು ಯಾವಾಗಲು ಕಾಣುವುದಿಲ್ಲ ಬದಲಾಗಿ ಆಂತರ್ಯದೊಳಗಿದ್ದು ವಿಷ ಕಾರುತ್ತದೆ. ಇದು ಮಾನವರೆಲ್ಲರೂ ಹುದುಗಿರುವ ಅಸೂಯೆಯ ಭಾವ ಎನ್ನುವುದನ್ನು ಜಿ. ಎಸ್. ಶಿವರುದ್ರಪ್ಪರವರ ಕಾವ್ಯದ ಅನಾವರಣದೊಳಗೆಯೇ ಗಮನಿಸಬಹುದು

'ಹೊಳೆಯಲ್ಲಿ ಮಲಳು ಮುಳುಗಿ
ಸಾಯುತ್ತಿರೆ ದಡದಲಿ
          ನಿಂತು ನಕ್ಕವರು

ಈಜಿ ದಡಕ್ಕೆ ತರಲು
ನಮ್ಮವನು ನೀವೆಂದು
ಬೆನ್ನು ತಟ್ಟುವರು'[12]

ಎನ್ನುವ 'ಆಟ' – 'ಇದು ಲೋಕ ಇದು ಬಾಳು' ಕವಿತೆ ಗಮನಿಸಿದರೆ ಜಾನಪದ ಗಾದೆಯೊಂದು ನೆನಪಿಗೆ ಬರುತ್ತದೆ "ನಮ್ ರಾಗಿ–ಕಲ್ಲಾಡದ್ರೆ ರಾಜ್ಯವೆಲ್ಲಾ ನೆಂಟರು" ಎಂಬ ಮಾತು ಸಾರ್ವಕಾಲಿಕ ಸತ್ಯ ಎಂದು ದ್ಯೋತಕವಾಗುತ್ತದೆ. ಅಂತೆಯೇ ಸಾಮಾಜಿಕ ತಲ್ಲಣಗಳ ಆಲ್ಲೋಚನೆಯೊಂದಿಗೆ ಪ್ರಾಕೃತಿಕ ತಲ್ಲಣವನ್ನು ಯೋಚಿಸುವುದು ಉತ್ತಮವಾಗಿದೆ.

ಯುಗ ಯುಗಳಿಂದ ಬೆತ್ತಲೆಯ ಕತ್ತಲೆಗೆ ಬೆಳಕಿನ ಬಟ್ಟೆ ತೊಡಿಸಿದರೂ ಕತ್ತಲೆಗೆ ಬೆಳಕಿನ ಬಟ್ಟೆ ಸಾಕಾಗಲಾರದು ಎನ್ನುವಲ್ಲಿ ಕವಿಯು ಸಮಾಜದ, ಅಜ್ಞಾನ, ಅಂಧಕಾರ ತುಂಬಿರುವ ಜನಗಳಿಗೆ ಜ್ಞಾನದ, ತಿಳುವಳಿಕೆಯ ಬೆಳಕಿನ ಬಟ್ಟೆ ತೊಡಿಸಿದರೂ ಅದು ಅಪ್ರಯೋಜಕವಾದುದು ಎಂದೇ ಜನತೆಗೆ ಪ್ರಜ್ಞಾವಂತರನ್ನಾಗಿ ಮಾಡುವುದು ಅತ್ಯಂತ ಕಷ್ಟ ಎಂಬುದು ಕವಿತೆಯ ಆಶಯದಲ್ಲೆ ಕವಿ ವ್ಯಕ್ತಪಡಿಸಿರುವುದು ಅತ್ಯಂತ ಮಾರ್ಮಿಕವಾಗಿದೆ.

ಜಿ.ಎಸ್. ಶಿವರುದ್ರಪ್ಪ ರವರು ಪ್ರಕೃತಿ ದರ್ಶನದಲ್ಲಿ ಹೊಸ ನಿಸರ್ಗವನ್ನು ಹುಡುಕದೆ ಹೊಸ ಮನುಷ್ಯನನ್ನು ಹುಡುಕುವಂತದ್ದಾಗಿದೆ ಇವರ ಕಾವ್ಯಪ್ರೇಮ ಮುಕ್ತ ಪ್ರಕೃತಿಯೊಡನೆ ಸಂವಾದಿಸಿರುವುದು ಕವಿತೆಯ ಅನುಭಾವಿಕ ನೆಲೆಗೆಯೊಡ್ಡಿದ ಸ್ಫೂರ್ತಿಯಾಗಿದೆ.

'ಮೂಡಿ ಬಾ, ಮೂಡಿ ಬಾ, ಮೂಡಿ ಬಾರಾ
ನವ ದಿವ್ಯ ದಿನಮಣಿಯೆ ಮೂಡಿ ಬಾರಾ'[13]

ಎನ್ನುವಲ್ಲಿಯೂ ನವ ಚೇತನ ಕ್ಕೆ ಕವಿ ಏಕಾಗ್ರತೆಯನ್ನು ಪಡೆಯುವ ಹಂಬಲ, ಕುವೆಂಪು ಅವರ ದಟ್ಟ ಪ್ರಭಾವ ಬೀರಿರುದನ್ನು ಗುರುತಿಸಬೇಕಾಗಿಲ್ಲ. ಅಂತೆಯೇ ಚೆಲುವು–ಒಲವು ಇವರ ಕಾವ್ಯದ ಪ್ರಧಾನ ತಿರುಳು ಒಲವಿಗೆ ಒಲವೇ ಮದ್ದು ಎಂಬ ತಾತ್ವೀಕರಣದ ನೆಲೆ ಇಲ್ಲಿ ವ್ಯಕ್ತವಾಗಿದೆ. ಕುವೆಂಪು, ಬೇಂದ್ರೆಯವರಂತೆಯೇ ಜಿ.ಎಸ್. ಶಿವರುದ್ರಪ್ಪ ಕೂಡ ಪ್ರಕೃತಿ ಆರಾದಕರೂ ಹೌದು ಶ್ರೀ ಗುರುವಿನಲ್ಲಿ ಶಕ್ತಿಯನ್ನು ಕೋಡುವಂತೆ ಪ್ರಾರ್ಥಿಸುವ ಪರಿ ಪ್ರಮುಖವಾದದ್ದು. ಜೊತೆಗೆ ಚೈತನ್ಯದ ಪ್ರತೀಕತೆಯನ್ನು ಕೂಡ 'ಜಡತೆ'ಯನ್ನು ನಿರಾಕರಿಸುವ ಚೈತನ್ಯದ ಆರಾದನೆಯೂ ಶುದ್ಧವಾಗಿದೆ.

ಕಾವ್ಯ ಸೃಷ್ಟಿ ಕ್ರಿಯೆಯಲ್ಲಿ ತೊಡಗುವ ಕವಿ ಸೃಜನಶೀಲ ಗುಣಗಳಿಂದ ವಿಶಿಷ್ಟವೆನಿಸುತ್ತಾನೆ ಸಮಾಜದಿಂದ ತನ್ನ ಅನುಭವಕ್ಕೆ ತಂದುಕೊಂಡ ಬಹುಮುಖಿ ಆಯಾಮಗಳನ್ನು ಕಾವ್ಯದಲ್ಲಿ ನಿಚ್ಚಳವಾಗಿಯೇ ದಾಖಲಿಸಬಹುದು.

'ನಾನು ಬರೆಯುತ್ತೇನೆ
ಸುಮ್ಮನಿರಲಾರದಕ್ಕೆ
ನನ್ನ ವೇದನೆ ಸಂವೇದನೆಗಳನ್ನು
ನನ್ನ ವೇದನೆ ಸಂವೇದನೆಗಳನ್ನು
ಕ್ರಿಯೆ ಪ್ರಕ್ರಿಯೆಗಳನ್ನು
ದಾಖಲು ಮಾಡುವುದಕ್ಕೆ'[1]

ಇಲ್ಲಿ ಕವಿಗೆ ತಾನು ಶೋದಿಸಿಕೊಳ್ಳುವ ಸ್ವಭಾವ, ನಿಲುವು ಸ್ಪಷ್ಟತೆಯನ್ನು ತಂದುಕೊಡುತ್ತದೆ, ಅಂತೆಯೇ ಸಾರ್ಥಕತೆಯ, ಸಾರ್ವತ್ರಿಕ ವಿಧಾನದ ಸಾಮಾನ್ಯ ಪ್ರಜ್ಞೆ ಕೂಡ ಅಗಾಧತೆಯಲ್ಲಿ ಪೂರ್ಣವಾಗಿದೆ. 'ಕವಿ – ವೇದಾಂತಿ ಹೇಳಿದನು' ಕವನದಲ್ಲೂ ಬದುಕಿನ ಸಾರ್ಥಕತೆಯನ್ನು ಸ್ಪಷ್ಟಪಡಿಸಿದ್ದಾರೆ ಅಂತೆಯೇ "ಒಬ್ಬ ಸೃಜನಶೀಲ ಲೇಖಕ ವಾಸ್ತವವಾಗಿ ತನ್ನ ಬರಹಗಳಲ್ಲೇ ತನ್ನ ನಿಜವಾದ ಆತ್ಮಕತೆಯನ್ನು ಬರೆದುಕೊಂಡಿರುತ್ತಾನೆ" ಎನ್ನುವಲ್ಲಿ ಕವಿತೆಗೆ ತನ್ನ ಬಾಲ್ಯ ಜೀವನದ ಘಟನೆಯು ಕವಿಗೆ ಕವಿತೆಯ ರಚನೆಯ ಸ್ಫೂರ್ತಿಗೆ ಬೆಳಕಾಗಿರುವುದು ಸಮಂಜಸವೆನಿಸುತ್ತದೆ.

ಒಟ್ಟಾರೆ ಜಿ.ಎಸ್. ಶಿವರುದ್ರಪ್ಪರವರು ಲೌಕಿಕ ಅನುಭವ ವಿಶೇಷವನ್ನು ದಾಖಲಿಸುತ್ತಾ, ಅನುಭಾವ ವಿಶೇಷ ಬಲು ಅಪರೂಪವೆಂಬಂತೆ ಕಾಂತಾಸಮ್ಮಿತದಂತೆ ಕಾವ್ಯದ ಪಿಸುಮಾತು ಒಳವಿಗೆ ಮಾತ್ರ ಕೇಳುವಂಥದ್ದು. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರಲ್ಲಿ ಅನುಭವ ವಿಶೇಷವೂ ಇದೆ ಅತಿ ಅಪರೂಪವಾದ ಅನುಭಾವ ವಿಶೇಷವೂ ಇದೆ 'ಕಾವಾರ್ಥ ಚಿಂತನ'ದಲ್ಲಿ ಹೇಳಿರುವಂತೆ 'ಬುದ್ದಿಯ ಮೂಲಕ ಗ್ರಹಿಸಿ, ವಿಶ್ಲೇಷಿಸಿ, ತರ್ಕಬದ್ಧವಾಗಿ ನಿರೂಪಿಸುವ ಕ್ರಮ ಪ್ರಮುಖವಾದ್ದದ್ದಾಗಿದೆ ಅಂತೆಯೇ ಕವಿಯ ಅಂತರ್ ಮನಸ್ಸಿನ ದೃಷ್ಟಿಯನ್ನು ಗಮನಿಸಿದರೆ ನಮಗೆ ಅವರೇ ಬರೆದ ಕವಿತೆ ನೆನಪಾಗುತ್ತದೆ.

"ವಯಸ್ಸಾಗುವುದು ಕವಿಗೆ
ಕವಿತೆಗಲ್ಲ
ಹಲ್ಲು ಹೋಗಿ ಬೆನ್ನುಬಾಗಿ
ಕವಿ ಸಂಜೆಯಾಕಾಶವನ್ನು ಹೊದ್ದು
ಕೆಮ್ಮುತ್ತ ಮೂಲೆಗೆ ಮುದುರಿ ಕೂತಾಗಲೂ
ಕವಿತೆಯ ಮುಖದಲ್ಲಿ
ಆಯಾಸದ ಗುರುತೇ ಇಲ್ಲ

ಆಡುತ್ತವೆ ಕವಿತೆಗಳು
ಕವಿಸುತ್ತ ಅವರಿವರ ಜತೆಯಲ್ಲಿ
ಕೈ ಕೈ ಹಿಡಿದು ಕೆಲ ಕೆಲ ನಗುತ್ತ!
ಒಂದೇ ಸಮನೆ ರೆಕ್ಕೆ ಬಿಚ್ಚಿ ಹಾರುತ್ತವೆ
ಮುಗಿಯದ ಬಯಲಲ್ಲಿ'[5]

ಎನ್ನುವಲ್ಲಿಯೇ ಕವಿತೆಯ ಆಂತರ್ಯದ ನಿಲುವನ್ನು ಕವಿಯ ಆಂತರ್ಯದ ಅಂಶಗಳಲ್ಲೇ ಗಮನಿಸಬಹುದಾಗಿದೆ.

ಟಿಪ್ಪಣಿಗಳು

1. ಆಟ, ಸಮಗ್ರ ಕಾವ್ಯ, ಪುಟ – 49
2. ಆಟ (ಇದು ಲೋಕ ಇದು ಬಾಳು), ಸಮಗ್ರ ಕಾವ್ಯ, ಪುಟ – 49
3. ಸಮಗ್ರ ಕಾವ್ಯ, ಪುಟ – 45
4. ಸಮಗ್ರ ಕಾವ್ಯ, ಪುಟ – 461
5. ಕಾವ್ಯಾಂತರಾಳ – ಜಿ.ಎಸ್.ಎಸ್.

ಪರಾಮರ್ಶನ ಗ್ರಂಥಗಳು

1. ಕಾವ್ಯಾಂತರಾಳ (ಜಿ.ಎಸ್.ಎಸ್.), ಸಂಪಾದನೆ – ಡಾ. ಎಚ್.ಎಸ್. ವೆಂಕಟೇಶಮೂರ್ತಿ, ಡಾ. ಲೋಕೇಶ ಅಗಸನಕಟ್ಟೆ, ಸಾಹಿತ್ಯಸಿರಿ ಪ್ರಕಾಶನ, 2014
2. 'ಸಮಗ್ರ ಸಾಹಿತ್ಯ ಅವಲೋಕನ' (ಜಿ.ಎಸ್.ಎಸ್.), ಸಂಪಾದನೆ : ಡಾ. ಸಿ.ಬಿ. ಹೊನ್ನುಸಿದ್ಧಾರ್ಥ, 2013, ಪ್ರಸಾರಾಂಗ ಮತ್ತು ಮುದ್ರಣಾಲಯ, ಬೆಂಗಳೂರು.
3. ಕನ್ನಡ ಸಾಹಿತ್ಯ ಚರಿತ್ರೆ, ರಂ. ಶ್ರೀಮುಗಳಿ, ಮೈಸೂರು, 1962.
4. 'ಕನ್ನಡ ಸಾಹಿತ್ಯದ ಇತಿಹಾಸ' – ರಂ. ಶ್ರೀಮುಗಳಿ, ಸಾಹಿತ್ಯ ಅಕಾಡೆಮಿ, 1963.
5. ಕರ್ನಾಟಕದ ಕವಯಿತ್ರಿಯರು – ಸರೋಜಿನಿ ಮಹಿಷಿ, ಧಾರವಾಡ, 1965.
6. ಯುಗಧರ್ಮ ಮತ್ತು ಸಾಹಿತ್ಯದರ್ಶನ – ಕೀರ್ತಿನಾಥ ಕುರ್ತಕೋಟಿ, ಧಾರವಾಡ, 1962
7. ಸಾಹಿತ್ಯ ಮತ್ತು ವಿಮರ್ಶೆ – ದ.ರಾ. ಬೇಂದ್ರೆ, ಧಾರವಾಡ, 1949.
8. ಸಾಹಿತ್ಯ ವಿಮರ್ಶೆ – ಡಾ. ಸಿ.ಎನ್. ರಾಮಚಂದ್ರನ್, ಕರ್ನಾಟಕ ಸಾಹಿತ್ಯ ಅಕಾಡೆಮಿ, 1989
9. ಸಾಹಿತ್ಯ ಮೀಮಾಂಸೆಯ ಮೂಲತತ್ವಗಳು – ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪ್ರಸಾರಾಂಗ, ಮೈಸೂರು, 1987.
10. ಪಾಶ್ಚಾತ್ಯ ಕಾವ್ಯಮೀಮಾಂಸೆ – ವಿ.ಎಂ. ಇನಾಂದಾರ್, 1982.
11. ಪಾಶ್ಚಾತ್ಯ ಕಾವ್ಯ ತತ್ವಗಳು – ಡಾ. ಎಂ.ಬಿ. ಕೊಟ್ರಶೆಟ್ಟಿ, 1982, ಸಿರಿಗನ್ನಡ ಪ್ರಕಾಶನ, ಧಾರವಾಡ.
12. ಕಾವ್ಯಾರ್ಥ ಚಿಂತನ – ಜಿ.ಎಸ್. ಶಿವರುದ್ರಪ್ಪ, 1982, ಶಾರದಾ ಪ್ರಕಾಶನ, ಬೆಂಗಳೂರು.
13. ಸಾರ್ವತ್ರಿಕದೆಡೆಗೆ – ಡಾ. ಬಿ.ಎನ್. ಸುಮಿತ್ರಾಬಾಯಿ, 1982, ಮಾನವ ಪ್ರಕಾಶನ, ಬೆಂಗಳೂರು
14. ತೌಲನಿಕ ಕಾವ್ಯ ಮೀಮಾಂಸೆ – ಡಾ. ಎಚ್. ತಿಪ್ಪೇರುದ್ರಸ್ವಾಮಿ, 1995, ಡಿ.ವಿ.ಕೆ.ಮೂರ್ತಿ, ಮೈಸೂರು

15. ಕನ್ನಡ ಸಾಹಿತ್ಯ ಚರಿತ್ರೆ – ಒಂದು ಸಮೀಕ್ಷೆ – ತ.ಸು. ಶಾಮರಾಯ, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು

16. ಅವಲೋಕನ – ಸಂ. ಎಚ್ಚೆಸ್ಕೆ, 1985, ವಿಶ್ವಕನ್ನಡ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

17. ಸಾಲು ದೀಪಗಳು – ಸಂ.: ಜಿ.ಎಸ್. ಸಿದ್ಧಲಿಂಗಯ್ಯ, ಎಂ.ಎಚ್. ಕೃಷ್ಣಯ್ಯ, 1990, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

18. ಕನ್ನಡ ಕೈಪಿಡಿ ಸಂಪುಟ 1, ಪ್ರಧಾನ ಸಂಪಾದಕರು, ಕೆ.ವಿ. ಪುಟ್ಟಪ್ಪ, 1987, ಮೈಸೂರು ವಿಶ್ವವಿದ್ಯಾಲಯ, ಮೈಸೂರು

19. ಸಮಗ್ರ ಗದ್ಯ ಸಂಪುಟ 1, 2, 3 – 2010, ಜಿ.ಎಸ್.ಎಸ್., ಕನ್ನಡ ಸಂಸ್ಕೃತಿ ಇಲಾಖೆ

20. ನೂರಾರು ಕವಿತೆಗಳು, 2010, ಸಾಹಿತ್ಯ ಪರಿಷತ್ತು, ಬೆಂಗಳೂರು

21. ಶಕ್ತಿಶಾರದೆಯ ಮೇಳ, ಡಿ.ಆರ್. ನಾಗರಾಜ್

21. ಭಾರತೀಯ ಕಾವ್ಯಮೀಮಾಂಸೆ – ಪ್ರೊ. ತೀ.ನಂ. ಶ್ರೀಕಂಠಯ್ಯ, 2014, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

22. ಆಯ್ದ ವಿಮರ್ಶೆ (ಕೆಲವು ವಿಮರ್ಶಾ ಲೇಖನಗಳು), 2015, ಸಂಪಾದಕರು : ನ. ರವಿಕುಮಾರ್, ಅಭಿನವ ಪ್ರಕಾಶನ, ಬೆಂಗಳೂರು.